ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 15 | ಸಂಚಿಕೆ 47 | ನವೆಂಬರ್ 15–21, 2021 | ಪುಟ 16 | ರೂ. 10

https://janashakthi.wordpress.com e-mail : js_weekly@yahoo.com

01-12 NOV 2021
GLASGOW

COP26

IN PARTNERSHIP WITH ITALY

ಹವಾಮಾನ ಬದಲಾವಣೆ ಮತ್ತು ಭಾರತ



‘ಜನತೆಯನ್ನು ಉಳಿಸಿ ದೇಶ ಉಳಿಸಿ’

ಕಾರ್ಮಿಕರ ರಾಷ್ಟ್ರೀಯ ಸಮಾವೇಶದ ರಣ ಕಹಳೆ



ಸರ್ಕಾರಿ ಸ್ವಾಮ್ಯದಲ್ಲಿ ಮೈಷುಗರ್ ಉಳಿಸಿದ ಸಫಲ ಹೋರಾಟ



ಬಿಜೆಪಿ ಅಧಿವೇಶನದಲ್ಲಿ ಭೋಪರಾಕ್



ಬಿರುಗಾಳಿ ಎಬ್ಬಿಸಿದ ಬಿಟ್ ಕಾಯಿನ್ ಹಗರಣ

ಬಜೆಟ್ ಅಧಿವೇಶನದ ವೇಳೆಯಲ್ಲಿ 2 ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ

"ಜನತೆಯನ್ನು ಉಳಿಸಿ-ದೇಶವನ್ನು ಉಳಿಸಿ"- ಕಾರ್ಮಿಕರ ರಾಷ್ಟ್ರೀಯ ಸಮಾವೇಶದ ರಣಕಹಳೆ

ನವದೆಹಲಿಯ ಜಂತರ್ ಮಂತರ್‌ನಲ್ಲಿ ನವಂಬರ್ 11 ರಂದು ನಡೆದ ಕಾರ್ಮಿಕರ ರಾಷ್ಟ್ರೀಯ ಸಮಾವೇಶ ದೇಶದ ಕಾರ್ಮಿಕರ ಬಹುದಿನಗಳ ಆಗ್ರಹಗಳನ್ನು ಪುನರುಚ್ಚರಿಸುತ್ತ, ರಾಜ್ಯಗಳು, ಜಿಲ್ಲೆಗಳು, ಕಾರ್ಖಾನೆ ಗೇಟ್‌ಗಳು ಪಟ್ಟಣಗಳ ಮಂಡಿಗಳು ಇತ್ಯಾದಿಗಳ ಮೂಲಕ ಜನಸಮೂಹಗಳ ವರೆಗೆ ಈ ಕುರಿತ ಸಂದೇಶವನ್ನು ಒಯ್ದು ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ದುಡಿಯುವ ಜನಗಳನ್ನು ಮತ್ತು ಒಟ್ಟು ಜನತೆಯನ್ನು ಸಿದ್ಧಗೊಳಿಸಿ ಎಂದು ಕಾರ್ಮಿಕರಿಗೆ ಕರೆ ನೀಡಿದೆ.

ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಮತ್ತು ಸ್ವತಂತ್ರ ವಲಯವಾರು ಅಖಿಲ ಭಾರತ ಒಕ್ಕೂಟಗಳು ಮತ್ತು ಸಂಘಗಳ ಜಂಟಿ ವೇದಿಕೆಯ ಮುತುವರ್ಜಿಯಿಂದ ಈ ಸಮಾವೇಶ ನಡೆದಿದೆ.

ಸಮಸ್ತ ಜನತೆಯ ಜೀವನ ಮತ್ತು ಜೀವನೋಪಾಯಗಳನ್ನು ಮತ್ತು ದೇಶದ ಅರ್ಥವ್ಯವಸ್ಥೆಯನ್ನು ವಿನಾಶದ ಅಂಚಿಗೆ ತಂದಿರುವ ಭಾರತ ಸರಕಾರದ ಹತಾಶ ಕಾರ್ಮಿಕ–ವಿರೋಧಿ, ರೈತ–ವಿರೋಧಿ, ಜನ–ವಿರೋಧಿ, ಕಾರ್ಪೊರೇಟ್–ಪರ ಮತ್ತು ರಾಷ್ಟ್ರ–ವಿರೋಧಿ ವಿನಾಶಕಾರೀ ಧೋರಣೆಗಳ ಬಗ್ಗೆ ಸಮಾವೇಶ ಚರ್ಚೆ ನಡೆಸಿತು. ಈಗ ಹೋರಾಟ ಜನಗಳ ಹಕ್ಕುಗಳನ್ನು, ಜೀವ–ಜೀವನೋಪಾಯಗಳನ್ನು ಉಳಿಸಲಿಕ್ಕಷ್ಟೇ ಅಲ್ಲ, ದೇಶದ ಅರ್ಥವ್ಯವಸ್ಥೆಯನ್ನು, ಹಾಗೂ ಸಮಸ್ತ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಮತ್ತು ಇಡೀ ಸಮಾಜವನ್ನು ಅನಾಹುತ ಮತ್ತು ವಿನಾಶದಿಂದ ಉಳಿಸಲಿಕ್ಕಾಗಿ ಕೂಡ. ಆಡಳಿತದಲ್ಲಿರುವ ಸರ್ವಾಧಿಕಾರಶಾಹೀ ಶಕ್ತಿಗಳು ದೇಶೀ ಮತ್ತು ವಿದೇಶೀ ಖಾಸಗಿ ಕಾರ್ಪೊರೇಟ್‌ಗಳ ಸಕ್ರಿಯ ಬೆಂಬಲದಿಂದ ಈ ಅನಾಹುತ ಮತ್ತು ವಿನಾಶದ ಹೂಟವನ್ನು ರಚಿಸಿವೆ ಎಂದು ಸಮಾವೇಶ ವಿಶ್ಲೇಷಿಸಿತು.

ಸಮಾವೇಶದಲ್ಲಿ ಮಾತಾಡಿದ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರು ಕೇಂದ್ರ ಸರಕಾರ ಹೇಗೆ ಕೊವಿಡ್ ಮಹಾಸೋಂಕಿನ ಸನ್ನಿವೇಶವನ್ನು ಕಾರ್ಮಿಕ ಸಂಹಿತೆಗಳು ಮತ್ತು ಕೃಷಿ ಕಾಯ್ದೆಗಳನ್ನು ಬಲವಂತದಿಂದ ಹೇರಲು, ಅದನ್ನನುಸರಿಸಿ ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಉದ್ದಿಮೆಗಳೂ ಸೇರಿದಂತೆ ಎಲ್ಲ ಉದ್ದಿಮೆಗಳ ಎರ್ರಾಬಿರ್ರಿ ಖಾಸಗೀಕರಣದ, ಅವನ್ನು ಮಾರಾಟ ಮಾಡುವ ಅಥವ ಅತ್ಯಂತ ಅಗ್ಗದಲ್ಲಿ ಭೋಗ್ಯಕ್ಕೆ ಕೊಡುವ ಧಾವಂತದಲ್ಲಿದೆ ಎಂಬುದರ ಬಗ್ಗೆ ಹೇಳಿದರು. ಜನಸಾಮಾನ್ಯರ ಮೇಲೆ ಇದರ ದುಷ್ಪರಿಣಾಮಗಳು, ವಿಪರೀತ ಬೆಲೆಯೇರಿಕೆಗಳು, ಯುವಜನರಿಗೆ, ವಿಶೇಷವಾಗಿ ಹಿಂದುಳಿದ ವರ್ಗಗಳವರಿಗೆ ಉದ್ಯೋಗಾವಕಾಶಗಳ ಕೊರತೆಯ ಬಗ್ಗೆ ಕಿಂಚಿತ್ತೂ ಯೋಚಿಸದೆ ಇದು ಸಾಗಿದೆ ಎಂದು ಅವರು ಹೇಳಿದರು.



ಐಎನ್‌ಟಿಯುಸಿಯ ಅಶೋಕ್ ಸಿಂಗ್, ಎಐಟಿಯುಸಿಯ ಅಮರ್ಜಿತ್ ಕೌರ್, ಹೆಚ್‌ಎಂಎಸ್‌ನ ಹರ್ಬಜನ್ ಸಿಂಗ್ ಸಿಧು,, ಸಿಐಟಿಯುನ ತಪನ್ ಸೇನ್, ಎಐಯುಟಿಯುಸಿಯ ಸತ್ಯವಾನ್, ಟಿಯುಸಿಸಿಯ ಜಿ.ದೇವರಾಜನ್, ಎಸ್‌ಇಡಬ್ಲ್ಯುಎನ ಸೋನಿಯಾ ಜಾರ್ಜ್, ಎಐಸಿಸಿಟಿಯುನ ರಾಜೀವ್ ದಿಮ್ರಿ, ಎಲ್‌ಪಿಎಫ್‌ನ ಜೆ.ಪಿ.ಸಿಂಗ್ ಮತ್ತು ಯುಟಿಯುಸಿಯ ಶತ್ರುಜಿತ್ ಸಮಾವೇಶದಲ್ಲಿ ಮಾತನಾಡಿದ ಕಾರ್ಮಿಕ ಮುಖಂಡರು.

ಐಎನ್‌ಟಿಯುಸಿಯ ಸಂಜಯ್ ಸಿಂಗ್, ಎಐಟಿಯುಸಿಯ ಸುಕುಮಾರ್ ದಾಮ್ಲೆ, ಹೆಚ್‌ಎಂಎಸ್‌ನ ರಾಜಾ ಶ್ರೀಧರ್, ಸಿಐಟಿಯುನ ಹೇಮಲತಾ, ಎಐಯುಟಿಯುಸಿಯ ರಮೇಶ ಪರಾಶರ, ಟಿಯುಸಿಸಿಯ ಶಿವಶಂಕರ, ಎಸ್‌ಇಡಬ್ಲ್ಯುಎನ ಫರೀದಾ ಜಲೀಸ್, ಎಐಸಿಸಿಟಿಯುನ ಶೈಲೇಂದ್ರ ಕೆ ಶರ್ಮ, ಎಲ್‌ಪಿಎಫ್‌ನ ಆರ್.ಕೆ.ಮೌರ್ಯ ಮತ್ತು ಯುಟಿಯುಸಿಯ ಬಧ್ರುಲ್ ಹುಸೇನ್ ಅಧ್ಯಕ್ಷತೆಯಲ್ಲಿ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು.



ಸಮಾವೇಶ ನವಂಬರ್ 8 ರಂದು ನಿಧನರಾದ ಎಲ್‌ಪಿಎಫ್‌ನ ಅಧ್ಯಕ್ಷ ವಿ.ಸುಬ್ಬರಾಮನ್ ಮತ್ತು ಕೊವಿಡ್–19 ಅವಧಿಯಲ್ಲಿ ನಿಧನರಾದ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಮುಖಂಡರಿಗೆ, ಸಾರ್ವಜನಿಕ ಜೀವನದ ಪ್ರತಿಷ್ಠಿತ ವ್ಯಕ್ತಿಗಳಿಗೆ ಮತ್ತು ಲಖಿಂಪುರ್ ಖೇರಿ ಘಟನೆ ಸೇರಿದಂತೆ ಕಳೆದ ಒಂದು ವರ್ಷದ ರೈತ ಹೋರಾಟದಲ್ಲಿ ಅಸು ನೀಗಿದ ರೈತರಿಗೆ, ದ್ವೇಷಾಪರಾಧಗಳಿಗೆ ಬಲಿಯಾದವರಿಗೆ ಶ್ರದ್ಧಾಂಜಲಿಗಳನ್ನು ಸಲ್ಲಿಸುವುದರೊಂದಿಗೆ ಆರಂಭವಾಯಿತು.

ಸಂಯುಕ್ತ ಕಿಸಾನ್ ಮೋರ್ಚಾದ ನಿಯೋಗವೂ ಕಾರ್ಮಿಕ ವರ್ಗದೊಂದಿಗೆ ಸೌಹಾರ್ದವನ್ನು ವ್ಯಕ್ತಪಡಿಸಿ ಈ ಸಮಾವೇಶದಲ್ಲಿ ಭಾಗವಹಿಸಿತು.

ಹಲವು ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಚುನಾವಣೆಗಳು ಸಮೀಪಿಸುತ್ತಿರುವುದರಿಂದ ಕೇಂದ್ರ ಸರಕಾರ ತನ್ನ "ಸಾಧನೆ"ಗಳನ್ನು ಪಟ್ಟಿ ಮಾಡಲು ಸರ್ವಪ್ರಯತ್ನ ನಡೆಸುತ್ತಿದೆ. ಆದರೆ ಅವರಿಗೆ ಹಸಿವು ಒಂದು ಪ್ರಮುಖ ಸಾಮಾಜಿಕ ಕೆಡುಕಾಗಿರುವ 106 ದೇಶಗಳನ್ನು ಪಟ್ಟಿ ಮಾಡಿರುವ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತ 101ನೇ ಸ್ಥಾನಕ್ಕೆ ಜಾರಿರುವ ವಾಸ್ತವತೆಯನ್ನು ಮರೆಮಾಚಲು ಸಾಧ್ಯವಿಲ್ಲ.

ಹಿಂದೆಂದೂ ಕಂಡಿರದ ರೀತಿಯಲ್ಲಿ ವಿವಿಧ ವೇಷ ತೊಟ್ಟು ಅಡ್ಡಾಡುತ್ತಿರುವ ಗ್ಯಾಂಗ್‌ಗಳು ಹರಿಯಬಿಟ್ಟಿರುವ ಭಯೋತ್ಪಾದನೆ ಮತ್ತು ದ್ವೇಷ ಮತ್ತು ಸರಕಾರ ಈ ಬಗ್ಗೆ ಕಣ್ಣುಮುಚ್ಚಿಕೊಂಡಿರುವುದು ನಮ್ಮ ಸಾಮಾಜಿಕ ಹಂದರವನ್ನು ಚಿಂದಿ ಮಾಡುತ್ತಿದೆ, ಇದು ನಮ್ಮ ಪ್ರಗತಿಯನ್ನು ಹಲವು ವರ್ಷಗಳಷ್ಟು ಹಿಂದಕ್ಕೆ ತಳ್ಳುತ್ತಿದೆ ಎಂದು ಹೇಳಿರುವ ಸಮಾವೇಶ ಕಾರ್ಮಿಕರ ದೀರ್ಘಕಾಲದ ಆಗ್ರಹಗಳನ್ನು ಪುನರುಚ್ಚರಿಸಿತು.

ಅಂದರೆ, ಕಾರ್ಮಿಕ ಸಂಹಿತೆಗಳನ್ನು ರದ್ದು ಮಾಡಬೇಕು; ಕೃಷಿ ಕಾಯ್ದೆಗಳನ್ನು ಮತ್ತು ವಿದ್ಯುಚ್ಛಕ್ತಿ

ಪುಟ 7 ನೋಡಿ

ಪೆಟ್ರೋಲ್, ಡೀಸೆಲ್ ಬೆಲೆಗಳಲ್ಲಿ ಯಾವುದೇ ಪರಿಹಾರ ಸಿಕ್ಕಿಲ್ಲ

ಕೇಂದ್ರ ಅಬಕಾರಿ ಸುಂಕದಲ್ಲಿ ಪೆಟ್ರೋಲ್ ಮೇಲೆ 5 ರೂ. ಪ್ರತಿ ಲೀಟರ್ ಮತ್ತು ಡೀಸೆಲ್‌ಗೆ 10 ರೂ.ಗಳ ಕಡಿತವನ್ನು ಕೇಂದ್ರ ಸರ್ಕಾರ ಪ್ರಕಟಿಸಿರುವುದು ಕೇವಲ ಸಾಂಕೇತಿಕ ಕಡಿತವಾಗಿದೆ, ಇದು ಜನರಿಗೆ ಯಾವುದೇ ಪರಿಹಾರವನ್ನು ನೀಡುವುದಿಲ್ಲ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ.

ಕೇಂದ್ರ ಅಬಕಾರಿ ಸುಂಕವೇ ಪ್ರತಿ ಲೀಟರ್ ಪೆಟ್ರೋಲ್ ಗೆ 33 ರೂ. ಮತ್ತು ಡೀಸೆಲ್‌ಗೆ 32 ರೂ., ಇದರಲ್ಲಿ ಕೇವಲ 5ರೂ. ಮತ್ತು 10ರೂ. ಕಡಿತ ಅತ್ಯಲ್ಪ. ಇದು ಆರ್ಥಿಕತೆ ಮತ್ತು ಜನರ ಮೇಲಿನ ಇಂಧನ ಬೆಲೆಯ ವಿಪರೀತ ಹೊರೆಯನ್ನು ಕಡಿಮೆ ಮಾಡುವುದಿಲ್ಲ. ಇದು ಬಿಜೆಪಿಗೆ ಕೆಲವು ರಾಜ್ಯಗಳ ಉಪಚುನಾವಣೆಗಳಲ್ಲಿ ದೊರೆತ ಪ್ರತಿಕೂಲ ಫಲಿತಾಂಶಗಳಿಗೆ ತಕ್ಷಣದ ನಿರೀಕ್ಷಿತ ಪ್ರತಿಕ್ರಿಯೆಯಷ್ಟೇ.

ಇಂಧನ ಬೆಲೆಗಳನ್ನು ತರ್ಕಬದ್ಧ ಮಟ್ಟದಲ್ಲಿ ನಿರ್ವಹಿಸುವ ಏಕೈಕ ಮಾರ್ಗವೆಂದರೆ ಅಬಕಾರಿ ಸುಂಕಗಳಲ್ಲಿ ಗಣನೀಯ ಕಡಿತ ಮತ್ತು ಇಂಧನದ ಮೇಲೆ ವಿಧಿಸಲಾದ ವಿಶೇಷ ಉಪಕರ(ಸೆಸ್)ವನ್ನು ತೆಗೆದುಹಾಕುವುದು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯುರೊ ಅಕ್ಟೋಬರ್ ಕೇಂದ್ರ ಸಮಿತಿ ಸಭೆಯ ಕರೆಯಂತೆ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ವಿರುದ್ಧದ ಪ್ರತಿಭಟನೆಯನ್ನು ಮುಂದುವರೆಸುವಂತೆ ತನ್ನ ಎಲ್ಲಾ ಘಟಕಗಳಿಗೆ ಮನವಿ ಮಾಡಿದೆ.

ಹೊಸ ಶಿಕ್ಷಣ ನೀತಿಯ ವಿರುದ್ಧ ಎಸ್‌ಎಫ್‌ಐನ "ಪ್ರತಿರೋಧದ ಉತ್ಸವ"–ನವಂಬರ್ 11 ರಿಂದ 26

ನವಂಬರ್ 11 ರಿಂದ 26 ರ ವರೆಗೆ ಹೊಸ ಶಿಕ್ಷಣ ನೀತಿಯ ವಿರುದ್ಧ ಒಂದು "ಪ್ರತಿರೋಧದ ಉತ್ಸವ"ವನ್ನು ಪೂರ್ಣ ಶಕ್ತಿ ಹಾಕಿ ಆಚರಿಸಬೇಕು ಭಾರತ ವಿದ್ಯಾರ್ಥಿ ಫೆಡರೇಷನ್‌ನ ಕೇಂದ್ರೀಯ ಕಾರ್ಯಕಾರಿ ಸಮಿತಿ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ.

* ನವಂಬರ್ 11 ರಂದು ಹೊಸ ಶಿಕ್ಷಣ ನೀತಿ(ಎನ್‌ಇಪಿ)ಯ ವಿರುದ್ಧ ದೇಶವ್ಯಾಪಿ ಸತ್ಯಾಗ್ರಹದೊಂದಿಗೆ ಇದು ಆರಂಭವಾಗಿದೆ.
* ನವಂಬರ್ 13 ರಂದು ಎಲ್ಲ ರೈಲ್ವೆ ಮತ್ತು ಬಸ್ ನಿಲ್ದಾಣಗಳಲ್ಲಿ ಎನ್‌ಇಪಿ ಮತ್ತು ನೀಟ್ ವಿರುದ್ಧ ಪಿಕೆಟಿಂಗ್ ಮತ್ತು ಕರಪತ್ರ ಹಂಚಿಕೆ ನಡೆಯುತ್ತದೆ.
* ನವಂಬರ್ 14 ಮಕ್ಕಳ ದಿನಾಚರಣೆಯನ್ನು 'ಅಂಗನವಾಡಿ ಉಳಿಸಿ' ದಿನವಾಗಿ ಆಚರಿಸಲಾಗುವುದು.
* ನವಂಬರ್ 15ರಂದು ಕೇಂದ್ರ ಸರಕಾರೀ ಕಚೇರಿಗಳ ಮುಂದೆ ಬೃಹತ್ ಮತ ಪ್ರದರ್ಶನಗಳು ನಡೆಯುತ್ತವೆ.

ಈ ಪ್ರತಿರೋಧದ ಭಾಗವಾಗಿಯೇ ನವಂಬರ್ 19 ರಿಂದ 26 ರ ವರೆಗೆ ರೈತರ ಹೋರಾಟದ ವಾರ್ಷಿಕೋತ್ಸವವನ್ನು ಆಚರಿಸಲಾಗುವುದು ಎಂದು ಎಸ್‌ಎಫ್‌ಐ ಹೇಳಿದೆ.

"ವಿದ್ಯಾರ್ಥಿ–ವಿರೋಧಿ ಹೊಸ ಶಿಕ್ಷಣ ನೀತಿ(ಎನ್‌ಇಪಿ) ಮತ್ತು ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ(ನೀಟ್) ಯನ್ನು ಪ್ರತಿರೋಧಿಸುವ ಪ್ರತಿಜ್ಞೆ ಕೈಗೊಳ್ಳೋಣ. ಎನ್‌ಇಪಿ ಮತ್ತು ನೀಟ್ ನಾವು ಒಂದು ಪ್ರಗತಿಶೀಲ ಸಮಾಜವಾಗಿ ನಂಬಿರುವ ಪ್ರತಿಯೊಂದಕ್ಕೂ ವಿರುದ್ಧವಾಗಿದೆ. ಇದನ್ನು ಏನೇ ಬೆಲೆ ತೆತ್ತಾದರೂ ವಿರೋಧಿಸಲೇ ಬೇಕು. ಪ್ರಸಕ್ತ ಬಿಜೆಪಿ ಸರಕಾರ ಭಿನ್ನಮತದ ದನಿಗಳನ್ನು ಸಹಿಸುವುದಿಲ್ಲ. ಆದರೆ ಸಾರ್ವಜನಿಕ ಶಿಕ್ಷಣವನ್ನು ಫ್ಯಾಸಿಸ್ಟ್ ಮತ್ತು ನವ–ಉದಾರವಾದೀ ಪ್ರಹಾರಗಳಿಂದ ಉಳಿಸಲು, ನಮ್ಮ ಐಕ್ಯ ದನಿಗಳು ಅವರ ಕಿವಿಗಳಲ್ಲಿ ಮಾರ್ದನಿಸುವಂತೆ ಮಾಡುವುದು ಈಗಿನ ಅಗತ್ಯವಾಗಿದೆ ಆಮೂಲಕ



ಅವರು ನಮ್ಮ ಆಗ್ರಹಗಳಿಗೆ ಗಮನ ನೀಡುವಂತೆ ಮಾಡಬೇಕಾಗಿದೆ" ಎಂದಿರುವ ಎಸ್‌ಎಫ್‌ಐ ಪ್ರಧಾನ ಕಾರ್ಯದರ್ಶಿ ಮಯೂಕ್ ಬಿಸ್ವಾಸ್ ಈ ದೇಶವ್ಯಾಪಿ 'ಪ್ರತಿರೋಧದ ಉತ್ಸವ'ದಲ್ಲಿ ಪಾಲ್ಗೊಳ್ಳಬೇಕು ಎಂದು ವಿದ್ಯಾರ್ಥಿ ಸಮುದಾಯಕ್ಕೆ ಮನವಿ ಮಾಡಿದ್ದಾರೆ.

ಸಂಪಾದಕೀಯ

ಆಟೋರಿಕ್ಷಾ ಚಾಲಕರ ದೂಷಣೆ ಸಲ್ಲದು

ಬೆಂಗಳೂರು ಮಹಾನಗರದಲ್ಲಿ ಆಟೋರಿಕ್ಷಾ ಪ್ರಯಾಣ ದರ ಮತ್ತು ಲಗೇಜ್ ಸಾಗಾಟ ದರಗಳನ್ನು ಪರಿಷ್ಕರಿಸಿ ಬೆಂಗಳೂರು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಹೊಸ ಆದೇಶವನ್ನು ಹೊರಡಿಸಿದ್ದು ಹೊಸ ದರಗಳು 2021 ರ ಡಿಸೆಂಬರ್ 1 ರಿಂದ ಜಾರಿಗೆ ಬರಲಿವೆ. ನೂತನ ಕನಿಷ್ಠ ದರವನ್ನು ರೂ. 25 ರಿಂದ ರೂ. 30 ಕ್ಕೆ ಏರಿಕೆ ಮಾಡಲಾಗಿದೆ. ನಂತರದ ಪ್ರತಿ ಕಿಲೋ ಮೀಟರ್‌ಗೆ 12 ರೂ. ಗಳಿದ್ದ ಕನಿಷ್ಠ ದರವನ್ನು 15 ರೂ. ಗಳಿಗೆ ಹೆಚ್ಚಿಸಲಾಗಿದೆ. ಕಾಯುವಿಕೆಯ ದರವನ್ನು ಮೊದಲ 5 ನಿಮಿಷದ ನಂತರ ಪ್ರತಿ ಹದಿನೈದು ನಿಮಿಷಕ್ಕೆ 5 ರೂ.ಯಂತೆ ಪರಿಷ್ಕೃತಗೊಳ್ಳಲಿದೆ. ಲಗೇಜ್ ದರ 20 ಕೆ.ಜಿ. ನಂತರದ ಪ್ರತಿ 20 ಕೆ.ಜಿ.ಗೆ 5 ರೂ. ನೀಡಬೇಕಾಗುವುದು. ರಾತ್ರಿ 10 ಗಂಟೆಯಿಂದ ನಸುಕಿನ 5 ಗಂಟೆ ವರೆಗೆ ಸಾಮಾನ್ಯ ದರ ಮತ್ತು ಸಾಮಾನ್ಯ ದರದ ಅರ್ಧ ಪಟ್ಟು ನೀಡಬೇಕಾಗುವುದು.

ಆಟೋರಿಕ್ಷಾ ಪ್ರಯಾಣ ದರದ ಈ ಪರಿಷ್ಕರಣೆಯಿಂದಾಗಿ ಜನಸಮಾನ್ಯರಿಗೆ, ವಿಶೇಷವಾಗಿ ನಗರದಲ್ಲಿ ತಮ್ಮ ಒಡಾಟಕ್ಕೆ ಆಟೋರಿಕ್ಷಾವನ್ನೇ ಅವಲಂಭಿಸಿರುವ ಕೆಳ ಮಧ್ಯಮ ವರ್ಗದವರಿಗೆ ಆಘಾತವಾಗದೆ ಇರಲಾರದು. ಪೆಟ್ರೋಲ್, ಡೀಸೆಲ್, ಅನಿಲ ಅಲ್ಲದೆ ಎಲ್ಲಾ ಅಗತ್ಯ ವಸ್ತಗಳ ಬೆಲೆಗಳು ಗಗನಕ್ಕೇರಿರುವಾಗ ಆಟೋ ರಿಕ್ಷಾ ಪ್ರಯಾಣ ದರಗಳನ್ನೂ ಹೆಚ್ಚಿಸಲಾಗಿದೆ. ರಿಕ್ಷಾ ಪ್ರಯಾಣ ದರಗಳ ಹೆಚ್ಚಳವಾದಾಗೆಲ್ಲ ಆಟೋರಿಕ್ಷಾ ಚಾಲಕರು ಸಾರ್ವಜನಿಕರಿಂದ ಸಹಜವಾಗಿ ದೂಷಣೆಗೆ ಒಳಗಾಗುತ್ತಾರೆ.

ಆದರೆ ಆಟೋರಿಕ್ಷಾ ಚಾಲಕರು ಸಹ ನಮ್ಮ ಹಾಗೆಯೇ ಮನುಷ್ಯರು, ನಮ್ಮ ಹಾಗೆಯೇ ಕುಟುಂಬಸ್ಥರು ನಮ್ಮ ಹಾಗೆಯೇ ಬೆಲೆ ಏರಿಕೆಯ ಬಿಸಿಗೆ ಬಲಿಯಾಗಿ ನರಳುವವರು ಎಂಬುದನ್ನು ನಾವು ಸುಲಭವಾಗಿ ಮರೆತು ಬಿಡುತ್ತೇವೆ. ಅವರೆಲ್ಲರೂ ಬೆಂಗಳೂರು ಸುತ್ತಲಿನ ಹಳ್ಳಿಗಳಿಂದ ಅಥವ ದೂರದ ಜಿಲ್ಲೆಗಳಿಂದ ಹೊಟ್ಟೆಪಾಡಿಗಾಗಿ ಬೆಂಗಳೂರಿಗೆ ಬಂದವರು. ಸಾಲಸೋಲ ಮಾಡಿ ಒಂದು ಆಟೋರಿಕ್ಷಾ ಪಡೆದು ಬಾಡಿಗೆಗೆ ಓಡಿಸುವವರು. ಇವರಿಗೆ ಬಹುತೇಕವಾಗಿ ಸ್ವಂತ ಮನೆಗಳಿರುವುದಿಲ್ಲ. ಬಾಡಿಗೆ ಮನೆಗಳಲ್ಲಿ ದಿನದೂಡುತ್ತಿರುತ್ತಾರೆ. ಸಂಪಾದನೆ ಮಾಡಿದ ಹಣದಲ್ಲಿ ದೊಡ್ಡ ಭಾಗ ಮನೆಬಾಡಿಗೆಗಾಗಿ ವಿನಿಯೋಗಿಸುವವರು. ಮಕ್ಕಳ ವಿದ್ಯಾಭ್ಯಾಸ, ವೃದ್ಧರ ಆರೈಕೆ, ಕಾಯಿಲೆ ಬಿದ್ದ ಕುಟುಂಬದ ಸದಸ್ಯರಿಗೆ ಚಿಕಿತ್ಸೆ, ಆಟೋರಿಕ್ಷಾದ ರಿಪೇರಿ, ದುಬಾರಿ ಎಲ್‌ಪಿಜಿ ಗ್ಯಾಸ್ ಹಾಗೂ ಬಿಡಿಭಾಗಗಳನ್ನು ಇವರು ಕೊಳ್ಳಬೇಕಾಗುವುದು. ಒಬ್ಬ ಆಟೊ ರಿಕ್ಷಾ ಚಾಲಕನ ಜೀವನ ನಿರ್ವಹಣೆ ಚಿಂತಾಜನಕಗೊಳಿಸುತ್ತದೆ.

ಒಬ್ಬ ಆಟೋರಿಕ್ಷಾ ಚಾಲಕ ನಮ್ಮ ಹಿತಚಿಂತಕ. ಬೆಳಿಗ್ಗೆ ಅದೆಷ್ಟೊ ಬೇಗ ಹೊಟ್ಟೆಗೆ ಏನನ್ನೂ ತಿನ್ನದೆ ಆತ ಮೂರು ಚಕ್ರಗಳ ಮೇಲೆ ಒಡುತ್ತಾನೆ. ಬಸ್ ನಿಲ್ದಾಣದಲ್ಲಿ, ರೈಲು ನಿಲ್ದಾಣದಲ್ಲಿ ಮತ್ತು ಕೆಲವೊಮ್ಮೆ ವಿಮಾನ ನಿಲ್ದಾಣದಲ್ಲಿ ನಮ್ಮ ಬರುವಿಕೆಯನ್ನು ಎದುರು ನೋಡುತ್ತಾನೆ. ಕೆಲವೊಮ್ಮೆ ಯಾವ ಪ್ರಯಣಿಕನೂ ಸಿಗದೆ ನಿರಾಶನಾಗುತ್ತಾನೆ. ಮನೆಯಲ್ಲಿ ಇನ್ನೂ ಎದ್ದಿರದ ತನ್ನ ಮಕ್ಕಳನ್ನು ನೆನೆಸುತ್ತಾನೆ. ಇಡೀ ದಿನ ಆಟೋರಿಕ್ಷಾವನ್ನು ಇಲ್ಲಿಂದತ್ತ ಅಲ್ಲಿಂಇತ್ತ ಓಡಿಸಿ ಸುಸ್ತಾಗುತ್ತಾನೆ. ಮರಳಿ ಮನೆಗೆ ಬಂದಾಗ ರಾತ್ರಿಯಾಗಿರುತ್ತದೆ. ಅಪ್ಪನಿಗಾಗಿ ಕಾದು ಕಾದು ಮಕ್ಕಳು ನಿದ್ದೆಗೆ ಜಾರಿರುತ್ತಾರೆ. ಈತ ಸಮಾಜಕ್ಕೆ ಸಲ್ಲಿಸುವ ಸೇವೆಯನ್ನು ಗಮನಿಸುವವರಿಲ್ಲ, ಮೆಚ್ಚುಗೆ ವ್ಯಕ್ತಪಡಿಸುವವರಿಲ್ಲ. ಅವನು ತನ್ನ ಶ್ರಮಕ್ಕೆ ಸಲ್ಲಬೇಕಾದ ಪ್ರತಿಫಲ ಕೇಳುವಾಗ ದೂಷಣೆಗೆ ಒಳಗಾಗುತ್ತಾನೆ.

ಆಟೋರಿಕ್ಷಾ ಚಾಲಕರು ಸಾಮೂಹಿಕ ಚೌಕಾಸಿಯ ಶಕ್ತಿ ಇಲ್ಲದವರು. ಸಂಘಟಿತರಾಗಿ ತನ್ನ ಹಕ್ಕನ್ನು ಕೇಳಲು ಆತನಿಗೆ ಸಮಯವಿಲ್ಲ. ಹಾಗೇನಾದರೂ ಮಾಡಲು ಆತ ಮುಂದಾದರೆ "ನಿನಗೇಕೆ ಬೇಕು ರಾಜಕೀಯ" ಎಂದು ಮೂದಲಿಸುತ್ತಾರೆ. ಎಂಟು ವರ್ಷಗಳ ನಂತರವಷ್ಟೇ ಬೆಂಗಳೂರಿನಲ್ಲಿ ಆಟೋರಿಕ್ಷಾ ಪ್ರಯಾಣ ದರಗಳ ಪರಿಷ್ಕರಣೆ ಆಗಿರಲಿಲ್ಲ. ಈ ಅವಧಿಯಲ್ಲಿ ಹೊಸ ವಾಹನದ ಮುಖ ಬೆಲೆ, ಸಾರಿಗೆ ಇಲಾಖೆಯ ಶುಲ್ಕಗಳು, ಇಂಧನ ಹಾಗೂ ಎಲ್‌ಪಿಜಿ ಗ್ಯಾಸ್ ದರ ಮೊದಲಾದವುಗಳು ಏರಿಕೆ ಕಂಡಿವೆ ಕೊರೊನಾ ಸಾಂಕ್ರಾಮಿಕದ ಅವಧಿಯಲ್ಲಿ ಆಟೋರಿಕ್ಷಾ ಚಾಲಕರು ಲಾಕ್‌ಡೌನ್ ಕಾರಣದಿಂದ ಜೀವನ ನಿರ್ವಹಣೆಗೆ ಬಹಳ ತೊಂದರೆ ಅನುಭವಿಸಿದ್ದಾರೆ. ಮಂಗಳೂರು ಹಾಗೂ ಉಡುಪಿ ನಗರಗಳಲ್ಲಿ ಈಗಾಗಲೇ ದರ ಹೆಚ್ಚಳ ಮಾಡಲಾಗಿದೆ. ಹೀಗಾಗಿ ಬೆಂಗಳೂರು ಆಟೋರಿಕ್ಷಾ ಚಾಲಕರ ಸಂಘಗಳು ಮನವಿ ಸಲ್ಲಿಸಿ ಅಧಿಕಾರಿಗಳೊಂದಿಗೆ ಚರ್ಚೆಮಾಡಿ ಕೊನೆಗೂ ದರಗಳನ್ನು ಪರಿಷ್ಕರಿಸಿಕೊಂಡಿದ್ದಾರೆ. ಚಾಲಕರಿಗೆ ಈ ಹೆಚ್ಚಳ ತೃಪ್ತಿ ತಂದಿಲ್ಲ. ಅವರು ಕೇಳಿದ್ದು ರೂ. 18 ಈಗ ನಿಗಧಿಯಾಗಿರುವುದು ಕೇವಲ ರೂ. 15.

ಆಟೊ ಚಾಲಕರಲ್ಲಿ ಬಹುತೇಕ ಮಂದಿ ದರಗಳ ಏರಿಕೆಯನ್ನು ಬಯಸುವುದಿಲ್ಲ. ಅದರಿಂದ ಜನ ಸಾಮಾನ್ಯರಿಗೆ ಹೊರೆಯಾಗುತ್ತದೆ ಎಂದೂ ಜನರು ಆಟೋರಿಕ್ಷಾ ಪ್ರಯಾಣವನ್ನು ಕಡಿಮೆ ಮಾಡಿಕೊಳ್ಳುತ್ತಾರೆ ಎಂಬ ಆತಂಕ ಅವರಿಗಿದೆ. ಅದರ ಬದಲಾಗಿ ಎಲ್‌ಪಿಜಿ ಗ್ಯಾಸ್ ದರಗಳನ್ನು ಸರ್ಕಾರ ಇಳಿಸಬೇಕೆಂದು ಅವರು ಒತ್ತಾಯಿಸುತ್ತಾರೆ. ಇತ್ತೀಚೆಗೆ ಅವರು ಆಟೋರಿಕ್ಷಾಗಳಿಗೆ ಬಳಸುವ ಎಲ್‌ಪಿಜಿ ದರ ಏರಿಕೆಯನ್ನು ಖಂಡಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದರು. ಕೇಂದ್ರ ಸರ್ಕಾರದ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಕಳೆದ ವರ್ಷ ಎಲ್‌ಪಿಜಿ ಪ್ರತಿ ಕೆ.ಜಿ.ಗೆ ರೂ. 38 ಆಗಿತ್ತು. ಇದೀಗ ದರವನ್ನು ರೂ. 66 ಕ್ಕೆ ಏರಿಸಲಾಗಿದೆ. ದಿನದಿಂದ ದಿನಕ್ಕೆ ದರ ಏರಿಕೆ ಮಾಡುವ ಮೂಲಕ ಕೇಂದ್ರ ಸರ್ಕಾರ ಬಡ ಆಟೋರಿಕ್ಷಾ ಚಾಲಕರ ಹೊಟ್ಟೆ ಮೇಲೆ ಹೊಡೆಯುತ್ತಿದೆ. ಪ್ರಧಾನಿ ಮೋದಿಯವರು ಜನವಿರೋಧಿ ಸರ್ಕಾರ ನಡೆಸುತ್ತಿದ್ದಾರೆ. ಬಡವರು ಮತ್ತು ಬಡ ಆಟೋರಿಕ್ಷಾ ಚಾಲಕರ ಬಗ್ಗೆ ಅವರಿಗೆ ಕನಿಷ್ಠ ಕನಿಕರ ಇದ್ದರೆ ಕೂಡಲೇ ಎಲ್‌ಪಿಜಿ ದರವನ್ನು ಇಳಿಸಲಿ ಎಂದು ಅವರು ಸವಾಲು ಹಾಕಿದರು.

ಕೆಲವು ಚಾಲಕರು ಪ್ರಯಾಣಿಕರಿಂದ ನಿಗದಿತ ದರಕ್ಕಿಂತ ಹೆಚ್ಚಿಗೆ ದರ ವಸೂಲಿ ಮಾಡಿ ತೊಂದರೆ ಕೊಡುತ್ತಿದ್ದಾರೆ. ಅವರು ಹಾಗೆ ಯಾಕೆ ಮಾಡುತ್ತಾರೆ? ಯಾಕೆಂದರೆ ಅವರ ಗಳಿಕೆ ಅವರ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ಆದಾಯಕ್ಕಿಂತ ಖರ್ಚೆ ಹೆಚ್ಚು. ಸರ್ಕಾರದಿಂದ ಯಾವುದೇ ಪ್ರೋತ್ಸಾಹವಿಲ್ಲ. ಅವರಿಗೆ ವಾಸಕ್ಕೆ ಮನೆಗಳನ್ನು ಒದಗಿಸುವ ಕಾರ್ಯಕ್ರಮವಿಲ್ಲ. ಚಾಲಕರ ಮಕ್ಕಳಿಗೆ ಉಚಿತ ಶಿಕ್ಷಣ ಒದಗಿಸಲು ಸರ್ಕಾರದ ಯೋಜನೆ ಇಲ್ಲ. ವಾಹನದ ಬಿಡಿ ಭಾಗಗಳನ್ನು ರಿಯಾಯ್ತಿ ದರಗಳಲ್ಲಿ ಒದಗಿಸಲು ಸರ್ಕಾರಕ್ಕೆ ಯಾವುದೇ ಆಸಕ್ತಿ ಇಲ್ಲ. ಕೇಂದ್ರ ಸರ್ಕಾರ ಹೇಗೋ ಹಾಗೆ ರಾಜ್ಯ ಸರ್ಕಾರ. ಸಾರಿಗೆ ನಿಯಮಗಳನ್ನು ಆಕಸ್ಮಿಕವಾಗಿ ಉಲ್ಲಂಘಿಸಿದರೆ ಪೊಲೀಸರ ಕಿರುಕುಳ ಮಾತ್ರ ತಪ್ಪಿದಲ್ಲ.

ನಮ್ಮ ಮೆಟ್ರೋ ಸಂಚಾರ ಕಾಲಾವಧಿ ವಿಸ್ತರಿಸಿ: ಸಿಪಿಐ(ಎಂ)

ಕೋವಿಡ್–19 ಲಾಕ್ಡೌನ್ ಹಾಗೂ ರಾತ್ರಿ ಕರ್ಫ್ಯೂ ತೆರವಾಗಿರುವ ಹಿನ್ನೆಲೆಯಲ್ಲಿ ಮೆಟ್ರೋ ಸಂಚಾರ ಕಾಲಾವಧಿಯನ್ನು ಬೆಳಿಗ್ಗೆ 5 ರಿಂದ ರಾತ್ರಿ 12.00 ರವರೆಗೆ ವಿಸ್ತರಿಸಿ ಪ್ರಯಾಣಿಕರ ಓಡಾಟಕ್ಕೆ ಅನುವು ಮಾಡಿಕೊಡ ಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ), ಬೆಂಗಳೂರು ಉತ್ತರ ಮತ್ತು ದಕ್ಷಿಣ ಜಿಲ್ಲಾ ಸಮಿತಿಗಳು ಒತ್ತಾಯಿಸಿವೆ. ಇದರಿಂದ ಪ್ರಯಾಣಿಕರಿಗೆ ಮತ್ತು ನಮ್ಮ ಮೆಟ್ರೋ ಸಂಸ್ಥೆಗೆ ಪ್ರಯೋಜನವಾಗಲಿದೆ ಎಂದು ಸಿಪಿಐ(ಎಂ) ಒತ್ತಾಯಿಸಿದೆ. ಬೆಂಗಳೂರಿನ ವ್ಯಾಪಾರ ವಹಿವಾಟು ಮತ್ತು ಕೈಗಾರಿಕೆಗಳ ನೌಕರರಿಗೆ ಇದರಿಂದ ಅನುಕೂಲವಾಗಲಿದೆ. ಆದಕಾರಣ ಕೂಡಲೇ ಮೆಟ್ರೋ ಸಂಚಾರ ಕಾಲಾವಧಿಯನ್ನು ವಿಸ್ತರಿಸಲು ರಾಜ್ಯ ಸರ್ಕಾರವು ಅಗತ್ಯ ಕ್ರಮವಹಿಸಬೇಕೆಂದು ಸಿಪಿಐ(ಎಂ) ಕೋರಿದೆ.

ಬಿಬಿಎಂಪಿ ಅಕ್ರಮ ಶುಲ್ಕ ಸಂಗ್ರಹ ಹಿಂತಿರುಗಿಸಲು ಸಿಪಿಐ(ಎಂ) ಒತ್ತಾಯ:

ಬಿಬಿಎಂಪಿ ಬೈಲಾ ಅಡಿ ಕಾನೂನು ರೂಪಿಸದೆ ವಿವಿಧ ರೀತಿಯ ಅಭಿವೃದ್ಧಿ ಶುಲ್ಕ ಮತ್ತಿತರೆ ಶುಲ್ಕಗಳ ಹೆಸರಿನಲ್ಲಿ ಸಂಗ್ರಹಿಸಿರುವ 2000 ಕೋಟಿ ರೂಗಳ ಶುಲ್ಕವು ಅಕ್ರಮ ಹಾಗೂ ಕಾನೂನು ಬಾಹಿರವೆಂದು ರಾಜ್ಯ ಉಚ್ಚ ನ್ಯಾಯಾಲಯವು ತೀರ್ಪು ನೀಡಿರುವ ಹಿನ್ನೆಲೆಯಲ್ಲಿ ಸದರಿ ಹಣವನ್ನು ಪಾವತಿಸಿರುವ ನಾಗರೀಕರಿಗೆ ಹಿಂತಿರುಗಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ. ಶಾಸನ ಹಾಗೂ ನಿಯಮಾವಳಿಗಳನ್ನು ರೂಪಿಸುವುದು ಚುನಾಯಿತ ಸರ್ಕಾರದ ಸಂವಿಧಾನದತ್ತ ಕರ್ತವ್ಯವಾಗಿದೆ. ಚುನಾಯಿತ ಸರ್ಕಾರವು ತನ್ನ ಕರ್ತವ್ಯವನ್ನು ನಿರ್ವಹಿಸದೆ ಶಾಸನಾತ್ಮಕ ಬೆಂಬಲವಿರದ ಶುಲ್ಕ ಸಂಗ್ರಹಕ್ಕೆ ಅನುವುಗೊಳಿಸಿ ಇದೀಗ ಉಚ್ಚ ನ್ಯಾಯಾಲಯದ ತೀರ್ಪಿನ ನಂತರವು ಶಾಸನ ರೂಪಿಸಿ ಅಕ್ರಮ ಶುಲ್ಕ ಸಂಗ್ರಹವನ್ನು ಸಕ್ರಮ ಮಾಡಿಕೊಳ್ಳಲು ಹೊರಟಿರುವ ರಾಜ್ಯ ಬಿಜೆಪಿ ಸರ್ಕಾರದ ಕ್ರಮವನ್ನು ಸಿಪಿಐ(ಎಂ) ತೀವ್ರವಾಗಿ ಖಂಡಿಸಿದೆ. ಸಂವಿಧಾನದತ್ತ ಕಾನೂನಿನ ಆಳ್ವಿಕೆಯನ್ನು ಸೈದ್ಧಾಂತಿಕವಾಗಿ ನಿರಾಕರಿಸುವ ಬಿಜೆಪಿಯ ತಾತ್ವಿಕ ನೆಲೆಗೆ ಅನುಗುಣವಾಗಿ ಇಂತಹ ಅಕ್ರಮ ಹಾಗೂ ಕಾನೂನು ಬಾಹಿರ ಶುಲ್ಕ ಸಂಗ್ರಹವನ್ನು ಸಕ್ರಮ ಮಾಡಿಕೊಳ್ಳಲು ಹೊರಟಿರುವುದು ಅಕ್ಷಮ್ಯ ಎಂದು ಸಿಪಿಐ(ಎಂ) ಬಣ್ಣಿಸಿದೆ. 2000 ಕೋಟಿ ರೂಗಳನ್ನು ಸಂದಾಯಿಸಿದ ನಾಗರೀಕರಿಗೆ ಹಿಂದಿರುಗಿಸದೆ ಅದನ್ನು ಕಾನೂನು ಬದ್ಧಗೊಳಿಸುವ ಹಿನ್ನೆಲೆಯಲ್ಲಿ ಪೂರ್ವಾನ್ವಯಗೊಳಿಸುವ ಕಾನೂನು ರೂಪಿಸುವುದು ಬಿಜೆಪಿ ಸರ್ಕಾರದ ನಾಗರೀಕ ಸುಲಿಗೆ ಮಾಡುವ ಕ್ರಮವಾಗಿದೆ ಎಂದು ಸಿಪಿಐ(ಎಂ) ಖಂಡಿಸಿದೆ.

ಬಿಬಿಎಂಪಿ 828 ಕೋಟಿ ರೂಗಳ ದುರ್ಬಳಕೆ ತಪ್ಪಿತಸ್ಥರ ಮೇಲೆ ಕ್ರಮಕ್ಕೆ: ಸಿಪಿಐ(ಎಂ) ಒತ್ತಾಯ:

2018–19 ರ ಸಾಲಿನ ಆಡಳಿತ ವರದಿಯಲ್ಲಿ ಬಯಲಾಗಿರುವ 828 ಕೋಟಿ ರೂಗಳ ದುರ್ಬಳಕೆಯ ಅಕ್ರಮ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮವಹಿಸಲು ಸಿಪಿಐ(ಎಂ) ರಾಜ್ಯ ಬಿಜೆಪಿ ಸರ್ಕಾರವನ್ನು ಒತ್ತಾಯಿಸಿದೆ. ಆಡಿಟ್ ವರದಿಯ ಶಿಫಾರಸ್ಸಿನಂತೆ ಅಧಿಕಾರಿಗಳು ಮತ್ತು ಗುತ್ತಿಗೆದಾರರಿಂದ 144 ಕೋಟಿ ರೂಗಳನ್ನು ಕೂಡಲೇ ವಸೂಲಿ ಮಾಡಲು ಸಿಪಿಐ(ಎಂ) ಆಗ್ರಹಿಸಿದೆ. ಬಿಬಿಎಂಪಿ ವಾರ್ಷಿಕ ಹಣಕಾಸು ವಹಿವಾಟಿನ ಲೆಕ್ಕ ಪರಿಶೋಧನೆಯ ವರದಿಯಲ್ಲಿ 1964–65 ರಿಂದ 2017–18ರವರೆಗೆ ಒಟ್ಟು 6441.76 ಕೋಟಿ ರೂಗಳ ವಹಿವಾಟಿಗೆ ಆಕ್ಷೇಪಣೆಯನ್ನು ಮತ್ತು 2657.10 ಕೋಟಿ ರೂಗಳ ವಸೂಲಾತಿಗೆ ಸೂಚಿಸಲಾಗಿದೆ. ಆದರೆ ಇದುವರೆಗೆ ಈ ಕಾಲಾವಧಿಯಲ್ಲಿ ಬಿಬಿಎಂಪಿ ಯಲ್ಲಿದ್ದ ಆಡಳಿತಾರೂಢ ಪಕ್ಷಗಳು ಬಾಕಿ ವಸೂಲಿಗೆ ಕ್ರಮ ಕೈಗೊಳ್ಳದೆ ಅಕ್ರಮ ಎಸಗಿ ನಾಗರೀಕ ಮೇಲೆ ಹೊರೆ ಹೊರಿಸುವ ಕೆಲಸಗಳನ್ನು ನಿರಂತರವಾಗಿ ವಿವಿಧ ಶುಲ್ಕ ಏರಿಕೆ ಮತ್ತು ಅಕ್ರಮ ಶುಲ್ಕ ಸಂಗ್ರಹದ ಮೂಲಕ ಮಾಡುತ್ತಾ ಬಂದಿರುವುದನ್ನು ಸಿಪಿಐ(ಎಂ) ತೀವ್ರವಾಗಿ ಖಂಡಿಸಿದೆ. ಆಡಿಟ್ ವರದಿಯಂತೆ ವಸೂಲಿಗೆ ಕ್ರಮವಹಿಸದಿದ್ದಲ್ಲಿ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಸಿಪಿಐ(ಎಂ) ಮೂಡಬಿದ್ರಿ ವಲಯ ಸಮ್ಮೇಳನ

ಅಕ್ಟೋಬರ್ 31 ರಂದು ಮೂಡಬಿದ್ರೆಯ ಸಮಾಜ ಮಂದಿರದಲ್ಲಿ ಸಿಪಿಐ(ಎಂ) ಪಕ್ಷದ ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಾಸುದೇವ ಉಚ್ಚಿಲ ಅವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಕಳೆದ 7 ವರ್ಷಗಳಿಂದ ಕೇಂದ್ರದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ನೇತೃತ್ವದ ನರೇಂದ್ರ ಮೋದಿಯವರ ಸರಕಾರ ತೀವ್ರತರವಾಗಿ ನವ ಉದಾರೀಕರಣ ನೀತಿಗಳನ್ನು ಜಾರಿ ಮಾಡುತ್ತಿದೆ. 44 ಕಾರ್ಮಿಕ ಕಾನೂನುಗಳನ್ನು ಪರಿವರ್ತಿಸಿ, 4 ಕಾರ್ಮಿಕ ಸಂಹಿತೆಗಳಾಗಿ ಮೋದಿ ಸರಕಾರ ಜಾರಿಗೊಳಿಸಿದ್ದು, ಕಾರ್ಮಿಕರು ದೀರ್ಘ ಹೋರಾಟಗಳಿಂದ ಗಳಿಸಿದ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಅಲ್ಲದೆ ದೇಶದ ಕೃಷಿ ರಂಗವನ್ನು ಅದಾನಿ, ಅಂಬಾನಿಗಳಿಗೆ ಕೈಗೊಪ್ಪಿಸುವ ಹುನ್ನಾರವಾಗಿ, 3 ಕೃಷಿ ಕಾಯ್ದೆಗಳನ್ನು ಜಾರಿ ಮಾಡಿದ್ದಾರೆ. 11 ತಿಂಗಳು ಮೀರಿ ಕೃಷಿ ಕಾಯ್ದೆಗಳಿಗೆ ವಿರೋಧವಾಗಿ ರೈತ ಸಂಘಟನೆಗಳ ಒಕ್ಕೂಟ ದೆಹಲಿಯಲ್ಲಿ ಸತ್ಯಾಗ್ರಹ ನಡೆಸುತ್ತಿದ್ದರೂ ಅವರನ್ನು ಕೇಂದ್ರ ಸರಕಾರ ನಿರ್ಲಕ್ಷ್ಯ ತೋರಿ ಅವಮಾನಿಸುತ್ತಿದೆ.





ರೈತರು ದೇಶದ ಆರ್ಥಿಕತೆಯ ಬೆನ್ನೆಲುಬು. ಮೋದಿ ಸರಕಾರದ ನೀತಿಗಳು ಕಾರ್ಪೋರೇಟ್ ಹಿತಾಸಕ್ತಿಗಳಿಗೆ ಹಾಗೂ ಹಿಂದೂತ್ವ ಶಕ್ತಿಗಳಿಗೆ ಮಣೆ ಹಾಕುತ್ತಾ, ದೇಶವನ್ನು ವಿನಾಶದತ್ತ ಒಯ್ಯುತ್ತಿದ್ದಾರೆ. ಇದಕ್ಕೆ ವಿರುದ್ಧವಾಗಿ ರೈತರು ದೊಡ್ಡ ಮಟ್ಟದಲ್ಲಿ ಆಂದೋಲನ ನಡೆಸುತ್ತಿದ್ದಾರೆ. ಇದನ್ನು ಸಿಪಿಐ(ಎಂ) ಹಾಗೂ ಎಡಶಕ್ತಿಗಳು ಬೆಂಬಲಿಸಿ ದೇಶವನ್ನು ರಕ್ಷಿಸಬೇಕಾಗಿದೆ ಎಂದು ವಾಸುದೇವ ಉಚ್ಚಿಲ ಹೇಳಿದರು.

ಬಹಿರಂಗ ಸಭೆಯನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುನಿಲ್ ಕುಮಾರ್ ಬಜಾಲ್ ಮತ್ತು ಕೆ.ಯಾದವ ಶೆಟ್ಟಿ ಮಾತನಾಡಿದರು. ಸಮ್ಮೇಳನದ ಅಂತ್ಯದಲ್ಲಿ ನಡೆದ ಸಮಾರೋಪದಲ್ಲಿ ಜಿಲ್ಲಾ ಸಮಿತಿ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿ, ಇಂದಿನ ಕಾಲಘಟ್ಟದಲ್ಲಿ ಪಕ್ಷ ಸದಸ್ಯರ ಜವಾಬ್ದಾರಿ ಬಗ್ಗೆ ಮಾರ್ಗದರ್ಶನ ನೀಡಿದರು.

ಸಮ್ಮೇಳನವು ನೂತನ ವಲಯ ಸಮಿತಿ ಹಾಗೂ ಕಾರ್ಯದರ್ಶಿಯನ್ನು ಆಯ್ಕೆ ಮಾಡಿತು. ರಮಣಿ ಮೂಡಬಿದ್ರಿ ಅವರು ವಲಯ ಸಮಿತಿ ನೂತನ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ. ಸಮ್ಮೇಳನವು ಜಿಲ್ಲಾ ಸಮ್ಮೇಳನಕ್ಕೆ 12 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಿತು.

ಸಮ್ಮೇಳನದ ಆರಂಭದಲ್ಲಿ ಮೂಡಬಿದ್ರಿ ಪಕ್ಷದ ಕಚೇರಿಯಿಂದ 20ಕ್ಕೂ ಮೀರಿದ ಕಾರ್ಯಕರ್ತರೊಡಗೂಡಿದ ಆಕರ್ಷಕ ಮೆರವಣಿಗೆ ನಗರದ ಬೀದಿಗಳಲ್ಲಿ ಸಾಗಿ ಸಮ್ಮೇಳನ ಸ್ಥಳವಾದ ಸಮಾಜ ಮಂದಿರಕ್ಕೆ ತಲುಪಿತು. ಆ ಪ್ರದೇಶದ ಹಿರಿಯ ಪಕ್ಷ ಸದಸ್ಯ ಲೋಕಯ್ಯ ತೋಡಾರು ಸಮ್ಮೇಳನದ ಧ್ವಜಾರೋಹಣ ನಡೆಸಿದರು. ರಮಣಿ ಮೂಡಬಿದ್ರಿ ಸಾರ್ವಜನಿಕರನ್ನು ಸ್ವಾಗತಿಸಿದರು.

ಸಾವರ್ಕರ್ ವಿಜೃಂಭಣೆಯ ಹಿಂದೆ ತುಳುನಾಡಿನ ರಾಜಕೀಯ ಇತಿಹಾಸವನ್ನು ಮರೆಮಾಚುವ ಹುನ್ನಾರ: ಮುನೀರ್ ಕಾಟಿಪಳ್ಳ ಆರೋಪ

23ನೇ ಸಿಪಿಐಎಂ ಮಂಗಳೂರು ನಗರ ದಕ್ಷಿಣ ಸಮ್ಮೇಳನ

ನಗರದ ಬಜಾಲ್ ನ ಭಗತ್ ಸಿಂಗ್ ಭವನದಲ್ಲಿ ಜರುಗಿದ 23ನೇ ಸಿಪಿಐಎಂ ಮಂಗಳೂರು ನಗರ ದಕ್ಷಿಣ ಸಮ್ಮೇಳನವನ್ನು ಸಿಪಿಐಎಂ ದ.ಕ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮುನೀರ್ ಕಾಟಿಪಳ್ಳ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಸುರತ್ಕಲ್ ವೃತ್ತಕ್ಕೆ ಸಾವರ್ಕರ್ ಹೆಸರು ಪ್ರಸ್ತಾಪದ ಹಿಂದೆ ಬಿಜೆಪಿಯ ಹಿಡನ್ ಅಜೆಂಡಾ ಅಡಗಿದೆ. ಮತದಾರರನ್ನು ಧರ್ಮದ ಆಧಾರದಲ್ಲಿ ವಿಭಜಿಸುವ ಜೊತೆಗೆ ತುಳುನಾಡಿನ ರಾಜಕೀಯ ಇತಿಹಾಸವನ್ನು ಮರೆ ಮಾಚುವ ಹುನ್ನಾರವೂ ಇದರ ಹಿಂದೆ ಇದೆ ಎಂದರು.

ದೆಹಲಿಯಿಂದ ಹಿಡಿದು ಸುರತ್ಕಲ್ ವರೆಗೆ ವಿಭಜನಾವಾದಿ ಸಾವರ್ಕರ್ ಹೆಸರನ್ನು ಮಾತ್ರ ಮೆರೆಸುವ ಬಿಜೆಪಿಗೆ ತುಳುನಾಡಿನ ರಾಜಕಾರಣಕ್ಕೆ ಗೌರವ ತಂದು ಕೊಟ್ಟ ಅಭಿವೃದ್ಧಿಯ ಹರಿಕಾರ ಶ್ರೀನಿವಾಸ ಮಲ್ಯ, ಭೂಮಸೂದೆ ಕಾಯ್ದೆ ರಚನೆಗೆ ಅರಸು ಸಂಪುಟದಲ್ಲಿ ಕೆಲಸ ಮಾಡಿದ ಸುಬ್ಬಯ್ಯ ಶೆಟ್ಟಿ, ಶಾಸಕ ಸ್ಥಾನಕ್ಕೆ ಘನತೆ ತಂದು ಕೊಟ್ಟ ನಾಗಪ್ಪ ಆಳ್ವ, ಕೃಷ್ಣ ಶೆಟ್ಟಿ ತಾರತಮ್ಯ ರಹಿತ ಸಮಾಜಕ್ಕಾಗಿ ಕೆಲಸ ಮಾಡಿದ ಕುದ್ಮಲ್ ರಂಗರಾವ್, ಬಿ ವಿ ಕಕ್ಕಿಲ್ಲಾಯ ಮುಂತಾದ ತುಳುನಾಡಿನ ಹೆಮ್ಮೆಯ ಪುತ್ರರು ನೆನಪಾಗದಿರುವುದು ಆಕಸ್ಮಿಕ ಅಲ್ಲ. ಜನರ ಮಧ್ಯೆ ಸೌಹಾರ್ದ, ಅಭಿವೃದ್ದಿಗಾಗಿ ಕೆಲಸ ಮಾಡಿದ ಇಂತಹ ಮಹಾನ್ ಚೇತನಗಳನ್ನು ಜನಮಾನಸದಿಂದ ಮರೆಯಾಗಿಸುವ ಮೂಲಕ ಹಿಂಸಾ ರಾಜಕಾರಣದ ಐಕಾನ್ ಗಳನ್ನು ಮುನ್ನಲೆಗೆ ತರಲು ಬಿಜೆಪಿ ಪರಿವಾರ ಶ್ರಮಿಸುತ್ತಿದೆ. ಇದರ ಭಾಗವಾಗಿಯೇ ಸಾವರ್ಕರ್ ಹೆಸರಿನ ವಿಜೃಂಭಣೆ ನಡೆದಿದೆ ಎಂದು ಅವರು ಆರೋಪಿಸಿದರು. ತುಳುವರು ಬಿಜೆಪಿಯ ಇಂತಹ ರಾಜಕೀಯ ಮಾಯಾಜಾಲಕ್ಕೆ ಬಲಿಯಾಗದಂತೆ ಎಚ್ಚರ ವಹಿಸಬೇಕು. ಕೋಟಿ ಚೆನ್ನಯರು, ಕಾನದ ಕಟದರು, ಕಾಂತಬಾರೆ, ಬೂದಬಾರೆಯರಂತಹ ಊಳಿಗಮಾನ್ಯ ವ್ಯವಸ್ಥೆಗೆ ಎದೆಗೊಟ್ಟು ನಿಂತ ವೀರರ ಪರಂಪರೆಯನ್ನು ಹೊಂದಿರುವ ತುಳುವ ಮಣ್ಣು ಶೋಷಕರ ಪ್ರತಿನಿಧಿಗಳಾದ ಬಿಜೆಪಿಯ ಕಣ್ಕಟ್ಟುಗಳನ್ನು ತಿರಸ್ಕರಿಸಬೇಕು. ಉದ್ಯೋಗ, ಆರೋಗ್ಯ, ಶಿಕ್ಷಣ ಸಹಿತ ಘನತೆಯ ಬದುಕಿಗಾಗಿ ಜಾತಿ, ಧರ್ಮಗಳನ್ನು ಮೀರಿ ಒಂದಾಗಿ ನಿಲ್ಲಬೇಕು ಎಂದು ಕರೆ ನೀಡಿದರು.





ವೇದಿಕೆಯಲ್ಲಿ ಸಿಪಿಐಎಂ ದ.ಕ ಜಿಲ್ಲಾ ಮುಖಂಡರಾದ ಜೆ ಬಾಲಕೃಷ್ಣ ಶೆಟ್ಟಿ, ಮಂಗಳೂರು ನಗರ ದಕ್ಷಿಣ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಸಿಪಿಐಎಂ ಮಂಗಳೂರು ನಗರ ದಕ್ಷಿಣ ಸಮಿತಿ ಸದಸ್ಯರಾದ ದಿನೇಶ್ ಶೆಟ್ಟಿ, ಯೋಗೀಶ್ ಜಪ್ಪಿನಮೊಗರು, ಜಯಂತಿ ಬಿ. ಶೆಟ್ಟಿ, ಪ್ರದೀಪ್ ಉರ್ವಸ್ಟೋರ್, ಸ್ವಾಗತ ಸಮಿತಿ ಅಧ್ಯಕ್ಷರಾದ ಸುರೇಶ್ ಬಜಾಲ್, ಕೋಶಾಧಿಕಾರಿ ವರಪ್ರಸಾದ್ ಬಜಾಲ್ ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ಸ್ವಾಗತ ಸಮಿತಿ ಕಾರ್ಯಾಧ್ಯಕ್ಷರಾದ ಸಂತೋಷ್ ಬಜಾಲ್ ವಹಿಸಿದ್ದರು.

ಸಮ್ಮೇಳನ ಉದ್ಘಾಟನಾ ಸಮಾರಂಭದ ವೇಳೆ ಪಕ್ಷದ ಹಿರಿಯ ಸಂಗಾತಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮವನ್ನು ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ದೀಪಕ್ ಬಜಾಲ್ ಸ್ವಾಗತಿಸಿ ನಿರೂಪಿಸಿದರು ಕೋಶಾಧಿಕಾರಿ ವರಪ್ರಸಾದ್ ವಂದಿಸಿದರು.




ಹೊಸಪೇಟೆ ತಾಲೂಕು ಕಟ್ಟಡ ಕಾರ್ಮಿಕರ 6 ನೇ ಸಮ್ಮೇಳನ

ಹೊಸಪೇಟೆ ತಾಲೂಕಿನ ಕಟ್ಟಡ ಕಾರ್ಮಿಕರ 6 ನೇ ಸಮ್ಮೇಳನ ಅಂಬೇಡ್ಕರ್ ಭವನದ ಗೌತಮ ಬುದ್ದ ಸಭಾಂಗಣದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ. ಮಹಾಂತೇಶ ಉದ್ಘಾಟಿಸಿ ಮಾತನಾಡಿ ಕರೋನಾ ಸಂದರ್ಭದಲ್ಲಿ ಲಕ್ಷಾಂತರ ಕಟ್ಟಡ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕಿದಾಗ ಅವರ ನೆರವಿಗೆ ಕಾರ್ಮಿಕ ಸಂಘ ಜತೆ ಕಾರ್ಮಿಕ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಹಗಲು ರಾತ್ರಿಗಳೆನ್ನದೆ ಶ್ರಮಿಸಿದ್ದಾರೆ ಇದರಿಂದಾಗಿ ಸಾವಿರಾರು ಕಾರ್ಮಿಕರು ಹಸಿವಿನ ದವಡೆಯಿಂದ ಪಾರಾಗಿದ್ದಾರೆ ಇದು ಅಭಿನಂದನಾರ್ಹ ಕೆಲಸ ಹಾಗೂ ಆದರೆ ಕರೋನಾ ಅಲೆಗಳಲ್ಲಿ ನಿರುದ್ಯೋಗಿಗಳಾಗಿರುವ ಲಕ್ಷಾಂತರ ಕಾರ್ಮಿಕರಿಗೆ ಸರ್ಕಾರ ಉದ್ಯೋಗ ಭದ್ರತೆ ಮತ್ತು ಸೌಲಭ್ಯಗಳ ಅಸಮರ್ಪಕ ಸಿಗದೇ ಇರುವ ಕಾರಣದಿಂದಾಗಿ ಕಾರ್ಮಿಕರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ ಎಂದು ಅವರು ಹೇಳಿದರು. ಆದಾಗ್ಯೂ ಕಟ್ಟಡ ಕಾರ್ಮಿಕ ಸಂಘಗಳ ಹೋರಾಟ ಮತ್ತು ಕಲ್ಯಾಣ ಮಂಡಳಿ ಅಧಿಕಾರಿಗಳ ನಿರಂತರ ಪ್ರಯತ್ನ ದ ಫಲವಾಗಿ ಇದೀಗ ಕಾರ್ಮಿಕರಿಗೆ ಸಾಕಷ್ಟು ಸೌಲಭ್ಯಗಳನ್ನು ಕಾರ್ಮಿಕರು ಪಡೆದಿದ್ದಾರೆ ಆದರೆ ಕಾರ್ಮಿಕರು ಕೇವಲ ಸೌಲಭ್ಯಗಳಿಗಾಗಿ ಮಾತ್ರ ಸಂಘಟಿತರಾಗದೇ ಕೆಲಸದ ಸ್ಥಳದಲ್ಲಿ ಸುರಕ್ಷತೆ ಮತ್ತು ತಮ್ಮಕುಟುಂಬದ ಸಾಮಾಜಿಕ ಭದ್ರತೆಗಾಗಿ ತಮ್ಮ ವಾಸ ಪ್ರದೇಶದಲ್ಲಿ ಕಟ್ಟಡ ಕಾರ್ಮಿಕರ ಸಂಘಗಳನ್ನು ರಚಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸಮ್ಮೇಳನದಲ್ಲಿ ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಶ್ರೀ ಅಲ್ತಾಫಾ ಹಾಗೂ ಶ್ರೀ ಮಾರಿಕಾಂಬಾ ಅವರು ಮಾತನಾಡಿ ಬಳ್ಳಾರಿ ಜಿಲ್ಲೆಯಲ್ಲಿ ಮತ್ತು ಹೊಸಪೇಟೆ ಭಾಗದಲ್ಲಿ ಇಲಾಖೆವತಿಯಿಂದ ಸಾವಿರಾರು ರೇಷನ್ ಕಿಟ್ ಗಳನ್ನು ಇತರೆ ಸಾಮಾಗ್ರಿಗಳನ್ನು ವಿತರಿಸಲಾಗಿದೆ ಜತೆಗೆ ಲಕ್ಷಾಂತರ ರುಪಾಯಿ ಪರಿಹಾರವನ್ನು ಕೊಡಿಸಲು ಶ್ರಮಿಸಲಾಗಿದೆ ಆದರೆ ತಾಂತ್ರಿಕ ಕಾರಣದಿಂದಾಗಿ ಇನ್ನೂ ನೂರಾರು ಅರ್ಜಿಗಳ ವಿಲೇವಾರಿಯಾಗಿಲ್ಲ ಇದನ್ನು ಇತ್ಯರ್ಥಪಡಿಸಿ ಪರಿಹಾರ ಒದಗಿಸಲಾಗುವುದು ಎನ್ನುವ ಭರವಸೆ ನೀಡಿದರು.

ಬಿರುಗಾಳಿ ಎಬ್ಬಿಸಿದ ಬಿಟ್ ಕಾಯಿನ್ ಹಗರಣ, ಸಿಎಂ ಮೇಲೆ ತೂಗುಕತ್ತಿ





ಗುರುರಾಜ ದೇಸಾಯಿ

ರಾಜ್ಯದಲ್ಲಿ ಬಿಟ್‌ಕಾಯಿನ್ ಹಗರಣ ಭಾರಿ ಸದ್ದು ಮಾಡುತ್ತಿದೆ. ಸಿಎಂ ತಲೆದಂಡವಾಗಲಿದ್ದು, ಬಿಜೆಪಿ ರಾಜ್ಯಾಧ್ಯಕ್ಷರು ಕೂಡಾ ಬದಲಾಗಲಿದ್ದಾರೆ ಅನ್ನೋ ಮಾತುಗಳು ಕೇಳಿ ಬರುತ್ತಿವೆ. ಸಿಎಂ ಬೊಮ್ಮಾಯಿ ದೆಹಲಿಗೆ ಹೋಗಿದ್ದು ಅದೇ ವಿಚಾರಕ್ಕೆ ಎಂದು ಸಾಮಾಜಿಕ ಜಾಲತಾಣದಲ್ಲಿ ಚರ್ಚೆಗಳಾಗುತ್ತಿವೆ.

ಬಿಟ್ ಕಾಯಿನ್ ಹಗರಣದಲ್ಲಿ ಭಾಗಿ ಆದವರ ಪೈಕಿ ಅನೇಕ ಕಾಂಗ್ರೆಸ್ ಮುಖಂಡರ ಹೆಸರುಗಳಿವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ. ಪಟ್ಟಿ ಅವರ ಬಳಿ ಇದ್ದರೆ ಬಿಡುಗಡೆ ಮಾಡಲಿ ಎಂದು ಕಾಂಗ್ರೆಸ್ ಆಗ್ರಹಿಸಿದರೆ, ಬಿಟ್ ಕಾಯಿನ್ ಪ್ರಕರಣವನ್ನು ಮುಚ್ಚಿ ಹಾಕಲು ಬಿಜೆಪಿ, ಕಾಂಗ್ರೆಸ್ ಪ್ರಯತ್ನಿಸುತ್ತಿದೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಆರೋಪಿಸುತ್ತಿದ್ದಾರೆ. ರಾಜ್ಯದಲ್ಲಿ ಬಿಟ್ ಕಾಯಿನ್ ರಾಜಕೀಯ ಕೆಸರೆರಚಾಟಕ್ಕೆ ಚಾಲನೆಯನ್ನು ನೀಡಿದ್ದು ಒಬ್ಬರ ಮೇಲೊಬ್ಬರು ಆರೋಪ ಪ್ರತ್ಯಾರೋಪ ಮಾಡುತ್ತಿದ್ದಾರೆ. ಇದ್ದ ಮೂವರ ಪೈಕಿ ಹಗರಣ ಮಾಡಿದವರು ಯಾರು ಎಂದು ಸಾರ್ವಜನಿಕರು ಪ್ರಶ್ನೆಯನ್ನೆತ್ತುತ್ತಿದ್ದಾರೆ.

ಬಿಟ್ ಕಾಯಿನ್ ಎಂದರೇನು?

ರಾಜ್ಯದಲ್ಲಿ ಇಷ್ಟೆಲ್ಲ ಸದ್ದು ಮಾಡಿರುವ ಬಿಟ್ ಕಾಯಿನ್ ಎಂದರೇನು ಎಂಬುದನ್ನು ನಾವು ತಿಳಿಯಬೇಕಿದೆ. ಡಿಜಿಟಲ್ ಯುಗದ ಡಿಜಿಟಲ್ ಕರೆನ್ಸಿ. ಇದಕ್ಕೆ ಮುದ್ರಣ ರೂಪ ಇಲ್ಲ. ಬಿಟ್ ಕಾಯಿನ್ ಎಂಬ ಮಾಯಾಂಗನೆ ಕೇವಲ ಎಲೆಕ್ಟ್ರಾನಿಕ್ ರೂಪದಲ್ಲಿದ್ದು, ರೂಪಾಯಿ, ಡಾಲರ್, ಯುರೋ ಗಳಂತೆ ಭೌತಿಕ ರೂಪದಲ್ಲಿ ಇರುವುದಿಲ್ಲ. ಅಲ್ಲದೇ ಇದಕ್ಕೆ ಯಾವುದೇ ದೇಶ, ಭಾಷೆ, ಬ್ಯಾಂಕು ಇದ್ಯಾವುದು ಇರುವುದಿಲ್ಲ.

ಇಲ್ಲಿ ಹಣದ ತ್ವರಿತವಾದ ವರ್ಗಾವಣೆ ಸಾಧ್ಯವಾಗಿದ್ದು, ಸಂಸ್ಕರಣೆ ಶುಲ್ಕ ಇರುವುದಿಲ್ಲ. ಯಾವುದೇ ಅಡೆತಡೆಯಿಲ್ಲದೇ ಜಗತ್ತಿನಾದ್ಯಂತ ಚಲಾವಣೆ ಮಾಡಬಹುದು. ಬ್ಯಾಂಕಿಂಗ್ ಬಳಕೆ ಅಗತ್ಯವಿಲ್ಲ. ವರ್ಡ್‌ಪ್ರೆಸ್, ರೆಡಿಟ್, ನೇಮ್‌ಚೀಪ್ ಮತ್ತು ಫ್ಲಾಟ್ಟರ್ ನಂತಹ ಅಂತರ್ಜಾಲ ತಾಣಗಳು ಬಿಟ್‌ಕಾಯಿನ್‌ಗಳನ್ನು ನೇರವಾಗಿ ಸ್ವೀಕರಿಸುತ್ತವೆ.

ರಾಜ್ಯದಲ್ಲಿ ಸದ್ದು ಮಾಡಿರುವಬಿಟ್ ಕಾಯಿನ್ ಹಗರಣದಿಂದ ಮುಖ್ಯಮಂತ್ರಿ ಬದಲಾವಣೆ ಆಗಬಹುದು, ರಾಜ್ಯ ಬಿಜೆಪಿ ಅಧ್ಯಕ್ಷರ ಬದಲಾವಣೆ ಆಗಬಹುದು ಎಂದು ವ್ಯಾಪಕವಾಗಿ ಚರ್ಚೆ ಆಗುತ್ತಿದೆ. ಈ ಬಗ್ಗೆ ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಸ್ವತಃ 'ನಾಯಕತ್ವ ಬದಲಾವಣೆ ಇಲ್ಲ' ಎಂದು ಸ್ಪಷ್ಟೀಕರಣ ಕೊಟ್ಟ ಮೇಲೂ ಚರ್ಚೆ ನಡೆಯುತ್ತಲೇ ಇದೆ. ಹಿಂದೆ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗಲೂ ಅರುಣ್ ಸಿಂಗ್ ಪದೇ ಪದೇ 'ಮುಖ್ಯಮಂತ್ರಿ ಬದಲಾವಣೆ ಇಲ್ಲ' ಎನ್ನುತ್ತಿದ್ದರು ಕಡೆಗೆ ಯಡಿಯೂರಪ್ಪ ರಾಜೀನಾಮೆ ನೀಡಬೇಕಾಗಿ ಬಂತು. ಈಗಲೂ 'ಬೆಂಕಿ ಇಲ್ಲದೆ ಹೊಗೆ ಕಾಣಿಸಿಕೊಳ್ಳುವುದಿಲ್ಲ' ಎಂದು ಬಿಜೆಪಿ ನಾಯಕರು ಮಾತನಾಡಿಕೊಳ್ಳುತ್ತಿದ್ದಾರೆ.

ದಿನ ಹೋದಂತೆ ಬಿಟ್ ಕಾಯಿನ್ ದಂಧೆ ಚಿತ್ರವಿಚಿತ್ರ ತಿರುವನ್ನು ಪಡೆದುಕೊಳ್ಳುತ್ತಿರುವ ಬಿಟ್ ಕಾಯಿನ್ ಯಾರ ಕೊರಳಿಗೆ ಸುತ್ತಿಕೊಳ್ಳಬಹುದು ಎಂಬ ಕುತೂಹಲ ರಾಜಕೀಯದಲ್ಲಿ ಮೂಡಿದೆ. ಮುಂಬರುವ ಚುನಾವಣೆಗಳಲ್ಲಿ ಬಿಟ್ ಕಾಯಿನ್ ಒಂದು ಪಕ್ಷದ ಸೋಲಿಗೆ ಕಾರಣವಾಗಿ ಇನ್ನೊಂದು ಪಕ್ಷದ ಗೆಲುವಿಗೂ ಕಾರಣವಾಗಲಿದೆ. ಅದರಲ್ಲೂ ಬಿಜೆಪಿ ಪಾಲಿಗಂತೂ ಬಿಟ್ ಕಾಯಿನ್ ತೂಗುಕತ್ತಿಯಾಗಿದೆ. ಅಗೆದಷ್ಟು ಬಿಜೆಪಿ ಬುಡಕ್ಕೆ ಏಟು ಬೀಳುತ್ತಿದೆ. ಈ ವಿಚಾರವನ್ನು ಇಟ್ಟುಕೊಂಡು ಕಾಂಗ್ರೆಸ್ ದೊಡ್ಡ ಮಟ್ಟದಲ್ಲಿ ಬಿಜೆಪಿ ವಿರುದ್ದ ಮುಗಿಬೀಳಲು ಸಿದ್ದತೆಯನ್ನು ಮಾಡಿಕೊಂಡಿದೆ. ಇದರಲ್ಲಿ ಯಾರ್ಯಾರು ಇದ್ದಾರೋ, ಯಾರ ತಲೆದಂಡವಾಗಲಿದೆಯಾ ಎನ್ನುವುದಕ್ಕೆ ಸದ್ಯದಲ್ಲೇ ಉತ್ತರ ಸಿಕ್ಕರೂ ಸಿಗಬಹುದು?

ಹ್ಯಾಕರ್ ಶ್ರೀಕಿ ಜೊತೆಗೂಡಿ ಡ್ರಗ್ಸ್ ಮತ್ತು ಬಿಟ್ ಕಾಯಿನ್ ದಂಧೆಯಲ್ಲಿ ಶಾಮೀಲಾಗಿದ್ದಾರೆ ಕಾಂಗ್ರೆಸ್ ನ ಪ್ರಭಾವಿ ನಾಯಕರ ಮಕ್ಕಳಿಬ್ಬರಿದ್ದಾರೆ ಎಂದು ಬಿಜೆಪಿ ಹೊಸ ಅಸ್ತ್ರವನ್ನು ಪ್ರಯೋಗಿಸುತ್ತಿದೆಯಾದರೂ ಇದು ಸುಳ್ಳು ಎಂದು ಹ್ಯಾಕರ್ ಶ್ರೀಕಿ ಪ್ರತಿಕ್ರಿಯಿಸುತ್ತಿದ್ದಾರೆ. ನನ್ನ ಬಳಿ ಯಾವ ಬಿಟ್ ಕಾಯಿನ್ ಇಲ್ಲ. ಅದು ಏನೆಂಬುದು ನನಗೆ ಗೊತ್ತಿಲ್ಲ, ಪೊಲೀಸರು ನನ್ನಿಂದ ಏನನ್ನು ವಶಪಡಿಸಿಕೊಂಡಿಲ್ಲ ಬಿಜೆಪಿಯವರು ಸುಳ್ಳು ಹೇಳುತ್ತಿದ್ದಾರೆ ಎಂಬ ಮಾತನ್ನು ಶ್ರೀಕಿ ಬಹಿರಂಗವಾಗಿ ಹೇಳುತ್ತಿರುವುದು ಈ ಪ್ರಕರಣ ಎಲ್ಲಿಗೆ ಬಂದ ತಲುಪ ಬಹುದು ಎಂಬ ಬಿಸಿ ಬಿಸಿ ಚರ್ಚೆಗಳು ರಾಜಕೀಯ ವಲಯದಲ್ಲಿ ಕೇಳಿ ಬರುತ್ತಿವೆ.

ಸಿಎಂ ಪಿಎಂ ಭೇಟಿ ಯಾಕೆ:

ಇದೆ ವೇಳೆ ಸಿಎಂ ಬೊಮ್ಮಾಯಿ ಧಿಡೀರ್ ಅಂತಾ ದೆಹಲಿಗೆ ಹಾರಿದ್ದು ಹಲವಾರು ಅನುಮಾನಗಳಿಗೆ ಕಾರಣವಾಗಿದೆ. ಬಿಟ್ ಕಾಯಿನ್ ವಿಚಾರವಾಗಿ ಸಿಎಂ ಮತ್ತು ಪಿಎಂ ಚರ್ಚಿಸಿದ್ದಾರೆ ಎಂಬ ಗುಸು ಗುಸು ಮಾತು ಬಿಜೆಪಿವಲಯದಲ್ಲೆ ಕೇಳಿ ಬರುತ್ತಿದೆ. ಹಗರಣಕ್ಕೆ ಸಂಬಂಧಿಸಿದಂತೆ ಅನಾಮಧೇಯ ಪತ್ರವೊಂದು ಪ್ರಧಾನಮಂತ್ರಿಗಳ ಕಚೇರಿ ತಲುಪಿದ್ದು ಆ ಕಾರಣಕ್ಕಾಗಿ ಇಂದು ಸಭೆ ನಡೆದಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಬೆಂಗಳೂರು ಸೇರಿದಂತೆ ಅಂತಾರಾಷ್ಟ್ರೀಯ ವಂಚಕ ಗ್ಯಾಂಗ್ ಜೊತೆಗೆ ಸರ್ಕಾರದ ಆಡಳಿತ ಯಂತ್ರದ ಮತ್ತು ಬಿಜೆಪಿಯ ರಾಜಕಾರಣಿಗಳು ಭಾಗಿಯಾಗಿದ್ದಾರೆ ಎಂದುಪತ್ರದಲ್ಲಿ ಉಲ್ಲೇಖಿಸಲಾಗಿದೆಯಂತೆ. ಬಿಟ್‌ಕಾಯಿನ್ ಹಗರಣದಲ್ಲಿ ಕೆಲವು ಹಿರಿಯ ಐಪಿಎಸ್ ಅಧಿಕಾರಿಗಳು ಸೇರಿದಂತೆ ಪೊಲೀಸ್ ಅಧಿಕಾರಿಗಳು ಭಾಗಿಯಾಗಿದ್ದಾರೆ ಎಂದು ಸಹಿ ಇಲ್ಲದ ಪತ್ರದಲ್ಲಿ ಬರೆಯಲಾಗಿದೆ. ಹಾಗಾಗಿ ಸಿಎಂ ಮತ್ತು ಪಿಎಂ ಏನು ಚರ್ಚೆ ನಡೆಸಿರಬಹುದು? ಹಾಗೇನಾದರೂ ಪ್ರಕರಣ ಬಿಜೆಪಿ ಕಡೆ ತಿರುಗಿದರೆ ವಿಧಾನ ಸಭೆ ವಿಸರ್ಜಿಸಿ ಇಲ್ಲವೆ ನೀವು ರಾಜೀನಾಮೆ ಕೊಡಬೇಕಾಗಿ ಬರಬಹುದು ಎಂದು ಪ್ರತಿಷ್ಠೆಯ ಸೋಗನ್ನು ಜಾರಿ ಮಾಡಬಹುದು ಎಂದು ಜನ ಚರ್ಚಿಸುತ್ತಿದ್ದಾರೆ.

ಅನಾಮಧೇಯ ಪತ್ರವನ್ನು ಪ್ರಧಾನಿ ಕಾರ್ಯಾಲಯ ಗಂಭೀರವಾಗಿ ತೆಗೆದುಕೊಂಡಿದೆಯಾ ಅಥವಾ ರಾಜಕೀಯ ಲೆಕ್ಕಾಚಾರವನ್ನು ಅಳೆದು ತೂಗಿ ಮುಚ್ಚಿ ಹಾಕಿ ಬಿಡಬಹುದಾ? ರಾಜ್ಯದಲ್ಲಿ ಭಾರೀ ಚರ್ಚೆ ಆಗುತ್ತಿರುವ ಮತ್ತು ಮುಖ್ಯಮಂತ್ರಿ ಬದಲಾಗುತ್ತಾರೆ ಎಂಬ ಚರ್ಚೆಗೆ ಬಿಟ್ ಕಾಯಿನ್ ಮುನ್ನುಡಿ ಬರೆಯಬಹುದಾ? ಕಾದು ನೋಡಬೇಕಿದೆ.




ಆಟೋರಿಕ್ಷಾ ಗ್ಯಾಸ್ ಮೇಲಿನ ತೆರಿಗೆ ಕಡಿತಗೊಳಿಸಿ-ಮೀಟರ್ ದರ ಕಿ.ಮೀ. 16 ರೂಪಾಯಿಗೆ ಹೆಚ್ಚಿಸಲು ಎಆರ್‌ಡಿಯು ಪ್ರತಿಭಟನೆ

ನಗರದಲ್ಲಿ 2 ಲಕ್ಷ ಆಟೋ ಚಾಲಕರುಗಳಿದ್ದು, ಇವರನ್ನು ನಂಬಿಕೊಂಡು ಅವರ ಕುಟುಂಬಗಳು ಮತ್ತು ಇತರೆ ಅವಲಂಬಿತರು ಸೇರಿ ಸುಮಾರು 10 ಲಕ್ಷ ಕುಟುಂಬಗಳು ಬದುಕು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಆದರೆ ದಿನನಿತ್ಯದ ಜೀವನ ನಿರ್ವಹಣೆಯೇ ಕಷ್ಟಕರವಾಗಿದೆ ಸರ್ಕಾರಗಳಿಂದ ಮಾತ್ರ ಯಾವುದೇ ಸೌಲಭ್ಯಗಳು ಇಲ್ಲವಾಗಿದೆ, ಸತತ ಬೆಲೆ ಏರಿಕೆಗಳಿಂದಾಗಿ ಚಾಲಕರ ಬದುಕು ಕಷ್ಟಕರವಾಗಿದೆ ಎಂದು ಖಂಡಿಸಿ ಸಿಐಟಿಯು ಬೆಂಬಲಿ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್(ಎಆರ್‌ಡಿಯು)ನ ವತಿಯಿಂದ ಪ್ರತಿಭಟನೆ ನಡೆಸಿದ್ದಾರೆ.

ನವೆಂಬರ್ 08 ರಂದು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಕಛೇರಿಯಿಂದ ಆಟೋರಿಕ್ಷಾ ಮೀಟರ್ ದರವನ್ನು 1 ಕಿ.ಮೀ.ಗೆ 13 ರಿಂದ 15 ರೂ.ಗಳಿಗೆ ಹಾಗೂ ಕನಿಷ್ಠ ದರವನ್ನು 2 ಕಿ.ಮೀ.ಗೆ 30 ರೂ. ಹೆಚ್ಚಳ ಮಾಡಿ ಸರ್ಕಾರ ಆದೇಶ ಮಾಡಿರುವುದನ್ನು ಎಆರ್‌ಡಿಯು ಸಂಘ ಸ್ವಾಗತ ಮಾಡಿದೆ. ಪ್ರಾಧಿಕಾರದ ಕೈಗೊಂಡ ಕೆಲವು ನಿರ್ಧಾರಗಳು ಚಾಲಕರ ಹಿತಕ್ಕೆ ಪೂರಕವಾಗಿಲ್ಲ ಎಂದು ಸಂಘಟನೆ ಆರೋಪಿಸಿದೆ.

ಈ ಹಿನ್ನೆಲೆಯಲ್ಲಿ ಕೆಲವು ನಿರ್ದಿಷ್ಟ ಬೇಡಿಕೆಗಳನ್ನು ಇಟ್ಟುಕೊಂಡು ಎಆರ್‌ಡಿಯು ಸಂಘಟನೆಯು ನಗರದ ಕೆಂಪೇಗೌಡ ರಸ್ತೆಯಲ್ಲಿರುವ ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಪ್ರತಿಭಟನೆಯನ್ನು ನಡೆಸಿ ತಮ್ಮ ಹಕ್ಕೊತ್ತಾಯಗಳನ್ನು ಮಂಡಿಸಿದ್ದಾರೆ.

2020ರ ಫೆಬ್ರವರಿ ತಿಂಗಳಲ್ಲಿನಿಂದಲೂ ಸತತವಾಗಿ ಹೋರಾಟಗಳನ್ನು ನಡೆಸುವ ಮೂಲಕ ಮನವಿ ಪತ್ರವನ್ನು ನೀಡಿ ಆಟೋ ಮೀಟರ್ ದರವನ್ನು ಹೆಚ್ಚಳ ಮಾಡುವಂತೆ ಕೇಳಲಾಗಿದ್ದರೂ ಸಹ ಪದೇ ಪದೇ ಮೀಟರ್ ದರ ಏರಿಕೆ ಮಾಡುವುದನ್ನು ಮುಂದೂಡುತ್ತಾ ಬರಲಾಗಿತ್ತು. ಅಲ್ಲಿಂದ ಇಲ್ಲಿಯವರೆಗೂ ಆಟೋ ಗ್ಯಾಸ್ ಈಗಿನ ಬೆಲೆ 66 ರೂ.ಗಳು ಆಗಿರುತ್ತದೆ. ಸುಮಾರು 20 ರೂ.ಗಳಷ್ಟು ಹೆಚ್ಚಳವಾಗಿರುತ್ತದೆ. ನಿಗದಿತ ಮೀಟರ್ ದರ ಏರಿಕೆ ಮಾಡಿ ಈಗಾಗಲೇ 9 ವರ್ಷಗಳು ಕಳೆದಿರುತ್ತದೆ. ಈ ಕಾರಣದಿಂದ ಎಲ್ಲಾ ಬೆಲೆಗಳು ಗಗನಕ್ಕೇರಿವೆ. ಈಗ ಏರಿಸಿರುವ ದರ ಪಟ್ಟಿಯು ಸಾಕಾಗುವುದಿಲ್ಲ. ಆದ ಕಾರಣ ಬೆಂಗಳೂರು ನಗರದಲ್ಲಿ 1 ಕಿ.ಮೀ. 16 ರೂ., ಕನಿಷ್ಠ ದರ 1.8 ಕಿ.ಮೀ.ಗೆ 30 ರೂ. ಹೆಚ್ಚಳ ಮಾಡಬೇಕೆಂದು ಎಆರ್‌ಡಿಯು ಸಂಘಟನೆ ಆಗ್ರಹಿಸಿತು.



ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಡೀಸೆಲ್ ಮತ್ತು ಪೆಟ್ರೋಲ್‌ಗಳ ಮೇಲೆ ತಮ್ಮ ಪಾಲಿನ ತೆರಿಗೆಯನ್ನು ಕಡಿತಗೊಳಿಸಿರುತ್ತಾರೆ. ಆದರೆ, ಆಟೋ ಗ್ಯಾಸ್ ಮೇಲಿನ ತಮ್ಮ ಪಾಲಿನ ತೆರಿಗೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಡಿತಗೊಳಿಸದೆ ಚಾಲಕರ ಬದುಕಿಗೆ ಅನ್ಯಾಯವೆಸಗಿದೆ ಎಂದು ಎಆರ್‌ಡಿಯು ಸಂಘದ ಕಾರ್ಯಕರ್ತರು ಆಗ್ರಹಿಸಿದರು.

ಕೇಂದ್ರ ಸರ್ಕಾರ ಬೆಲೆ ಏರು ಇಳಿತಗಳಿಗೆ ಅನುಸಾರವಾಗಿ ಆಟೋ ಗ್ಯಾಸ್ ದರವನ್ನು ಸಹ ಪ್ರತಿ ತಿಂಗಳು ಏರಿಕೆ ಮಾಡುತ್ತಿದೆ. ಇದರ ಭಾಗವಾಗಿ ಬೆಂಗಳೂರು ನಗರದಲ್ಲಿ ಆಟೋ ಎಲ್‌ಪಿಜಿ ಇಂಧನದ ಈಗಿನ ಬೆಲೆ (ನವೆಂಬರ್ 2021) ರೂ.66 ಕ್ಕೆ ಹೆಚ್ಚಳವಾಗಿದೆ. ಈಗಾಗಲೇ, ಸಂಚಾರಿ ನಿಯಮ ಉಲ್ಲಂಘನೆಗಳಿಗೆ ದುಬಾರಿ ದಂಡ, ಆಹಾರ ಪದಾರ್ಥಗಳ ಬೆಲೆ ಏರಿಕೆ, ಹೊಸ ಆಟೋರಿಕ್ಷಾಗಳ ಖರೀದಿ ಸೇರಿದಂತೆ ಬಿಡಿ ಭಾಗಗಳು, ಇತ್ಯಾದಿ ಎಲ್ಲಾ ವಸ್ತುಗಳು ದುಬಾರಿಯಾಗಿವೆ. ಮನೆ ಬಾಡಿಗೆ, ಮಕ್ಕಳ ವಿದ್ಯಾಭ್ಯಾಸದ ಖರ್ಚು, ದುಬಾರಿ ಬಡ್ಡಿಯಿಂದಾಗಿ ಚಾಲಕರು ಬದುಕು ಸಾಗಿಸುವುದೇ ಕಷ್ಟವಾಗಿದೆ ಎಂದು ಎಆರ್‌ಡಿಯು ಸಂಘಟನೆ ಆರೋಪಿಸಿದೆ.

ಆಟೋರಿಕ್ಷಾಗಳಿಗೆ ರಹದಾರಿ ಪತ್ರದಲ್ಲಿ ಸಂಚಾರ ನಿಯಮದ ಪ್ರಕಾರ ಬಿಬಿಎಂಪಿ ವ್ಯಾಪ್ತಿ ಎಂದು ನಿಗದಿಗೊಳಿಸಲಾಗಿದೆ. ಬೆಂಗಳೂರು ನಗರ ವಿಸ್ತರಣೆಯಾಗಿ 198 ವಾರ್ಡ್‌ಗಳಿಂದ 243 ವಾರ್ಡುಗಳಿಗೆ ಹೆಚ್ಚಿಸಿ ಸರ್ಕಾರ ಆದೇಶ ಮಾಡಿದೆ. ಈ ಆಧಾರದಲ್ಲಿ ನಗರದ ಕೇಂದ್ರ ಭಾಗದಿಂದ 30 ಕಿ.ಮೀ.ವರೆಗೂ ಹಾಗೂ ಬಿಎಂಆರ್‌ಡಿಎ ವ್ಯಾಪ್ತಿಯವರೆಗೂ ಪ್ರಯಾಣಿಕರಿಗೆ ಸೇವೆ ಸಲ್ಲಿಸಲು ಅವಕಾಶ ನೀಡಬೇಕೆಂದು ಆಗ್ರಹಿಸಿದ್ದಾರೆ. ಅಲ್ಲದೆ, ಚಾಲಕರು ಅಥವಾ ಅವರ ಕುಟುಂಬಗಳು ಪ್ರಯಾಣಿಕರು ತಮ್ಮ ಊರುಗಳಿಗೆ ಹೋಗಿ–ಬರಲು ಆಟೋರಿಕ್ಷಾಗಳಿಗೆ ತಾತ್ಕಾಲಿಕ ರಹದಾರಿ ಪತ್ರ ನೀಡಬೇಕೆಂದು ಪ್ರತಿಭಟನೆಯ ಸಂದರ್ಭದಲ್ಲಿ ತಿಳಿಸಿದ್ದಾರೆ.

ಹವಾಮಾನ ಬದಲಾವಣೆ: ಗ್ಲಾಸ್ಗೊ ಸಮ್ಮೇಳನ ಮತ್ತು ಭಾರತ



ಪ್ರಧಾನಿ ಅವರು ಗ್ಲಾಸ್ಗೊ ಸಮ್ಮೇಳನದಲ್ಲಿ ತಮ್ಮ ಭಾಷಣದಲ್ಲಿ ಹವಾಮಾನ ಬದಲಾವಣೆ ತಡೆಯಲು ಭಾರತ ಕೈಗೊಳ್ಳಲಿರುವ ಸೂಸುವಿಕೆ ಕಡಿತದ ಐದು ಗುರಿಗಳ ಘೋಷಣೆ ಮಾಡಿದರು. ಈ ಗುರಿಗಳ ಕಾರ್ಯಸಾಧ್ಯತೆ ಒಂದು ಕಡೆಯಿದೆ. ಆದರೆ ಪ್ರಧಾನಿಯವರ ಘೋಷಣೆಗಳಾಗಲಿ ಅಥವಾ ''ರಾಷ್ಟ್ರೀಯವಾಗಿ ನಿರ್ಧಾರಿತ ಕೊಡುಗೆ'' (NDC) ಗಳಾಗಲಿ ಪರಿಣತರ ತಂಡಗಳು, ಇದರ ಪರಿಣಾಮ ಅನುಭವಿಸಲಿರುವ ಜನವಿಭಾಗಗಳ ಸಂಘಟನೆಗಳು ಅಥವಾ ಪ್ರತಿನಿಧಿಗಳು, ರಾಜಕೀಯ ಪಕ್ಷಗಳು? ಇವರೆಲ್ಲರ ಜತೆ ಚರ್ಚೆಯ ನಂತರ ರೂಪಿಸಿದವುಗಳಲ್ಲ.. .. ..ಹವಾಮಾನ ಬದಲಾವಣೆಗೆ ಸಂಬಂಧಿಸಿದ ಎರಡು ವಿಷಯಗಳ ಕುರಿತು ಭಾರತದ ಮೌನ ಮಾತ್ರ ಭಾರೀ ಆತಂಕಕಾರಿಯಾಗಿದೆ. ಗ್ಲಾಸ್ಗೊದಲ್ಲಿ 110 ದೇಶಗಳು 2030ರ ಹೊತ್ತಿಗೆ ಅರಣ್ಯನಾಶವನ್ನು 2030ರ ಹೊತ್ತಿಗೆ ನಿಲ್ಲಿಸುವ ಘೋಷಣೆಯಿಂದ ದೂರ ಉಳಿಯಿತು. ಗ್ಲಾಸ್ಗೊದಲ್ಲಿ ನೂರಕ್ಕೂ ಹೆಚ್ಚು ದೇಶಗಳು ಸಹಿ ಹಾಕಿದ ''ಜಾಗತಿಕ ಮೀಥೇನ್ ಶಪಥ''ಕ್ಕೂ ಭಾರತ ಸಹಿ ಹಾಕದಿರುವುದು ಸಹ ಆತಂಕಕಾರಿ. ಈ ಶಪಥದ ಪ್ರಕಾರ 2030ರ ಹೊತ್ತಿಗೆ ಹಸಿರುಮನೆ ಅನಿಲಗಳ ಸೂಸುವಿಕೆಯನ್ನು 2020ರ ಮಟ್ಟದಿಂದ 2030ರ ಹೊತ್ತಿಗೆ ಶೇ. 30 ರಷ್ಟು ಕಡಿತ ಮಾಡಬೇಕು.

— ವಸಂತರಾಜ ಎನ್.ಕೆ. —

ಯು.ಕೆ ಯ ಸ್ಕಾಟ್ಲೆಂಡಿನಲ್ಲಿರುವ ಗ್ಲಾಸ್ಗೋದಲ್ಲಿ ಹವಾಮಾನ ಬದಲಾವಣೆ ವಿಶ್ವಸಮ್ಮೇಳನ ಅಕ್ಟೋಬರ್ 31 ರಿಂದ ನವೆಂಬರ್ 12 ರ ವರೆಗೆ ನಡೆಯುತ್ತಿದೆ. ಪತ್ರಿಕೆ ನಿಮ್ಮ ಕೈತಲುಪಿ ಈ ಲೇಖನವನ್ನು ನೀವು ಓದುವುದರೊಳಗೆ ಅದುಮುಗಿದಿರುತ್ತದೆ. ಆದರೆ ಈ ಲೇಖನ ಬರೆದಾಗ (ನವೆಂಬರ್ 11) ಅದು ಇನ್ನೂ ನಡೆಯುತ್ತಿದ್ದು ಯಾವುದೇ ಅಂತಿಮ ಒಪ್ಪಂದ ಇನ್ನೂ ಆಗಿಲ್ಲ. ಈ ಸಮ್ಮೇಳವವನ್ನು COP 26 ಎಂದು ಕರೆಯಲಾಗಿದೆ. COP (Conference of the Parties) ನಲ್ಲಿರುವ`Parties' ಅಂದರೆ UN Framework Convention of Climate Change (UNFCCC-ಹವಾಮಾನ ಬದಲಾವಣೆಗೆ ವಿಶ್ವಸಂಸ್ಥೆಯ ಸಮಾವೇಶದ ಚೌಕಟ್ಟು) ಒಪ್ಪಂದ ಕ್ಕೆ ಸಹಿ ಹಾಕಿದ 192 ದೇಶಗಳು. ಈ COP ಸಮ್ಮೇಳನ ಪ್ರತಿ ವರ್ಷ ಹವಾಮಾನ ಬದಲಾವಣೆ ಒಪ್ಪಂದದ ಜಾರಿಯ ಪರಾಮರ್ಶೆ ನಡೆಸುತ್ತದೆ. ಮೊದಲ ಇಂತಹ ಸಮ್ಮೇಳನ COP1 ಜರ್ಮನಿಯ ಬರ್ಲಿನ್ ನಲ್ಲಿ ನಡೆದಿತ್ತು. ಇದು 26 ನೆಯ COP. ಹಲವು ದೇಶಗಳ ಉನ್ನತ ನಾಯಕರು, ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುತ್ತಿದ್ದಾರೆ. ಇತ್ತೀಚೆಗೆ ಜಗತ್ತಿನ ಹಲವು ಕಡೆ ಘಟಿಸಿದ ಹವಾಮಾನ ವೈಪರೀತ್ಯಗಳಿಂದಾಗಿ ಹಿಂದೆಂದಿಗಿಂತಲೂ ಹೆಚ್ಚಿನ ಗಮನವನ್ನು COP26 ಸೆಳೆದಿದೆ.

COP26ಸಮ್ಮೇಳನದ ಪ್ರಮುಖ ಉದ್ದೇಶ ಹವಾಮಾನ ಬದಲಾವಣೆಯ ಪರಿಣಾಮವಾಗಿ ಜಾಗತಿಕ ಉಷ್ಣ ಏರಿಕೆ 2 ಡಿಗ್ರಿ ಸಿ (ಸೆಂಟಿಗ್ರೇಡ್) ಗಿಂತ ಕಡಿಮೆಯಾಗಿರುವುದನ್ನು, ಸಾಧ್ಯವಾದರೆ 1.5 ಡಿಗ್ರಿಗೆ ಸೀಮಿತವಾಗಿರುವುದನ್ನುಖಾತ್ರಿ ಮಾಡುವ ಕ್ರಮಗಳನ್ನು ಕೈಗೊಳ್ಳುವುದು. ಈ ಜಾಗತಿಕ ಸಮಸ್ಯೆಯ ಪ್ರಮಾಣವನ್ನು ಅದಕ್ಕೆ ಜಾಗತಿಕ ಪರಿಹಾರವಾಗಿ ಸೂಸುವಿಕೆ ಕಡಿತದ ಕ್ರಮಗಳನ್ನು 30 ವರ್ಷಗಳಷ್ಟು ಹಿಂದೆಯೇ (1992ರ ಮೊದಲ UNFCCCರಿಯೋ ಡಿ ಜನೇರಿಯೊ ಶೃಂಗಸಭೆಯಲ್ಲಿಯೇ)ನಿರ್ಧರಿಸಲಾಗಿತ್ತು. ಆದರೆ ಈ ಕಡಿತವನ್ನು ಎಷ್ಟು ಯಾರು ಹೇಗೆ ಮಾಡುವುದು ಎಂಬುದರ ಬಗ್ಗೆ ಒಮ್ಮತ ಸಾಧ್ಯವಾಗಿಲ್ಲ. ಸೂಸುವಿಕೆ ಕಡಿತವನ್ನು ಈ ಸಮಸ್ಯೆಗೆ ''ಕಾರಣಕರ್ತರಾದ ಪ್ರಮಾಣದಲ್ಲಿ ಮಾಡಬೇಕು'. ಅಂದರೆ ಈ ಹವಾಮಾನ ಬದಲಾವಣೆಗೆ ಕಾರಣವಾದ ಕೈಗಾರಿಕಾ ಕ್ರಾಂತಿಯ ಪ್ರಯೋಜನ ಪಡೆದ ಶ್ರೀಮಂತ ದೇಶಗಳು ಈ ಸಮಸ್ಯೆಗೆ ಕೊಟ್ಟ ಕೊಡುಗೆಯ ಪ್ರಮಾಣದಲ್ಲಿ ಹೆಚ್ಚು ಕಡಿತ ಮಾಡಬೇಕು, ಅಲ್ಲದೆ ಅವರ ಬಡ ದೇಶಗಳಿಗೆ ಅಗತ್ಯ ತಂತ್ರಜ್ಞಾನ ಮತ್ತು ಪರಿಹಾರ ಕ್ರಮಗಳಿಗೆ ಅನುದಾನಗಳನ್ನು ಕೊಡಬೇಕು – ಎಂಬ ಬಡ ದೇಶಗಳ ಹಕ್ಕೊತ್ತಾಯವನ್ನು ಶ್ರೀಮಂತ ದೇಶಗಳು ನಿರ್ಲಕ್ಷ ಮಾಡುತ್ತಾ ಬಂದು ಸಮಸ್ಯೆ ಈಗ ಭೀಕರ ಸ್ವರೂಪ ಪಡೆದಿದೆ. (ವಿವರಗಳಿಗೆ ಹವಾಮಾನ ಬದಲಾವಣೆಯ ವಿಜ್ಞಾನ ಮತ್ತು ಸೂಸುವಿಕೆ ಕಡಿತದ ರಾಜಕೀಯ ಬಾಕ್ಸ್ ನೋಡಿ)

ಸಮ್ಮೇಳನದ ಮೊದಲೇ ಹಿಂದೆ ಒಪ್ಪಿದ ಸೂಸುವಿಕೆ ಕಡಿತದಲ್ಲಿ ಹೆಚ್ಚಿಸಿದ(NDCs-Nationally Determined Contributions) "ರಾಷ್ಟ್ರೀಯವಾಗಿ ನಿರ್ಧಾರಿತ ಕೊಡುಗೆ" ಗಳನ್ನು ಕೊಡಬೇಕಾಗಿತ್ತು. ಹೆಚ್ಚಿನ ದೇಶಗಳು ಇದನ್ನು ಮಾಡಿದ್ದರೂ (ವಿಶೇಷವಾಗಿ ಅಭಿವೃದ್ಧ ದೇಶಗಳು) ಕಡಿತದಲ್ಲಿ ಗಮನಾರ್ಹ ಹೆಚ್ಚಳಗಳನ್ನು ಮಾಡಿಲ್ಲ. ಚೀನಾ ಸೇರಿದಂತೆಕೆಲವು ದೇಶಗಳು ಕಡಿತಗಳ ಹೆಚ್ಚಳದ ಕುರಿತು ಅನೌಪಚಾರಿಕ ಘೋಷಣೆಗಳನ್ನು ಮಾಡಿವೆ. ಭಾರತ ಸೇರಿದಂತೆ ಕೆಲವು ದೇಶಗಳು ಇವೆರಡನ್ನೂ ಮಾಡಿಲ್ಲ. 'ಉಳಿದವರು ಎಷ್ಟು ಕಡಿತ ಮಾಡುತ್ತಾರೆ' ಎಂದು ಕಾದು ನೋಡುವ ತಂತ್ರ ಹೆಚ್ಚಿನ ದೇಶಗಳದ್ದು. ಈ ವರೆಗೆ ದೇಶಗಳು ಕೊಟ್ಟಿರುವ ಸೂಸುವಿಕೆ ಕಡಿತದಲ್ಲಿ ಹೆಚ್ಚಿಸಿದ "ಕೊಡುಗೆ"ಗಳನ್ನು ಪರಿಗಣಿಸಿ UNFCCಅಜಾಗತಿಕ ಉಷ್ಣ ಏರಿಕೆ 2.4ರಿಂದ 2.7 ಡಿಗ್ರಿ ಸಿ ಆಗಬಹುದು ಎಂದು ಅಂದಾಜಿಸಿದೆ. ನಮ್ಮ ಪ್ರಧಾನಿ ಸೇರಿದಂತೆ ಸಾಕಷ್ಟು ವಿಶ್ವ ನಾಯಕರು ಸಮ್ಮೇಳನದಲ್ಲಿ ಭಾರೀ ಭಾಷಣಗಳನ್ನು ಬಿಗಿದಿದ್ದಾರೆ, ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆದರೆ ಇದು ಪ್ರಸಿದ್ಧ ಯುವ ಸ್ವಿಡಿಶ್ ಪರಿಸರ ಕಾರ್ಯಕರ್ತೆ ಗ್ರೆಟಾ ತುನ್ಬರ್ಗ್ ಹೇಳಿದಂತೆ ಬರಿಯ 'ಬ್ಲಾ ಬ್ಲಾ ಬ್ಲಾ' (ಬೊಗಳೆ) ಯಷ್ಟೇ ಆಗಿದೆ.



ಮೋದಿ 'ಗ್ರಾಂಡ್ ಸ್ಟೈಲ್' ಘೋಷಣೆ

ಪ್ರಧಾನಿ ಮೋದಿ ಅವರು ಗ್ಲಾಸ್ಗೊದಲ್ಲಿ ಅನಿರೀಕ್ಷಿತವಾಗಿ ಘೋಷಿಸಿದ ಭಾರೀ ಸೂಸುವಿಕೆ ಕಡಿತದ ಕ್ರಮಗಳ ಕುರಿತಷ್ಟೇ ಸದ್ಯಕ್ಕೆ ಚರ್ಚಿಸಬಹುದು. ಅನಿರೀಕ್ಷಿತವಾಗಿ ಯಾಕೆಂದರೆ, ಸಮ್ಮೇಳನದ ಮೊದಲು ಅಭಿವೃದ್ಧ ದೇಶಗಳ, ಅಂತರಾಷ್ಟ್ರೀಯ ಪ್ರತಿನಿಧಿಗಳು ಭಾರತಕ್ಕೆ ಭೇಟಿ ನೀಡಿ ಭಾರತ 2050ರೊಳಗೆ ಒಟ್ಟು ಶೂನ್ಯ ಸೂಸುವಿಕೆ ಗುರಿಯ ಘೋಷಣೆಯನ್ನು ಮಾಡಲು ಒತ್ತಡ ಹಾಕಿದ್ದರು. (ವಿವರಗಳಿಗೆ **"ಹವಾಮಾನ ಬದಲಾವಣೆಯ ವಿಜ್ಞಾನ ಮತ್ತು ಸೂಸುವಿಕೆ ಕಡಿತದ ರಾಜಕೀಯ"** ಬಾಕ್ಸ್ ನೋಡಿ) ಭಾರತ ಇದಕ್ಕೆ ಪ್ರತಿಕ್ರಿಯಿಸಿರಲಿಲ್ಲ ಹಾಗೂ ಈಗಾಗಲೇ ಹೇಳಿದ ಹಾಗೆ NDC ಕುರಿತ ಬಾಧ್ಯ ತೆಗಳನ್ನು ಕೊಟ್ಟಿರಲಿಲ್ಲ. ಆದರೆ ಗ್ಲಾಸ್ಗೊದಲ್ಲಿ ಪ್ರಧಾನಿ ಅವರ ಮಾಮೂಲಿ 'ವೈಯಕ್ತಿಕ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವ ಗ್ರಾಂಡ್ ಸ್ಟೈಲ್' ನಲ್ಲಿ ಈ ಘೋಷಣೆಗಳನ್ನು ಮಾಡಿದರು. ಆದರೆ ಅವರ ಯಾವುದೇ ಘೋಷಣೆಗಳನ್ನು ಭಾರೀ ಹೆಡ್ ಲೈನ್

ಪುಟ 15 ಕ್ಕೆ

ಹವಾಮಾನ ಬದಲಾವಣೆಯ ವಿಜ್ಞಾನ ಮತ್ತು ಸೂಸುವಿಕೆ ಕಡಿತದ ರಾಜಕೀಯ

ಜಾಗತಿಕ ಉಷ್ಣತೆ ಏರಿಕೆ ಚಾರಿತ್ರಿಕವಾಗಿ ಕೈಗಾರಿಕಾ ಕ್ರಾಂತಿಯಿಂದ ಈ ವರೆಗೆ ಹಸಿರುಮನೆ ಅನಿಲಗಳ (ಪ್ರಮುಖವಾಗಿ ಕಾರ್ಬನ್ ಡೈಆಕ್ಸೈಡ್) ಒಟ್ಟು ಚಾರಿತ್ರಿಕ ಸೂಸುವಿಕೆಯ ಫಲ. 1850 ರಿಂದ 2019 ವರೆಗೆ ಜಗತ್ತು 2.51 ಲಕ್ಷ ಕೋಟಿ ಕಾರ್ಬನ್ ಡೈಆಕ್ಸೈಡ್ ಸೂಸುವಿಕೆ ಕಂಡಿದೆ. ಇದರಲ್ಲಿ ಶೇ.60 ಅಭಿವೃದ್ಧ ದೇಶಗಳ (ಉತ್ತರ ಅಮೆರಿಕ ಮತ್ತು ಪಶ್ಚಿಮ ಯುರೋಪು) ಪಾಲು. ಜಗತ್ತಿನ ಶೇ. 4 ಮಾತ್ರ ಜನಸಂಖ್ಯೆ ಇರುವ ಯು.ಎಸ್ ಒಟ್ಟು ಸೂಸುವಿಕೆಯ ಕಾಲುಭಾಗವನ್ನು ಹೊಂದಿದೆ. ಈ ಅವಧಿಯಲ್ಲಿ ಜಾಗತಿಕ ಉಷ್ಣತೆ ಏರಿಕೆ 1 ಡಿಗ್ರಿ ಸಿ (ಸೆಂಟಿಗ್ರೇಡ್) ಆಗಿದೆ. ಜಾಗತಿಕ ಉಷ್ಣತೆ ಏರಿಕೆ 1.5 ಡಿಗ್ರಿ ಸಿ ಮುಟ್ಟಿದರೆ ತೀವ್ರ ಅನಾಹುತಕಾರಿ ಹವಾಮಾನ ಬದಲಾವಣೆಗಳು ಆಗುತ್ತವೆ ಎಂದು ವಿಜ್ಞಾನ ಹೇಳುತ್ತದೆ.

ಇದನ್ನು ತಡೆಯಬೇಕಾದರೆ (ಅಂದರೆ ಉಷ್ಣತೆ ಏರಿಕೆ 1.5 ಡಿಗ್ರಿ ಸಿ ಒಳಗೆ ಇರಬೇಕಾದರೆ) ಇಡೀ ಜಗತ್ತು ಚಾರಿತ್ರಿಕ ಒಟ್ಟು ಸೂಸುವಿಕೆಯನ್ನು ಒಟ್ಟು "ಕಾರ್ಬನ್ ಬಜೆಟ್" ಒಳಗೆ ಇರುವಂತೆ ನೋಡಿಕೊಳ್ಳಬೇಕು. 1850ರಿಂದ ಜಗತ್ತು ಒಟ್ಟು ಶೂನ್ಯ ಸೂಸುವಿಕೆ ಮುಟ್ಟುವವರೆಗಿನ ಚಾರಿತ್ರಿಕ ಒಟ್ಟು ಸೂಸುವಿಕೆಯನ್ನು"ಕಾರ್ಬನ್ ಬಜೆಟ್" ಎನ್ನಲಾಗುತ್ತದೆ. ಒಟ್ಟು ಪ್ರಾಕೃತಿಕ (ಹಾಗೂ ಕೃತಕ) ಸೂಸುವಿಕೆ ಇಂಗಿಸುವ ಸಾಮರ್ಥ್ಯದ ಮಟ್ಟಕ್ಕೆ ಮಾನವ–ಜನಿತ ಸೂಸುವಿಕೆಯು ಕಡಿಮೆಯಾಗುವುದಕ್ಕೆ ಶೂನ್ಯ ಸೂಸುವಿಕೆ ಯ ಮಟ್ಟ ಎನ್ನುತ್ತಾರೆ. "ಕಾರ್ಬನ್ ಬಜೆಟ್" ಸುಮಾರು 3 ಲಕ್ಷ ಕೋಟಿ ಟನ್ ಆಗಿದೆ. ಇದರ ಶೇ. 85 ಈಗಾಗಲೇ ಖರ್ಚಾಗಿದೆ. ಉಳಿದ "ಕಾರ್ಬನ್ ಬಜೆಟ್"ನ್ನು ಮತ್ತು ಸೂಸುವಿಕೆ ಕಡಿತದ ಕೋಟಾಗಳನ್ನು ದೇಶಗಳ ನಡುವೆ ಹಂಚುವುದು ಹೇಗೆ ಎಂಬುದರ ಬಗ್ಗೆ ಒಮ್ಮತಕ್ಕೆ ಬರುವುದೇ ದೊಡ್ಡ ಸವಾಲಾಗಿದೆ.

"ಕಾರ್ಬನ್ ಬಜೆಟ್"ನ್ನು ದೇಶಗಳ ಅಭಿವೃದ್ಧಿಯ ಹಂತ, ಜನಸಂಖ್ಯೆಗಳ ಆಧಾರದ ಮೇಲೆ ಹಾಗೂ ಸೂಸುವಿಕೆ ಕಡಿತವನ್ನು ಚಾರಿತ್ರಿಕ ಒಟ್ಟು ಸೂಸುವಿಕೆಯ ಆಧಾರದ ಮೇಲೆ ಹಂಚಬೇಕು ಎಂಬುದು ಹಿಂದಿನಿಂದಲೂ ಭಾರತದ ನಾಯಕತ್ವದಲ್ಲಿ ಮೂರನೆಯ ಜಗತ್ತಿನ ದೇಶಗಳ ಒತ್ತಾಯವಾಗಿತ್ತು. ಅಂದರೆ ಅಭಿವೃದ್ಧ ದೇಶಗಳು ಒಟ್ಟಾಗಿ ಶೇ.60. ಹಾಗೂ ಯು.ಎಸ್ ಶೇ. 25 ಸೂಸುವಿಕೆಯ ಕಡಿತದ ಜವಾಬ್ದಾರಿ ಹೊರಬೇಕು. ಕಾರ್ಬನ್ ಬಜೆಟಿನ ಶೇ.80 ಭಾಗ ಮೂರನೆಯ ಜಗತ್ತಿನ ದೇಶಗಳಿಗೆ ಮೀಸಲಿಡಬೇಕು. ಈ ಸೂತ್ರವನ್ನು ಅಂಗೀಕರಿಸುವುದನ್ನುಅಭಿವೃದ್ಧ ದೇಶಗಳು ಕಳೆದ 30 ವರ್ಷಗಳಲ್ಲಿ ಹಲವಾರು ವಿಳಂಬ ತಂತ್ರಗಳ ಮೂಲಕ ಮುಂದಕ್ಕೆ ಹಾಕುತ್ತಾ ಬಂದಿವೆ.

ಸೂಸುವಿಕೆ ಕಡಿತದ ಹಂಚಿಕೆಗೆ ಯಾವುದೇ ಸೂತ್ರ ಅಂಗೀಕರಿಸದೆ ಪ್ಯಾರೀಸ್ ಒಪ್ಪಂದದಲ್ಲಿ ಜಗತ್ತು ಒಟ್ಟು ಶೂನ್ಯ ಸೂಸುವಿಕೆಯನ್ನು 2050ರೊಳಗೆ ಸಾಧಿಸಬೇಕೆಂದು ಹೇಳಲಾಯಿತು. ಆದರೆ ಇದರರ್ಥ ಪ್ರತಿಯೊಂದು ದೇಶ (ಅದರಲ್ಲೂ ಮೂರನೆಯ ಜಗತ್ತಿನ ದೇಶಗಳು) 2050ರೊಳಗೆ ಒಟ್ಟು ಶೂನ್ಯ ಸೂಸುವಿಕೆಯನ್ನು ಸಾಧಿಸಬೇಕು ಎಂದಲ್ಲ. ಹಾಗೆಂದು ಒಪ್ಪಂದದಲ್ಲಿ ಇರಲಿಲ್ಲ ಕೂಡಾ. ಬದಲಾಗಿ ಈ ಗುರಿ ಇಡೀ ಜಗತ್ತು ಸಾಧಿಸಬೇಕಾದರೆ ಅಭಿವೃದ್ಧ ದೇಶಗಳು 2030ರೊಳಗೆ ಒಟ್ಟು ಶೂನ್ಯ ಸೂಸುವಿಕೆಯನ್ನು ಸಾಧಿಸಬೇಕು ಎಂದು ಬಡದೇಶಗಳು ಒತ್ತಾಯಿಸಿದವು. ಆದರೂ ಅದನ್ನು ಒಪ್ಪಂದದಲ್ಲಿ ಕಾಣಿಸಲಾಗಲಿಲ್ಲ.

ಇದನ್ನು ತಿರುವು ಮುರುವು ಮಾಡಿ ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಇತ್ತೀಚಿನ ತಿಂಗಳುಗಳಲ್ಲಿ ಅಭಿವೃದ್ಧ ದೇಶಗಳ ನಾಯಕರು ಹಾಗೂ ಪ್ರತಿನಿಧಿಗಳು, ಎಲ್ಲ ದೇಶಗಳ(ಮುಖ್ಯವಾಗಿ ಚೀನಾ, ಭಾರತ) ಮೇಲೆ 2050ರೊಳಗೆ ಒಟ್ಟು ಶೂನ್ಯ ಸೂಸುವಿಕೆಯನ್ನು ಸಾಧಿಸುವ ಗುರಿಗೆ ಬದ್ಧತೆ ಘೋಷಿಸಬೇಕು ಎಂದು ಒತ್ತಡ ಹಾಕಿದರು. ಚೀನಾ ಮತ್ತು ಭಾರತ ಎರಡೂ ಈ ಒತ್ತಡಕ್ಕೆ ಮಣಿಯದಿದ್ದರೂ 2050ರೊಳಗೆ ಜಗತ್ತು ಶೂನ್ಯ ಸೂಸುವಿಕೆ ಸಾಧಿಸಬೇಕಾದರೆ ಅಭಿವೃದ್ಧ ದೇಶಗಳು 2030ರೊಳಗೆ ಶೂನ್ಯ ಸೂಸುವಿಕೆ ಸಾಧಿಸಬೇಕು ಎಂದು ಪ್ರತಿ ಒತ್ತಡ ಹಾಕುವುದರಲ್ಲಿ ವಿಫಲವಾದವು.

ಭಟ್ಟಂಗಿತನದ ಪ್ರದರ್ಶನ ರಂಗವಾದ ಬಿಜೆಪಿ ರಾಷ್ಟ್ರೀಯ ಅಧಿವೇಶನ



ಎರಡು ವರ್ಷಗಳ ನಂತರ ನಡೆದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ಅಧ್ಯಕ್ಷರ ಭಾಷಣ, ರಾಜಕೀಯ ಗೊತ್ತುವಳಿ ಮತ್ತು ಮೋದಿಯ ಸಮಾರೋಪ ಭಾಷಣ, ಈ ಯಾವುದರಲ್ಲೂ ಸ್ವಯಂ-ವಿಮರ್ಶೆಯ ಲವಲೇಶವೂ ಇರಲಿಲ್ಲ. ಅಲ್ಲಿ ಪ್ರದರ್ಶನಗೊಂಡದ್ದು ಅಸಂಬದ್ಧ ಮಟ್ಟ ತಲುಪಿದ ಸ್ವಯಂಪ್ರಶಂಸೆ, ಸರ್ವೋಚ್ಚ ಮುಖಂಡ'ನ ವ್ಯಕ್ತಿ ಪೂಜೆಯಷ್ಟೇ. ನಿರುದ್ಯೋಗ, ಕೃಷಿ ಬಿಕ್ಕಟ್ಟು, ಬೆಲೆಯೇರಿಕೆ ಮತ್ತು ಜನಗಳ ಆರ್ಥಿಕ ಸಂಕಷ್ಟಗಳ ಬಗ್ಗೆ ಬಿಜೆಪಿ ಏನೇನೂ ಕಾಳಜಿ ಹೊಂದಿಲ್ಲ, ಸದ್ಯದಲ್ಲೇ ನಡೆಯಲಿರುವ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ ಅದು ತನ್ನ ಎಂದಿನ ಕೋಮು ಧ್ರುವೀಕರಣ ಮತ್ತು 'ಹಿಂದೂ' ರಾಷ್ಟ್ರೀಯತಾವಾದದ ಸೂತ್ರವನ್ನೇ ಪ್ರಧಾನ ಸಾಧನವಾಗಿ ಅವಲಂಬಿಸಲು ನಿರ್ಧರಿಸಿದಂತೆ ಕಾಣುತ್ತದೆ.ಆದರೆ, ರಾಷ್ಟ್ರೀಯ ಕಾರ್ಯಕಾರಿಣಿ ಯಲ್ಲಿನ ಆತ್ಮಸಂತೃಪ್ತಿಯ ಪ್ರದರ್ಶನಕ್ಕೆ ವ್ಯತಿರಿಕ್ತವಾಗಿ ಜನಸಮುದಾಯದಲ್ಲಿ ಬಿಜೆಪಿ ವಿರುದ್ಧ ಅತೃಪ್ತಿ ಮಡುಗಟ್ಟಿರುವುದು ಇತ್ತೀಚಿನ ಉಪಚುನಾವಣೆ ಫಲಿತಾಂಶಗಳಲ್ಲಿ ವ್ಯಕ್ತಗೊಂಡಿದೆ.

* ಪ್ರಕಾಶ್ ಕಾರಟ್

ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ನವೆಂಬರ್ 7 ರಂದು ನಡೆಯಿತು. ಎರಡು ವರ್ಷಗಳ ಅಂತರದ ನಂತರ ಕಾರ್ಯಕಾರಿಣಿ ಸಭೆ ನಡೆದಿದ್ದರಿಂದ ಕೇಂದ್ರದ ಆಳುವ ಪಕ್ಷವು ರಾಜಕೀಯ ವಿದ್ಯಮಾನಗಳು ಮತ್ತು ಕೋವಿಡ್-ಪೀಡಿತ ಅವಧಿಯಲ್ಲಿ ನಡೆದ ಕೆಲಸಕಾರ್ಯಗಳನ್ನು ಹೇಗೆ ಅಂದಾಜು ಮಾಡಬಹುದು ಎನ್ನುವ ಕುತೂಹಲ ಎಲ್ಲರಲ್ಲೂ ಇತ್ತು.

ಆದರೆ, ಈ ಅವಧಿಯಲ್ಲಿ ಸರ್ಕಾರದ ಕೆಲಸಗಳು ಹಾಗೂ ನೀತಿಗಳ ವಸ್ತುನಿಷ್ಠ ವಿಮರ್ಶೆ ನಡೆಯಬಹುದೆಂದು ನಿರೀಕ್ಷಿಸಿದ್ದ ಯಾರಿಗೇ ಆದರೂ ಕಾದಿದ್ದು ನಿರಾಶೆಯೇ ಹೊರತು ಬೇರೇನೂ ಅಲ್ಲ. ಬಿಜೆಪಿ ಅಧ್ಯಕ್ಷರ ಭಾಷಣ, ರಾಜಕೀಯ ಗೊತ್ತುವಳಿ ಮತ್ತು ಮೋದಿಯ ಸಮಾರೋಪ ಭಾಷಣ -ಇವೆಲ್ಲವನ್ನೂ ಒಟ್ಟಾಗಿ ತೆಗೆದುಕೊಂಡರೂ ಸ್ವಯಂ-ವಿಮರ್ಶೆಯ ಲವಲೇಶವೂ ಅಲ್ಲಿ ಕಂಡು ಬಂದಿಲ್ಲ.

ಸಭೆಯಲ್ಲಿ ಅಂಗೀಕರಿಸಿದ ರಾಜಕೀಯ ಗೊತ್ತುವಳಿಯಲ್ಲಂತೂ ಎಲ್ಲ ಕ್ಷೇತ್ರಗಳಲ್ಲಿ ಪ್ರಧಾನಿ ನರೇಂದ್ರ ಮೋದಿಯ ನೀತಿಗಳು ಮತ್ತು ಸಾಧನೆಗಳ ಮುಖಸ್ತುತಿ ತುಂಬಿ ತುಳುಕುತ್ತಿತ್ತು. ಕೋವಿಡ್ ನಿರ್ವಹಣೆ, ಆರೋಗ್ಯ ವ್ಯವಸ್ಥೆ, ಉದ್ಯೋಗ, ಉಚಿತ ಆಹಾರಧಾನ್ಯ ವಿತರಣೆ ಇತ್ಯಾದಿ ಎಲ್ಲ ರಂಗಗಳಲ್ಲಿನ ಸಾಧನೆಯನ್ನು ಗೊತ್ತುವಳಿ ಹಾಡಿ ಹೊಗಳಿದೆ. ಗೊತ್ತುವಳಿಯ ಪ್ರತಿಯೊಂದು ಪ್ಯಾರಾದಲ್ಲೂ ಮೋದಿ ಉಪಕ್ರಮಗಳಿಗಾಗಿ ಅವರನ್ನು ಹೊಗಳುವ ಉಲ್ಲೇಖ ಇದ್ದೇ ಇದೆ. ಒಟ್ಟಿನಲ್ಲಿ ಹೇಳುವುದಾದರೆ, ಇದೊಂದು ಭಟ್ಟಂಗಿತನದ ಕಸರತ್ತು.

ಸರ್ವೋನ್ನತ ನಾಯಕನ ವ್ಯಕ್ತಿ ಪೂಜೆ ಮತ್ತು ಪಕ್ಷದಲ್ಲಿ ಮೋದಿ ಹೊಂದಿರುವ ಹಿಡಿತ ಏನೆಂಬುದನ್ನು ಇದು ಪೂರ್ಣವಾಗಿ ಪ್ರದರ್ಶಿಸಿದೆ. ಕೋವಿಡ್ ನಿರ್ವಹಿಸುವಲ್ಲಿ ಮೋದಿ ಸರ್ಕಾರ ಮಾಡಿದ 'ಒಳ್ಳೆಯ' ಕೆಲಸಗಳನ್ನು ಅದರಲ್ಲಿ ವಿವರಿಸಲಾಗಿದೆ. ಲಸಿಕೆಗಾಗಿ 35,000 ಕೋಟಿ ರೂಪಾಯಿ ಒದಗಿಸಿದ್ದು, 80 ಕೋಟಿ ಬಡವರಿಗೆ ಎಂಟು ತಿಂಗಳ ಕಾಲ ಉಚಿತ ಆಹಾರ ಧಾನ್ಯ ವಿತರಣೆ, ಆರೋಗ್ಯ ವಿಮೆ ಯೋಜನೆ ಅದರಲ್ಲಿ ಸೇರಿವೆ. ನೂರು ಕೋಟಿ ಡೋಸ್ ಲಸಿಕೆ ನೀಡಿರುವುದನ್ನು ಸಂಭ್ರಮಿಸಲಾಗಿದೆ. ಆದರೆ, ದೇಶದ ವಯಸ್ಕ ಜನಸಂಖ್ಯೆಯ ಶೇಕಡ 30 ಜನರಿಗೆ ಮಾತ್ರವೇ ಎರಡೂ ಡೋಸ್ ಲಸಿಕೆ ಹಾಕಲಾಗಿದೆ ಎಂಬ ವಾಸ್ತವಾಂಶವನ್ನು ಗೊತ್ತುವಳಿಯಲ್ಲಿ ಎಲ್ಲೂ ನಮೂದಿಸಿಲ್ಲ. ಲಸಿಕೆ ನೀಡಿಕೆಯ ಈಗಿನ ದರದಲ್ಲಿ 2021ರೊಳಗೆ ಎಲ್ಲ ವಯಸ್ಕರಿಗೆ ಲಸಿಕೆ ಹಾಕುವ ಸರ್ಕಾರದ ಗುರಿ ತಲುಪುವುದು ಕನಸಿನ ಮಾತು ಎನ್ನುವುದನ್ನು ಕೂಡ ಅದು ಎಲ್ಲೂ ಹೇಳಿಲ್ಲ.

ಕೋವಿಡ್ ಮಹಾಸೋಂಕಿಗೆ ಬಲಿಯಾದ ಲಕ್ಷಾಂತರ ಜನರಿಗೆ ಸಹಾನುಭೂತಿ ವ್ಯಕ್ತಪಡಿಸುವ, ಲಸಿಕೆ ಸಂಗ್ರಹದಲ್ಲಿ ಆಗಿರುವ ಅವಾಂತರದ ಬಗ್ಗೆ ಮತ್ತು ಆರೋಗ್ಯ ಸೇವಾ ವ್ಯವಸ್ಥೆ ಹಾಗೂ ಆಮ್ಲಜನಕ ಪೂರೈಕೆಯಲ್ಲಿನ ಅವ್ಯವಸ್ಥೆ ಕುರಿತು ಒಂದೇ ಒಂದು ಮಾತನ್ನೂ ಆಡಿಲ್ಲ.

ನಿಭಾಯಿಸಬೇಕಾದ ಪ್ರಮುಖ ಆರ್ಥಿಕ ಸಮಸ್ಯೆಗಳ ಬಗ್ಗೆಯೂ ಅದು ಚಕಾರವೆತ್ತಿಲ್ಲ. ರೈತರು ನಡೆಸುತ್ತಿರುವ ಸುದೀರ್ಘ ಚಳವಳಿ ಬಗ್ಗೆಯೂ ಏನನ್ನೂ ಹೇಳಿಲ್ಲ. ಆದರೆ ಸರ್ಕಾರ ರೈತರ-ಪರ ಕೈಗೊಂಡ ಕ್ರಮಗಳ ಉದ್ದ ಪಟ್ಟಿಯನ್ನೇ ನೀಡಲಾಗಿದೆ. ಉದ್ಯೋಗಕ್ಕೆ ಸಂಬಂಧಿಸಿ ಹೇಳುವುದಾದರೆ, ಡಿಜಿಟಲೀಕರಣ ಹಾಗೂ ಸ್ಟಾರ್ಟ್-ಅಪ್‌ಗಳಿಂದಾಗಿ "ಯುವಜನರು ಉದ್ಯೋಗ ನಿರೀಕ್ಷಿಸುವ ಬದಲು ಉದ್ಯೋಗದಾತರಾಗಿದ್ದಾರೆ' ಎಂದು ಬಿಜೆಪಿ ಗೊತ್ತುವಳಿ ಹೇಳಿದೆ!

ಜಮ್ಮು ಮತ್ತು ಕಾಶ್ಮೀರದಲ್ಲಿ ಸಂವಿಧಾನದ 370ನೇ ವಿಧಿಯನ್ನು ರದ್ದುಪಡಿಸಿದ ನಂತರ ಭದ್ರತೆ, ಶಾಂತಿ ಮತ್ತು ಅಭಿವೃದ್ಧಿಯ ಹೊಸ ಅಧ್ಯಾಯ ಆರಂಭವಾಗಿದೆ ಎನ್ನುತ್ತದೆ ಬಿಜೆಪಿ. ಸಾವಿರಾರು ಜನರ ಬಂಧನ, ಇಂಟರ್‌ನೆಟ್ ಸೇವೆ ಸ್ಥಗಿತ ಮತ್ತು ಜನರ ಓಡಾಟದ ಮೇಲಿನ ನಿರ್ಬಂಧ ಮೊದಲಾದವುಗಳಿಂದಾಗಿ ಅಲ್ಲಿ ಸ್ಮಶಾನಮೌನ ಆವರಿಸಿರುವುದನ್ನು ಉಲ್ಲೇಖಿಸಿಲ್ಲ.

ಸ್ವಯಂಪ್ರಶಂಸೆಯ ದನಿಯನ್ನಂತೂ ಅಸಂಬದ್ಧ ಮಟ್ಟದ ವರೆಗೆ ಒಯ್ಯಲಾಗಿದೆ. ಜಾಗತಿಕ ತಾಪಮಾನ ನಿರ್ವಹಣೆಗೆ ಮೋದಿ ಇಡೀ ಜಗತ್ತಿಗೆ ದಾರಿ ತೋರಿದ್ದಾರಂತೆ. ಮೋದಿಯ ವಿದೇಶಾಂಗ ನೀತಿಯಿಂದಾಗಿ ಭಾರತವು ಅಧಿಕಾರ ಸಮತೋಲನದ ಶಕ್ತಿಯಷ್ಟೇ ಮಾತ್ರವಲ್ಲ ಜಗತ್ತಿನ ಒಂದು ದೊಡ್ಡ ಶಕ್ತಿಯಾಗಲು ಯತ್ನಿಸುತ್ತಿದೆ ಎನ್ನುತ್ತದೆ ಈ ನಿರ್ಣಯ.

ಜನತೆಯ ಸಂಕಟಗಳ ಬಗ್ಗೆ ನಿರ್ಲಕ್ಷ್ಯ ಧೋರಣೆ ಹಾಗೂ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದ ಎಲ್ಲಾ ವೈಫಲ್ಯಗಳನ್ನು ಬೇಕೆಂದೇ ಮರೆಮಾಚುವ ಪ್ರವೃತ್ತಿ ಒಂದು ಅಂಶವನ್ನು ಸ್ಪಷ್ಟಪಡಿಸುತ್ತದೆ. ಉತ್ತರ ಪ್ರದೇಶ, ಉತ್ತರಾಖಂಡ, ಪಂಜಾಬ್, ಗೋವಾ ಮತ್ತು ಮಣಿಪುರ ರಾಜ್ಯಗಳಲ್ಲಿ ನಡೆಯಲಿರುವ ವಿಧಾನ ಸಭೆ ಚುನಾವಣೆಗಳಲ್ಲಿ ತನ್ನ ಚುನಾವಣಾ ಭವಿಷ್ಯದ ಮೇಲೆ ಪರಿಣಾಮ ಬೀರುವಂಥ ನಿರುದ್ಯೋಗ, ಕೃಷಿ ಬಿಕ್ಕಟ್ಟು, ಬೆಲೆಯೇರಿಕೆ ಮತ್ತು ಜನಗಳ ಆರ್ಥಿಕ ಸಂಕಷ್ಟಗಳ ಬಗ್ಗೆ ಬಿಜೆಪಿ ಏನೇನೂ ಕಾಳಜಿ ಹೊಂದಿಲ್ಲ ಎನ್ನುವುದೇ ಆ ಅಂಶವಾಗಿದೆ. ಆ ಐದು ರಾಜ್ಯಗಳ ಪೈಕಿ ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ಅಧಿಕಾರದಲ್ಲಿದೆ.

ತನ್ನ ಬಹುಕಾಲದ ಕೋಮು ಧ್ರುವೀಕರಣ ಮತ್ತು 'ಹಿಂದೂ' ರಾಷ್ಟ್ರೀಯತಾವಾದದ ಸೂತ್ರವನ್ನೇ ಓಟು ಕ್ರೋಡೀಕರಣದ ಪ್ರಧಾನ ಸಾಧನವಾಗಿ ಅವಲಂಬಿಸಬೇಕೆಂದಿದೆ ಎನ್ನುವುದು ಗೊತ್ತುವಳಿಯಲ್ಲಿ ಅಳವಡಿಸಲಾಗಿರುವ ಧೋರಣೆಯಿಂದ ತಿಳಿಯುತ್ತದೆ. ಅಲ್ಲದೆ ಇದಕ್ಕೆ ಪೂರಕವಾಗಿ ಅಪಾರ ಪ್ರಮಾಣದ ಹಣದ ಶಕ್ತಿಯನ್ನು ಹಾಗೂ ಉತ್ತರ ಪ್ರದೇಶದಂಥ ರಾಜ್ಯಗಳಲ್ಲಿ ಜಾತಿ-ಸಾಮಾಜಿಕ ಸಮೀಕರಣವನ್ನಂತೂ ಅದು ಬಳಸಿಕೊಳ್ಳಲಿದೆ ಎನ್ನುವುದು ಸ್ಪಷ್ಟ. ಯೋಗಿ ಆದಿತ್ಯನಾಥ ಅವರೇ ರಾಜಕೀಯ ಗೊತ್ತುವಳಿಯನ್ನು ಮಂಡಿಸಿದ್ದು ಉತ್ತರ ಪ್ರದೇಶ ಚುನಾವಣೆಯಲ್ಲಿ ಬಿಜೆಪಿ ಯಾವುದಕ್ಕೆ ಒತ್ತು ನೀಡಲಿದೆ ಎನ್ನುವುದರ ಸೂಚಕವಾಗಿದೆ. ಆದಿತ್ಯನಾಥ ಈಗಾಗಲೇ ಕೋಮುವಾದಿ ರಾಜಕೀಯವನ್ನು ಕೆದಕಲು ಆರಂಭಿಸಿದ್ದಾರೆ. ಹಿಂದಿನ ಸರ್ಕಾರಗಳಲ್ಲಿ ಪಡಿತರ ಸಾಮಗ್ರಿ ಪಡೆಯಲು 'ಅಬ್ಬಾ ಜಾನ್'ಗಳಿಗೆ ಆದ್ಯತೆ ನೀಡಲಾಗುತ್ತಿತ್ತು ಎಂದು ಹೇಳುವ ಹಾಗೂ 2017ರಲ್ಲಿ ಮಾಡಿದಂತೆ ಕೈರಾನಾದಿಂದ ಹಿಂದೂಗಳ ವಲಸೆ ಮುಂತಾದ ಪಕ್ಕಾ ಕೋಮುವಾದಿ ಅಬ್ಬರದಲ್ಲಿ ಅವರು ಈಗಾಗಲೇ ತೊಡಗಿದ್ದಾರೆ.

ಏನೇ ಇರಲಿ, ಮೂರು ಲೋಕಸಭೆ ಹಾಗೂ 29 ಅಸೆಂಬ್ಲಿ ಕ್ಷೇತ್ರಗಳಿಗೆ ಇತ್ತೀಚೆಗೆ ನಡೆದ ಉಪಚುನಾವಣೆಗಳಲ್ಲಿ "ಒಂದು ದೊಡ್ಡ ವಿಜಯ" ಸಿಕ್ಕಿದೆ ಎಂದು ಹೇಳಿಕೊಂಡರೂ, ಕಳವಳಕ್ಕೆ ಕಾರಣವಂತೂ ಇದ್ದೇ ಇದೆ. ಕೋಮು-ಜಾತಿ ಕ್ರೋಡೀಕರಣದ ಸೂತ್ರದ ಮೇಲಷ್ಟೇ ತಾನು ಅವಲಂಬಿಸಬಹುದೇ ಎನ್ನುವುದರ ಬಗ್ಗೆ ಬಿಜೆಪಿ ನಾಯಕತ್ವ ಚಿಂತನೆ ನಡೆಸುವಂತೆ ಇದು ಮಾಡಬೇಕು. ಅಸ್ಸಾಂ, ಮತ್ತು ಸ್ವಲ್ಪ ಮಟ್ಟಿಗೆ ಮಧ್ಯ ಪ್ರದೇಶ ಹೊರತು ಪಡಿಸಿದರೆ ಹಿಮಾಚಲ ಪ್ರದೇಶ, ರಾಜಸ್ಥಾನ, ಬಂಗಾಳ, ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿನ ತನ್ನ ಸಾಧನೆ ಬಗ್ಗೆ ಬಿಜೆಪಿಗೆ ಚಿಂತೆಯಾಗಬೇಕಿತ್ತು.

ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿನ ಆತ್ಮಸಂತೃಪ್ತಿಯ ಪ್ರದರ್ಶನಕ್ಕೆ ವ್ಯತಿರಿಕ್ತವಾಗಿ ಜನಸಮುದಾಯದಲ್ಲಿ ಬಿಜೆಪಿ ವಿರುದ್ಧ ಅತೃಪ್ತಿ ಮಡುಗಟ್ಟಿರುವುದು ಉಪಚುನಾವಣೆ ಫಲಿತಾಂಶಗಳಲ್ಲಿ ವ್ಯಕ್ತಗೊಂಡಿದೆ.

ಅನು: ವಿಶ್ವ



"ಜನತೆಯನ್ನು ಉಳಿಸಿ-ದೇಶವನ್ನು ಉಳಿಸಿ"- ಕಾರ್ಮಿಕರ ರಾಷ್ಟ್ರೀಯ ಸಮಾವೇಶದ ರಣಕಹಳೆ

ಪುಟ 2 ರಿಂದ

ತಿದ್ದುಪಡಿ ಮಸೂದೆಯನ್ನು ರದ್ದು ಮಾಡಬೇಕು; ಯಾವುದೇ ರೀತಿಯ ಖಾಸಗೀಕರಣ ಬೇಡ ಮತ್ತು ಎನ್‌ಎಂಪಿ ರದ್ದತಿ; ಆದಾಯ ತೆರಿಗೆ ವ್ಯಾಪ್ತಿಯ ಹೊರಗಿರುವ ಕುಟುಂಬಗಳಿಗೆ ಆಹಾರ ಮತ್ತು ಮಾಸಿಕ ರೂ.7500 ಆದಾಯ ಬೆಂಬಲ; ಮನರೇಗಕ್ಕೆ ಹೆಚ್ಚುವರಿ ಹಣ ಒದಗಿಸಬೇಕು ಮತ್ತು ಅದನ್ನು ನಗರಗಳಿಗೂ ವಿಸ್ತರಿಸಬೇಕು; ಅಂಗನವಾಡಿ, ಆಶಾ, ಮಧ್ಯಾಹ್ನದ ಊಟ ಮತ್ತಿತರ ಸ್ಕೀಮ್ ಕಾರ್ಮಿಕರಿಗೆ ಕನಿಷ್ಠ ವೇತನ ಮತ್ತು ಸಾಮಾಜಿಕ ಭದ್ರತೆ; ಮಹಾಸೋಂಕಿನ ನಡುವೆ ಜನತೆಯ ಸೇವೆಯಲ್ಲಿ ತೊಡಗಿರುವ ಮುಂಚೂಣಿಯ ಕೆಲಸಗಾರರಿಗೆ ರಕ್ಷಣೆ ಮತ್ತು ವಿಮಾ ಸೌಲಭ್ಯಗಳು; ಕೃಷಿ, ಶಿಕ್ಷಣ, ಆರೋಗ್ಯ ಮತ್ತು ಇತರ ಮಹತ್ವದ ಸಾರ್ವಜನಿಕ ಸೇವೆಗಳಿಗೆ ಸಾರ್ವಜನಿಕ ಹೂಡಿಕೆಗಳಲ್ಲಿ ಏರಿಕೆ, ಅದಕ್ಕಾಗಿ ಸಂಪತ್ತು ತೆರಿಗೆ ಮುಂತಾದವುಗಳ ಮೂಲಕ ಶ್ರೀಮಂತರ ಮೇಲೆ ತೆರಿಗೆ, ತನ್ಮೂಲಕ ರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ ಚೇತರಿಕೆ ತರಬೇಕು; ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಅಬಕಾರಿ ಸುಂಕಗಳನ್ನು ಇಳಿಸಬೇಕು; ಮತ್ತು ಬೆಲೆಯೇರಿಕೆಗಳನ್ನು ತಡೆದು ನಿಲ್ಲಿಸಲು ಮೂರ್ತ ಸರಿಪಡಿಕೆ ಕ್ರಮಗಳನ್ನು ಕೈಗೊಳ್ಳಬೇಕು; ಕಾಂಟ್ರಾಕ್ಟ್ ಕಾರ್ಮಿಕರನ್ನು ನಿಯಮಿತಗೊಳಿಸಬೇಕು; ಸಮಾನ ಕೆಲಸಕ್ಕೆ ಸಮಾನ ವೇತನ; ರಾಷ್ಟ್ರೀಯ ಪೆನ್ಶನ್ ಸ್ಕೀಮನ್ನು ರದ್ದು ಮಾಡಿ ಹಳೆಯ ಪೆನ್ಶನ್ ಸ್ಕೀಮನ್ನು ಮತ್ತೆ ತರುವುದು ಇತ್ಯಾದಿ ಆಗ್ರಹಗಳನ್ನು ಸಮಾವೇಶ ಪುನರುಚ್ಚರಿಸಿತು.

ಈ ಸಂದೇಶವನ್ನು ರಾಜ್ಯಗಳು, ಜಿಲ್ಲೆಗಳು, ಕಾರ್ಖಾನೆ ಗೇಟ್‌ಗಳು, ಪಟ್ಟಣಗಳ ಮಂಡಿಗಳು ಇತ್ಯಾದಿಗಳ ಮೂಲಕ ಜನಸಮೂಹಗಳವರೆಗೆ ಒಯ್ದು ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ದುಡಿಯುವ ಜನಗಳನ್ನು ಮತ್ತು ಒಟ್ಟಾರೆಯಾಗಿ ಸರ್ವ ಜನತೆಯನ್ನು ಸಿದ್ಧಗೊಳಿಸಿ, ಜನಗಳನ್ನು ಉಳಿಸಲು ಮತ್ತು ದೇಶವನ್ನು ಉಳಿಸಲು ನಡೆಯುತ್ತಿರುವ ಐಕ್ಯ ಹೋರಾಟವನ್ನು ಇನ್ನಷ್ಟು ಎತ್ತರಕ್ಕೊಯ್ಯುವುದಕ್ಕಾಗಿ ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರವನ್ನು ಬೃಹತ್ ಪ್ರಮಾಣದಲ್ಲಿ ಯಶಸ್ವಿಗೊಳಿಸಬೇಕು ಎಂದು ಕಾರ್ಮಿಕರಿಗೆ ರಾಷ್ಟ್ರೀಯ ಸಮಾವೇಶ ಕರೆ ನೀಡಿದೆ.







ವಿಜಯನಗರ ಮತ್ತು ಬಳ್ಳಾರಿ ಸಿಪಿಐ(ಎಂ) 12ನೇ ಜಿಲ್ಲಾ ಸಮ್ಮೇಳನ

ಬಿಜೆಪಿ ದೇಶದಲ್ಲಿ ಅಭಿವೃದ್ಧಿ ಮಾಡದೆ ಕೋಮುವಾದ ಸೃಷ್ಟಿಸುತ್ತಿದೆ

ರೈತರ ಆತ್ಮಹತ್ಯೆಗಳನ್ನು ತಡೆಯುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿವೆ ಎಂದು ಸಿಪಿಎಂ, ರಾಜ್ಯ ಕಾರ್ಯದರ್ಶಿ ಯು. ಬಸವರಾಜ ಆರೋಪಿಸಿದರು. ಕುರುಗೋಡು ಪಟ್ಟಣದಲ್ಲಿ ಭಾನುವಾರ ಆಯೋಜಿಸಿದ್ದ ವಿಜಯನಗರ ಮತ್ತು ಬಳ್ಳಾರಿ ಸಿಪಿಐ(ಎಂ) 12ನೇ ಜಿಲ್ಲಾ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದ ಜನರ ಆದಾಯ ಕಡಿಮೆ ಇದೆ. ಗ್ರಾಮೀಣ ಭಾಗದ ಜನರ ಬದುಕು ಹಸನಗೊಳಿಸಲು ಉದ್ಯೋಗ ಖಾತ್ರಿ ಯೋಜನೆಯಲ್ಲಿ ವರ್ಷದಲ್ಲಿ ಕನಿಷ್ಠ 200 ದಿನ ಉದ್ಯೋಗ ನೀಡಿ ಪ್ರತಿದಿನ ರೂ. 700 ಕೂಲಿ ನೀಡಬೇಕು. ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುವ ಅಂಗನವಾಡಿ, ಆಶಾ ಮತ್ತು ಬಿಸಿ ಊಟ ನೌಕರರಿಗೆ ಕನಿಷ್ಠ ಮಾಸಿಕ 21 ಸಾವಿರ ಗೌರವ ಧನ ನೀಡಬೇಕು ಎಂದು ಒತ್ತಾಯಿಸಿದರು.



ಅಗತ್ಯ ವಸ್ತುಗಳನ್ನು ಖರೀದಿಸಿ ಹೆಚ್ಚು ತೆರಿಗೆ ಕಟ್ಟುತ್ತಿರುವ ಜನಸಾಮಾನ್ಯರಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳು ದೊರೆಯುತ್ತಿಲ್ಲ. ಉದ್ಯೋಗ ಸೃಷ್ಟಿಯ ಭರವಸೆ ಭರವಸೆಯಾಗಿಯೇ ಉಳಿದಿವೆ. ಚಿಲ್ಲರೆ ವ್ಯಾಪಾರದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಹಾವಳಿ ಹೆಚ್ಚಾಗಿ ಗ್ರಾಮೀಣ ಭಾಗದ ಸಣ್ಣಪುಟ್ಟ ವರ್ತಕರೂ ಈ ನಿರುದ್ಯೋಗಿಗಳಾಗುತ್ತಿದ್ದಾರೆ. ಬಡವರ ಪರವಾದ ಆಡಳಿತ ನಡೆಸಬೇಕಾದ ಸರ್ಕಾರ ಶ್ರೀಮಂತರ ಪರವಾದ ನಿಲುವುಗಳನ್ನು ತಾಳಿದೆ ಎಂದು ಆರೋಪಿಸಿದರು.

ಸಿಪಿಐ(ಎಂ) ರಾಜ್ಯ ಮುಖಂಡರಾದ ಎಸ್. ವೈ. ಗುರುಶಾಂತ ಮಾತನಾಡಿ, ಜಿಲ್ಲೆಯಲ್ಲಿ ಕೇವಲ 2 ಶಾಖೆಗಳಿದ್ದವು. ಇಂದು 47 ಶಾಖೆಗಳು ಸ್ಥಾಪನೆಯಾಗಿವೆ. ಸಿಪಿಐ(ಎಂ) ಪಕ್ಷ ಸಾಮಾಜಿಕ ಬದಲಾವಣೆಗಾಗಿ ನಿತ್ಯ ಕೆಲಸ ಮಾಡುತ್ತಿದೆ ಎಂದರು. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಹೈದರಾಬಾದ್ ಕರ್ನಾಟಕ ಪ್ರದೇಶವನ್ನು ಕಲ್ಯಾಣ ಕರ್ನಾಟಕ ಎಂದು ಹೆಸರು ಮರುನಾಮಕರಣ ಮಾಡಿದೆ. ಆದರೆ ಅಭಿವೃದ್ಧಿಯನ್ನು ಕಡೆಗಣಿಸಿದೆ ಎಂದು ಆರೋಪಿಸಿದರು.

ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಜಿಲ್ಲೆಯ ವಿವಿಧ ಭಾಗಗಳಿಂದ ಆಗಮಿಸಿದ್ದ ಕಾರ್ಯಕರ್ತರು ಮೆರವಣಿಗೆ ನಡೆಸಿದರು. ಪಟ್ಟಣದ ಸಿಂದಿಗೇರಿ ರಸ್ತೆಯಲ್ಲಿರುವ ಗಾದಿಲಿಂಗೇಶ್ವರ ದೇವಸ್ಥಾನದಿಂದ ಪ್ರಾರಂಭಗೊಂಡ ಮೆರವಣಿಗೆ ಮುಖ್ಯವೇದಿಕೆಯ ಬಳಿ ಮುಕ್ತಾಯಗೊಂಡಿತು. ಡೊಳ್ಳು, ಹಗಲುವೇಶ ಧಾರಿಗಳು, ತಮಟೆ ಕಲಾತಂಡಗಳು ಭಾಗವಹಿಸಿ ಮೆರವಣಿಗೆಯ ಮೆರಗುಹೆಚ್ಚಿಸಿದ್ದವು.



ಅಧ್ಯಕ್ಷತೆ ವಹಿಸಿದ್ದ ವಿ.ಎಸ್. ಶಿವಶಂಕರ್ ಮಾತನಾಡಿ, ಕೇಂದ್ರದಲ್ಲಿ 7 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರ ಉದ್ಯೋಗ ಭರವಸೆ ಈಡೇರಿಸಿಲ್ಲ. ಬದಲಾಗಿ ಎಲ್ಲ ಕ್ಷೇತ್ರಗಳನ್ನು ಖಾಸಗಿಕರಣ ಮಾಡಿ ನಿರುದ್ಯೋಗ ಸೃಷ್ಟಿಸುತ್ತಿದ್ದಾರೆ ಎಂದು ಆರೋಪಿಸಿದರು.

ರೈತರಿಗೆ ನೆರವಾಗಬೇಕಾದ ಸರ್ಕಾರಗಳು ಅವರ ವಿರುದ್ಧವಾದ ಕಾನೂನುಗಳನ್ನು ಜಾರಿಗೊಳಿಸಿ ಬೀದಿಪಾಲು ಮಾಡುತ್ತಿದ್ದಾರೆ. ಅವರಿಗೆ ಮುಂದಿನ ಚುನಾವಣೆಯಲ್ಲಿ ಮತದಾರರು ತಕ್ಕ ಪಾಠಕಲಿಸಲಿದ್ದಾರೆ ಎಂದು ಎಚ್ಚರಿಸಿದರು. ಮುಖಂಡರಾದ ಮೀನಾಕ್ಷಿ ಸುಂದರಂ, ಆರ್.ಎಸ್. ಬಸವರಾಜ, ಜಿ. ನಾಗರಾಜ, ಬಿ. ಮಾಳಮ್ಮ, ಕೆ. ನಾಗರತ್ನಮ್ಮ, ಜೆ. ಸತ್ಯಬಾಬು, ಎಂ. ಜಂಬಯ್ಯನಾಯಕ್, ಎಚ್. ತಿಪಯ್ಯ, ಆರ್. ಭಾಸ್ಕರ್ ರೆಡ್ಡಿ, ಆಂಜನೇಯ. ಗಾಳಿಬಸವರಾಜ, ಎನ್. ಸೋಮಪ್ಪ, ಎ. ಮಂಜುನಾಥ ಮುಂತಾದವರಿದ್ದರು.

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಯ 12 ನೆಯ ಅವಿಭಜಿತ ಜಿಲ್ಲಾ ಸಮ್ಮೇಳನ ವು ಇದೇ 2021 ಅಕ್ಟೋಬರ್ 7 ಮತ್ತು 8 ರಂದು ಕುರುಗೋಡು ಪಟ್ಟಣದಲ್ಲಿ ಯಶಸ್ವಿಯಾಗಿ ಜರುಗಿತು. ಈ ಸಮ್ಮೇಳನವು ನೂತನವಾಗಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲಾ ಸಮಿತಿಗಳನ್ನು ಆಯ್ಕೆ ಮಾಡಿತು. ತಲಾ 13 ಜನರ ಎರಡು ಜಿಲ್ಲಾ ಸಮಿತಿಗಳು ಪ್ರತ್ಯೇಕವಾಗಿ ಸಭೆ ಸೇರಿ ಕಾರ್ಯದರ್ಶಿ ಯನ್ನು ಆಯ್ಕೆ ಮಾಡಿಕೊಂಡವು. ವಿಜಯನಗರ ಜಿಲ್ಲಾ ಸಮಿತಿಯು ಕಾಂ. ಭಾಸ್ಕರರೆಡ್ಡಿ ಅವರನ್ನು, ಬಳ್ಳಾರಿ ಜಿಲ್ಲಾ ಸಮಿತಿಗೆ ಕಾಂ. ಜೆ. ಸತ್ಯಬಾಬು ಅವರನ್ನು ಕಾರ್ಯದರ್ಶಿಯನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು.

ಗುಡಿಬಂಡೆ ತಾಲ್ಲೂಕು ಸಮ್ಮೇಳನ



ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ ತಾಲ್ಲೂಕು ಸಮ್ಮೇಳನದ ಉದ್ಘಾಟನೆಯನ್ನು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ್ ಮಾಡಿದರು. ಧ್ವಜಾರೋಹಣವನ್ನು ಹಿರಿಯ ಸಂಗಾತಿ ನರಸಿಂಹ ರೆಡ್ಡಿ ಮಾಡಿದರು.

ನಿರ್ಣಯಗಳು

1) ಭೂಮಿಯ ಹಕ್ಕಿಗಾಗಿ ಫಾರಂ 50, 53 ಅರ್ಜಿ ದಾರರಿಗೆ ಭೂಮಿ ಮಂಜೂರು ಮಾಡಬೇಕು, ಫಾರಂ 57 ಕೂಡಲೆ ಅಂಗೀಕರಿಸಿ ಭೂಮಿಯ ಹಕ್ಕು ನೀಡಬೇಕು.

2) ಬಡ ವಸತಿ ರಹಿತ ರಿಗೆ ಕೂಡಲೆ ಸರ್ಕಾರಿ ಭೂಮಿಯ ನ್ನು ಗುರುತಿಸಿ ನಿವೇಶನ ನೀಡಬೇಕು.

3) ಗೋ ಹತ್ಯೆ ನಿಷೇಧ ಕಾಯ್ದೆ ರದ್ದು ಗೋಳಿಸಬೇಕು.

4) ಕಾಲೇಜು ಸೇರಿದಂತೆ ಪ್ರೌಢಶಾಲೆ, ಹಿರಿಯ, ಕಿರಿಯ ಪ್ರಾಥಮಿಕ ಶಾಲೆ ಗಳಲ್ಲಿ ಕೊರತೆ ಇರುವ ಸುಮಾರು 130 ಕ್ಕೂ ಶಿಕ್ಷಕ, ಉಪನ್ಯಾಸಕರನ್ನು ನಿಯೋಜಿಸಬೇಕು.

5) ಸರ್ಕಾರಿ ಕಛೇರಿ ಗಳಲ್ಲಿ ಬ್ರಷ್ಟಾಚಾರ ರದ ವಿರುದ್ಧ ಪ್ರತಿಭಟನೆ ರೂಪಿಸಬೇಕು.

ಮುಂತಾದ ತಾಲ್ಲೂಕಿನ ಹಲವು ಸಮಸ್ಯೆ ಗಳ ವಿರುದ್ಧ ಹಾಗೂ ತಾಲೂಕಿನ ಅಬಿವೃದ್ಧಿಗಾಗಿ ಹೋರಾಟಗಳನ್ನು ರೂಪಿಸಿಲು ಸಮ್ಮೇಳನ ದಲ್ಲಿ ನಿರ್ಣಯ ಗಳ ನ್ನು ಅಂಗೀಕರಿಸಲಾಯಿತು.

ನೂತನ ತಾಲ್ಲೂಕು ಸಮಿತಿ ರಚನೆ

ಲಕ್ಷ್ಮೀನಾರಾಯಣ ಎಚ್.ಪಿ. ಜಯರಾಮ್ ರೆಡ್ಡಿ, ಪಿಸಿ ಮಂಜುನಾಥ ಮಾಜಿ ಟಿ ಪಿ ಎಸ್ ಸದಸ್ಯರು, ಕೋಚಿಮುಲ್ ನಿರ್ದೇಶಕ ಆದಿನಾರಾಯಣ ರೆಡ್ಡಿ, ಸೋಮನಹಳ್ಳಿ ವಿ ಎಸ್ ಎಸ್ ಎನ್ ಅಧ್ಯಕ್ಷ ನರಸಿಂಹ ರೆಡ್ಡಿ, ಜಿ ಶ್ರೀನಿವಾಸ, ಸೋಮನಹಳ್ಳಿ ಲಕ್ಷ್ಮೀನಾರಾಯಣ, ಎಲ್ ಎ ಬಾಬು, ರಾಜಪ್ಪ, ರವೀಂದ್ರ ರೆಡ್ಡಿ, ನಾಗರಾಜ್, ಉಪ್ಪಾರ ಹಳ್ಳಿ ಶ್ರೀನಿವಾಸ, ಆದಿನಾರಾಯಣ ಸ್ವಾಮಿ, ಭಾಗ್ಯಮ್ಮ ಶುಭಾವತಿ ಸದಸ್ಯರನ್ನು ಒಳಗೊಂಡ ನೂತನ ಸಮಿತಿ ಆಯ್ಕೆಯಾಗಿ ತಾಲ್ಲೂಕು ಕಾರ್ಯದರ್ಶಿಯಾಗಿ ಲಕ್ಷ್ಮೀನಾರಾಯಣ ಎಚ್.ಪಿ. ಯವರು ಪುನರಾಯ್ಕೆ ಆಗಿದ್ದಾರೆ



ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ಉಳಿಸಿದ ಸಫಲ ಹೋರಾಟ

ಸಿ. ಕುಮಾರಿ



ಮಂಡ್ಯ ಜಿಲ್ಲೆಗೆ 'ಸಕ್ಕರೆ ನಾಡು' ಎಂಬ ಹೆಸರು ತಂದು ಕೊಟ್ಟ ಮೈಷುಗರ್ ಕಾರ್ಖಾನೆಯು ದೇಶ, ರಾಜ್ಯ ಹಾಗೂ ಜಿಲ್ಲೆಯ ಆರ್ಥಿಕತೆಗೆ ಬಹು ದೊಡ್ಡ ಕೊಡುಗೆ ನೀಡಿದೆ. ಮೈಷುಗರ್ ಕಾರ್ಖಾನೆಯಿಂದ ರೈತರು, ಕಾರ್ಮಿಕರು ಹಾಗೂ ಸಾರ್ವಜನಿಕರಿಗಾದ ಅನುಕೂಲಗಳು ಇತಿಹಾಸದಲ್ಲಿ ಮಾಸದ ಸ್ಮರಣೀಯ ನೆನಪುಗಳಾಗಿ ಜನಮಾನಸದಲ್ಲಿ ಉಳಿದಿವೆ. ಇಂತಹ ಸರ್ಕಾರಿ ಸ್ವಾಮ್ಯದ ಮೈಷುಗರ್ ಕಾರ್ಖಾನೆಯನ್ನು ಖಾಸಗೀಕರಿಸಲು ಹೊರಟಿದ್ದ ಜಿಲ್ಲೆಯ ಸಂಸದರು ಹಾಗು ಬಿಜೆಪಿ ರಾಜ್ಯ ಸರ್ಕಾರದ ವಿರುದ್ಧ ಹೂಡಲಾದ ದೀರ್ಘ ಸಫಲ ಜನಾಂದೋಲನದ ಮೂಲಕ, ಜನರ ಆಸ್ತಿಯನ್ನು ಸಾರ್ವಜನಿಕ ವಲಯದಲ್ಲಿಯೇ ಉಳಿಸಲು ಸಾಧ್ಯವಾಗಿದೆ. ದೇಶದ ಸಂಪತ್ತನ್ನು ಮಾರಲು ಹೊರಟಿರುವ ಮೋದಿ ಸರ್ಕಾರದ ಈ ಕಾಲಘಟ್ಟದಲ್ಲಿ ಸಾರ್ವಜನಿಕ ಉದ್ದಿಮೆಗಳ ಉಳಿವಿನ ಹೋರಾಟದ ಸ್ಫೂರ್ತಿಯಾಗಿ ಮೈಷುಗರ್ ಹೋರಾಟ ಹೊಮ್ಮಿದೆ. ವ್ಯಾಪಕ ಜನವಿಭಾಗಗಳು ಮತ್ತು ವಿವಿಧ ಸಂಘಟನೆಗಳನ್ನು ಈ ಜನಾಂದೋಲನಕ್ಕೆ ಅಣಿ ನೆರೆಸಿದ್ದು, ಅದನ್ನು ವಿಫಲಗೊಳಿಸಲು ಜನರನ್ನು ದಾರಿತಪ್ಪಿಸಲು ಉದ್ಯಮಿ-ರಾಜಕಾರಣಿಗಳ ಶಾಸಕರ ಹುನ್ನಾರಗಳು, ವಿವಿಧಗುತ್ತಿಗೆ ವಿಧಾನದ ಮೂಲಕ ಖಾಸಗೀಕರಣದ ಅಪಾಯದ ಬಗ್ಗೆ ಅರಿವು ನೀಡುವಲ್ಲಿ ಜನಾಂದೋಲನದ ಸಫಲತೆ, ಜೊತೆಗೆ ಮೈಶುಗರ್ ನ ಸಾಧನೆಗಳ ಇತಿಹಾಸದ ರೋಚಕ ವಿವರಗಳಿಗಾಗಿ ಮುಂದೆ ಓದಿ.

ಮೈಶುಗರ್ ಹಿನ್ನೆಲೆ

ಹಳೇ ಮೈಸೂರು ಪ್ರಾಂತ್ಯದ ಹರಿಕಾರರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ರವರ ನೂರಾರು ಮಾದರಿಗಳಲ್ಲಿ ಅಗ್ರಸ್ಥಾನ ಹೊಂದಿರುವ ಉದ್ದಿಮೆ ಮೈಷುಗರ್. ಕರ್ನಾಟಕದಲ್ಲಿ ಮೊಟ್ಟಮೊದಲ ಏಕೈಕ ಸರ್ಕಾರಿ ಸಕ್ಕರೆ ಕಾರ್ಖಾನೆ ಎಂಬ ಹೆಗ್ಗಳಿಕೆಗೆ ಮೈಷುಗರ್ ಕಾರ್ಖಾನೆಯು ಪಾತ್ರವಾಗಿದೆ. ನಾಲ್ವಡಿಯವರ ದೂರದೃಷ್ಟಿಯ ಕಾರಣಕ್ಕಾಗಿ ಮಂಡ್ಯ ಜಿಲ್ಲೆಯ ರೈತರ ಆದಾಯ ಮತ್ತು ಜನರ ಆರ್ಥಿಕ ಬದುಕಿನ ಬೆನ್ನೆಲುಬಾಗಿರುವ ಮೈಷುಗರ್ ಕಾರ್ಖಾನೆಯು, ಜಿಲ್ಲೆಯ ಅಭಿವೃದ್ಧಿಯ ಬೆಳವಣಿಗೆಗೆ ತನ್ನದೇ ಆದ ಕೊಡುಗೆಯನ್ನು ನೀಡಿದೆ. ಹಳೇ ಮೈಸೂರು ಪ್ರಾಂತ್ಯಕ್ಕೆ ಕಿರೀಟದಂತಿರುವ ಕಾರ್ಖಾನೆಯು ವಾಣಿಜ್ಯ ದೃಷ್ಟಿಯಿಂದಲೂ ಜಿಲ್ಲೆಗೆ ಬಹು ದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ ಹಾಗೂ ಸಣ್ಣ ಹಿಡುವಳಿ ರೈತರ ಜೀವಾಳವಾಗಿದೆ. ಅಷ್ಟು ಮಾತ್ರವಲ್ಲ ರಾಷ್ಟ್ರ ಮತ್ತು ರಾಜ್ಯದಲ್ಲಿಯೇ ಸಕ್ಕರೆ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದು ಮಂಡ್ಯ ಜಿಲ್ಲೆಯು 'ಸಕ್ಕರೆ ನಾಡು' ಎಂದು ಖ್ಯಾತಿ ಪಡೆಯಲು ಕಾರಣವಾಗಿದೆ. ಹಾಗೂ ಜಿಲ್ಲೆಯ ಜನರ ಸ್ವಾಭಿಮಾನದ ಸಂಕೇತವೂ ಹೌದು.

ದೇಶ ಸ್ವಾತಂತ್ರ್ಯಗೊಳ್ಳುವ ಮೊದಲೇ 1931ರಲ್ಲಿ ಇರ್ವಿನ್ ನಾಲೆಯ ಮೂಲಕ ಮಂಡ್ಯ ಜಿಲ್ಲೆಯ ಲಕ್ಷಾಂತರ ಎಕರೆ ಭೂಮಿ ನೀರಾವರಿಗೊಂಡಿತು. ರೈತರು ವಾಣಿಜ್ಯ ಬೆಳೆಯಾದ ಕಬ್ಬನ್ನು ಬೆಳೆಯುವಂತೆ ಮಾಡಿ, ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಪ್ರಾರಂಭಿಸುವುದು ಸೂಕ್ತವೆಂದು ಕೃಷಿ ವಿಜ್ಞಾನಿಯಾಗಿದ್ದ ಡಾ.ಲೆಸ್ಲಿ.ಸಿ. ಕೋಲ್‌ಮನ್‌ರವರು ಸರ್ಕಾರಕ್ಕೆ ವರದಿ ಸಲ್ಲಿಸಿದರು. ಅಂದಿನ ಮೈಸೂರು ಮಹಾರಾಜರಾಗಿದ್ದ ನಾಲ್ವಡಿಕೃಷ್ಣರಾಜ ಒಡೆಯರ್‌ರವರು ಒಪ್ಪಿಗೆ ನೀಡಿ. ಹಾಗೂ ದಿವಾನರಾಗಿದ್ದ ಸರ್.ಮಿರ್ಜಾ ಇಸ್ಮಾಯಿಲ್‌ರವರು, ಸರ್.ಎಂ. ವಿಶ್ವೇಶ್ವರಯ್ಯನವರು ಸಕ್ಕರೆ ಕಾರ್ಖಾನೆ ಆರಂಭಿಸಲು ಸಿದ್ದತೆ ನಡೆಸುವಂತೆ ತಿಳಿಸಿದರು. ಜೊತೆಗೆ ದೂರ ದೃಷ್ಟಿಯಲ್ಲಿ ಗ್ರಾಮೀಣ ಜನರ ಆರ್ಥಿಕತೆಯ ಬೆನ್ನುಲುಬಾಗಿ ಬೃಹತ್ತಾಗಿ ಕೃಷಿಯಾಧಾರಿತ ವಾಣಿಜ್ಯ ಉದ್ದಿಮೆ ಬೆಳವಣಿಗೆ ಹೊಂದಲು ಸಕಲ ನೆರವು ಒದಗಿಸಲು ತೀರ್ಮಾನಿಸಿದ ಪರಿಣಾಮ 20 ಲಕ್ಷದ ಷೇರು ಬಂಡವಾಳದೊಂದಿಗೆ ಜಾಯಿಂಟ್ ಸ್ಟಾಕ್ ಕಂಪನಿಯಾಗಿ ಮೈಸೂರು ಸಕ್ಕರೆ ಕಾರ್ಖಾನೆಯನ್ನು 1933-34ರಲ್ಲಿ ರೈತರ ಸುಮಾರು 14,046 ಷೇರುದಾರರು ಹಾಗೂ ಸರ್ಕಾರದ ಹಣಕಾಸಿನ ಸಹಾಯದೊಂದಿಗೆ ಜಿಲ್ಲೆಯ ಅಭಿವೃದ್ಧಿಯ ದೂರದೃಷ್ಟಿಯ ದೇಶೀಯ ಹಾಗೂ ಜಾಗತಿಕ ಮಟ್ಟದಲ್ಲಿ ಸಾಕಷ್ಟು ಬೇಡಿಕೆ ಇರುವ ಕೃಷಿಯಾಧಾರಿತ ಸಕ್ಕರೆ ಉದ್ದಿಮೆಯನ್ನು ಪ್ರಾರಂಭಿಸಲಾಗಿದೆ.

ಆಡಳಿತ ದಕ್ಷತೆ ಮತ್ತು ಆದಾಯದಾಯಕ ಉಪಉತ್ಪನ್ನಗಳು:



ಸುಸಜ್ಜಿತ ಯಂತ್ರೋಪಕರಣಗಳು ಹಾಗೂ ಅದರ ನಿರ್ವಹಣೆಯಲ್ಲಿ ಕೆಮಿಸ್ಟ್, ಎಂಜಿನಿಯರ್‌ಗಳು ಮತ್ತು ಆಡಳಿತ ವರ್ಗದ ದಕ್ಷತೆ, ಕಾರ್ಯಕ್ಷಮತೆ, ನಿಷ್ಠೆ, ಹಾಗು ಪ್ರಾಮಾಣಿಕತೆ, ಪಾರದರ್ಶಕತೆ ಅಂದು ಎದ್ದು ಕಾಣುತ್ತಿತ್ತು. ರೈತ-ಕಾರ್ಮಿಕರ ಪರಿಶ್ರಮದಿಂದ ಕಾರ್ಖಾನೆಯು ಅಭಿವೃದ್ಧಿ ಹೊಂದಿ, ದಿನ ಒಂದಕ್ಕೆ ಪ್ರಸ್ತುತ 5000 ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದೆ. ಕೋ-ಜನರೇಷನ್ ಹಾಗೂ ಡಿಸ್ಟಿಲರಿ, ಆಮ್ಲಜನಕ ಘಟಕ, ಗ್ಲೂಕೋಸ್ ಮತ್ತು ಚಾಕೋಲೇಟ್ ನಂತಹ ಇನ್ನಿತರ ಉಪ ಉತ್ಪನ್ನಗಳನ್ನು ಉತ್ಪಾದಿಸಿದೆ. ಡಿಸ್ಟಿಲರಿ ಘಟಕವು ಕಾರ್ಖಾನೆಯ ಜೊತೆಯಲ್ಲಿಯೇ 1935ರಲ್ಲಿಯೇ ಆರಂಭವಾಗಿ ಪ್ರತಿದಿನ 35 ಸಾವಿರ ಲೀಟರ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ಪ್ರತಿ ವರ್ಷ ಕನಿಷ್ಟ 200 ದಿನಗಳ ಕಾಲ ಕಾರ್ಯನಿರ್ವಹಿಸುವಷ್ಟು ಕಾಕಂಬಿ ಪ್ರಮಾಣವೂ ದೊರೆಯುತ್ತದೆ. ಇದರಿಂದ ಬರುವ ಲಾಭವು ಕಂಪನಿಯ ವ್ಯವಹಾರಗಳಿಗೆ ಅನುಕೂಲವಾಗುತ್ತದೆ. ಕಂಪನಿಯು ದಕ್ಷತೆಯ ಆಡಳಿತ ನಿರ್ವಹಣೆ ಇದ್ದ ಸಂದರ್ಭದಲ್ಲಿ, ಕಂಪನಿ ಉತ್ಪಾದಿಸುವ ಕಾಕಂಬಿಯಲ್ಲಿ ಅತಿ ಹೆಚ್ಚು ಸಕ್ಕರೆ ಅಂಶ ಹೊಂದಿದ್ದು, ಅದರಿಂದ ಇಳುವರಿಯಾಗಿ ಬದಲಾಯಿಸುವ ಮೂಲಕ ಲಾಭಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಮೈಷುಗರ್‌ನಲ್ಲಿ ಉತ್ಪಾದಿಸಲಾಗುತ್ತಿದ್ದ ರಂ ಇಂಡಿಯನ್ ಮೇಡ್ ಲಿಕ್ಕರ್ಸ್ (IML) ರಕ್ಷಣಾ ಇಲಾಖೆಗೆ ಪೂರೈಕೆಯಾಗುತ್ತಿತ್ತು. ಮೈಷುಗರ್‌ನಲ್ಲಿ ಉತ್ಪಾದಿಲಾಗುತ್ತಿದ್ದ ಗೋಲ್ಡನ್ ಸಿರಪ್ ಇಂಗ್ಲೇಂಡಿನಲ್ಲಿ ಪ್ರಸಿದ್ಧಿ ಪಡೆದಿತ್ತು. 18 ವರ್ಷಕ್ಕೂ ಹೆಚ್ಚು ಶೇ.20, ಶೇ30 ರಷ್ಟು ಷೇರು ಡಿವಿಡೆಂಡನ್ನು ರೈತರಿಗೆ ನೀಡಿರುವ ಇತಿಹಾಸ ಮೈಷುಗರ್ ಹೊಂದಿದೆ. ಅಲ್ಲದೆ ಕೆಲವೊಮ್ಮೆ ವರ್ಷದಲ್ಲಿ 2ಬಾರಿ ಕಾರ್ಮಿಕರಿಗೂ ಬೋನಸ್ ಕೊಟ್ಟಿರುವ ಉದಾಹರಣೆಯೂ ಇದೆ. ಹೀಗೆ ಮೈಷುಗರ್ ವೈಭವ ಜನರ ಮನಸ್ಸಿನಲ್ಲಿ ಅಚ್ಚಳಿಯದ ನೆನಪುಗಳಾಗಿವೆ. ಅಷ್ಟು ಮಾತ್ರವಲ್ಲ ಮೈಷುಗರ್ ಆಡಳಿತ ಹಾಗೂ ಅದರ ಉತ್ಪನ್ನಗಳು ಇಡೀ ದೇಶಕ್ಕೆ ಮಾದರಿಯಾಗಿ ನಿಲ್ಲುತ್ತದೆ.

ಕಾರ್ಖಾನೆಯು ಬೆಂಗಳೂರಿನಲ್ಲಿ ಸ್ವಂತ ಕೇಂದ್ರ ಕಛೇರಿಯನ್ನು ಹೊಂದಿದ್ದು ಜಿಲ್ಲೆಯಲ್ಲಿ 237 ಎಕರೆಗೂ ಹೆಚ್ಚು ಸ್ಥಿರ-ಚರ ಆಸ್ತಿಯೊಟ್ಟಿಗೆ 16 ಫಾರಂಗಳನ್ನು ಹಾಗೂ ವಿದ್ಯಾ ಸಂಸ್ಥೆಗಳನ್ನು ಮತ್ತು ರೈತ ಸಮುದಾಯ ಭವನಗಳನ್ನು ಹೊಂದಿದೆ. **ದೇಶ, ರಾಜ್ಯ ಹಾಗೂ ಜಿಲ್ಲೆಯ ಆರ್ಥಿಕತೆಗೆ ಮೈಷುಗರ್ ಕಾರ್ಖಾನೆಯು ಬಹು ದೊಡ್ಡ ಕೊಡುಗೆ ನೀಡಿದೆ. ದೇಶದ ಆರ್ಥಿಕ ಬೆಳವಣಿಗೆಯ ಚೈತನ್ಯವು ಸಾರ್ವಜನಿಕ ವಲಯದಲ್ಲಿದೆ ಎನ್ನುವುದನ್ನು ಹಲವು ಸಮೀಕ್ಷೆಗಳು ಈಗಾಗಲೇ ಸಾಕ್ಷೀಕರಿಸಿವೆ.**

1950ರ ಸುಮಾರಿಗೆ 4000 ಕೆಲಸಗಾರರಿದ್ದು ದಿನವೊಂದಕ್ಕೆ 2000 ಟನ್‌ನಿಂದ ಪ್ರಾರಂಭವಾಗಿ 5000 ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿದೆ. ಅಂದು ಕಾರ್ಖಾನೆಯಲ್ಲಿಯೇ ಅಗತ್ಯ ವಿದ್ಯುತ್ ತಯಾರಾಗುತ್ತಿತ್ತು. (ಕೋ ಜನರೇಷನ್) ಹಲವು ಸಂದರ್ಭ ನಗರಕ್ಕೆ ವಿದ್ಯುತ್ ನೀಡಿರುವ ಉದಾಹರಣೆಗಳಿವೆ. ಕಾರ್ಮಿಕರಿಗೆ ವಸತಿ ಸೌಕರ್ಯ, ಉಚಿತ ಆಸ್ಪತ್ರೆ, ಶಾಲಾ-ಕಾಲೇಜುಗಳು, ಕ್ರೀಡಾಂಗಣ, ಟೆನಿಸ್ ಕೋರ್ಟ್, ಮಹಿಳಾ ಮತ್ತು ಪುರುಷರ ಪ್ರತ್ಯೇಕ ಕ್ಲಬ್‌ಗಳು, ಕೆ.ಆರ್.ಎಸ್.ನ ಬೃಂದಾವನ ನೆನಪಿಸುವ ವರ್ಣರಂಜಿತ ಕಾರಂಜಿಗಳು ಈ ವೈಭವದಲ್ಲಿ ಕಂಗೊಳಿಸಿದ, ಮೈಶುಗರ್ ಒಂದು ಬೃಹತ್ ಗ್ರಂಥವಾಗಿ ಬರೆಯುವ ಚಾರಿತ್ರಿಕ ಹಿನ್ನೆಲೆ ಉಳ್ಳದ್ದು. ಅಲ್ಲದೆ ದೂರದ ಊರುಗಳಿಂದ ಶಾಲೆಗೆ ಬರುತ್ತಿದ್ದ, ವಿದ್ಯಾರ್ಥಿಗಳಿಗೆ ಮೈಶುಗರ್ ಕಂಪನಿಯಿಂದ ಉಚಿತ ಊಟದ ವ್ಯವಸ್ಥೆ ಮಾಡಲಾಗುತ್ತಿತ್ತು. ಮೈಶುಗರ್ ಕಂಪನಿಯು ಶೈಕ್ಷಣಿಕ ಅಭಿವೃದ್ಧಿಗೆ ಹೀಗೆ ತನ್ನ ಸಹಾಯ ಹಾಗೂ ಸಹಕಾರ ನೀಡುತ್ತಿತ್ತು. **ಮೈಷುಗರ್ ಕಾರ್ಖಾನೆಯಿಂದ ರೈತರು, ಕಾರ್ಮಿಕರು ಹಾಗೂ ಸಾರ್ವಜನಿಕರಿಗಾದ ಅನುಕೂಲಗಳು ಇತಿಹಾಸದಲ್ಲಿ ಮಾಸದ ಸ್ಮರಣೀಯ ನೆನಪುಗಳಾಗಿ ಜನಮಾನಸದಲ್ಲಿ ಉಳಿದಿವೆ.**

ಮೈಶುಗರ್ ನೆನಪಿನಂಗಳದ ತುಣುಕುಗಳು:

70 ವರ್ಷಗಳ ಹಿಂದೆ ಅಂದರೆ 1950 ಮತ್ತು 1954ರಲ್ಲಿ ಕನ್ನಂಬಾಡಿ ಕಟ್ಟೆ ತುಂಬದಿದ್ದ ಸಂದರ್ಭದಲ್ಲಿ 4ವರ್ಷ ಕಾರ್ಖಾನೆ ಕೆಲಸ ನಿಲ್ಲಿಸಿದ್ರು, ವಿಪರೀತ ನಷ್ಟ ಅನುಭವಿಸಿದ್ದರೂ ಕೂಡ, ಯಾವ ಕಾರ್ಮಿಕರನ್ನು ಕೆಲಸದಿಂದ ಕೈಬಿಟ್ಟಿಲ್ಲ. ವೇತನ ನೀಡಿರುವ ಹಾಗೂ ಷೇರುದಾರರಿಗೆ ಡಿವಿಡೆಂಡ್ ಕೊಟ್ಟಿರುವುದು ತುಂಬಾ ಶ್ಲಾಘನೀಯ ವಿಚಾರ. ರೈತರು ಬೆಳೆದ ಕಬ್ಬನ್ನು ತೂಕ ಹಾಕಿಸಲು ಜಿಲ್ಲೆಯ ನಾಲ್ಕು ರೈಲ್ವೆ ಸ್ಟೇಷನ್‌ಗಳಲ್ಲಿ ತೂಕದ ಮನೆಗಳನ್ನು(weigh bridge) ನಿರ್ಮಿಸಲಾಗಿದೆ. ಎಲಿಯೂರು, ಪಾಂಡವಪುರ, ಮದ್ದೂರು ಮತ್ತು ಹನಕೆರೆ ರೈಲ್ವೆ ಸ್ಟೇಷನ್, ರೈತರ ಹಿತವೇ ಮುಖ್ಯವಾಗಿದ್ದ ಕಾಲಘಟ್ಟದಲ್ಲಿ ತೂಕವಾದ ಕಬ್ಬನ್ನು ಕಾರ್ಖಾನೆಗೆ ಸಾಗಿಸುವ ವ್ಯವಸ್ಥೆಯನ್ನು ಕಂಪನಿ ತನ್ನ ವಾಹನಗಳಿಂದ ನಿರ್ವಹಿಸುತ್ತಿತ್ತು. ತೂಕದ ನಂತರ ರೈಲ್ವೆ ವ್ಯಾಗಿನ್‌ಗಳಿಗೆ ತುಂಬುತ್ತಿದ್ದರು, ತುಂಬಿದ ವ್ಯಾಗಿನ್‌ಗಳನ್ನು ಮಂಡ್ಯ ರೈಲ್ವೆ ಸ್ಟೇಷನ್‌ಗೆ ತಂದು ಬಿಡುತ್ತಿದ್ದರು. ಕೇನ್‌ಕ್ರಷರ್‌ವರೆಗೆ ತಲುಪಿಸಿದ ನಂತರ ಕೇನ್ ಕೇರಿಯರ್‌ಗೆ ತುಂಬುತ್ತಿದ್ದರು. ಡಿಸ್ಟಿಲರಿ ವಿಭಾಗದಲ್ಲಿ ಮದ್ಯಸಾರ (ಆಲ್ಕೋಹಾಲ್) ತಯಾರಾಗುತ್ತಿತ್ತು. ಅದನ್ನೇ ಕಂಪನಿಯ ಲಾರಿ, ಟ್ರ್ಯಾಕ್ಟರ್ ಮತ್ತು ರೈಲ್ವೆ ಎಂಜಿನ್‌ಗಳಿಗೆ ಪೆಟ್ರೋಲ್ ಬದಲಿಗೆ ಇಂಧನವಾಗಿ ಉಪಯೋಗಿಸಲಾಗುತ್ತಿತ್ತು.

ಪ್ರಾರಂಭದ ದಿನಗಳಲ್ಲಿ 3 ಲಕ್ಷ ಟನ್‌ನಿಂದ 10 ಲಕ್ಷ ಟನ್ ಕಬ್ಬು ಅರೆಯುವ ಸಾಮರ್ಥ್ಯ ಹೊಂದಿತ್ತು. ಕಂಪನಿಯು ಕಬ್ಬಿನ ಇಳುವರಿ ಹೆಚ್ಚಿಸಲು ರೈತರಿಗೆ ನೆರವಾಗುವ ರೀತಿಯಲ್ಲಿ ಪ್ರೋತ್ಸಾಹಿಸುತ್ತಿದ್ದರು. ಹೆಚ್ಚಿನ ಇಳುವರಿ ಪಡೆದ ರೈತರಿಗೆ ಬಹುಮಾನ ನೀಡುವ ಮೂಲಕ ರೈತರ ಬೆನ್ನು ತಟ್ಟುತ್ತಿದ್ದರು. ಮೈಶುಗರ್ ಒಡೆತನದಲ್ಲಿ ಸುಮಾರು 16 ಫಾರಂಗಳಿವೆ. 50,000 ಎಕರೆಯಲ್ಲಿ ವರ್ಷಕ್ಕೆ 10 ರಿಂದ 12 ಲಕ್ಷಟನ್ ಕಬ್ಬು ಬೆಳೆಯಲಾಗುತ್ತಿದೆ. ಅದರಲ್ಲಿ ಮೈಶುಗರ್ ಕಾರ್ಖಾನೆಗೆ 8 ಲಕ್ಷ ಟನ್ ಒಪ್ಪಿಗೆ ಆಗಿದ್ದು ಕಬ್ಬು ಕಟಾವಿಗೆ ಸಿದ್ಧವಿದೆ.ಆದರೆ ಇತ್ತೀಚೆಗೆ ಸರ್ಕಾರಿ ಸ್ವಾಮ್ಯದ ಕಾರ್ಖಾನೆಯನ್ನು ಖಾಸಗೀಕರಿಸಲು ಹೊರಟಿದ್ದ ಜಿಲ್ಲೆಯ ಸಂಸದರು ಹಾಗು ಯಡಿಯೂರಪ್ಪ ಸರ್ಕಾರ, ಮೈಶುಗರ್ ಹಿರಿಮೆಯನ್ನು ನಾಶ ಮಾಡಲು ಕೈಹಾಕಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಪರಿಶ್ರಮ, ಕೋಲ್‌ಮನ್‌ರವರ ಆಶಯವನ್ನು ಮಣ್ಣುಪಾಲು ಮಾಡಲು ಬಿಡುವುದಿಲ್ಲ ಎನ್ನುವ ಜನರ ಕೂಗು ಮುಗಿಲೆತ್ತರಕ್ಕೆ ಇದೆ ಎನ್ನುವುದನ್ನು, ಬೊಮ್ಮಾಯಿ ಸರ್ಕಾರ ಕೊನೆಗೂ ಮನಗಾಣಬೇಕಾಯಿತು.

ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ನಿರ್ವಹಣೆಗಾಗಿ ಮನವರಿಕೆ:

2020ರ ಜನವರಿಯಲ್ಲಿ ಅಂದಿನ ಸಚಿವರಾಗಿದ್ದ ಸಿ.ಟಿ.ರವಿ ಹಾಗೂ ಸಂಸದೆ ಸುಮಲತಾರವರುಗಳು ಕಾರ್ಖಾನೆ ಖಾಸಗೀಕರಿಸುವ ಹುನ್ನಾರ ಸಭೆ ನಡೆಸಿರುವುದು, ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಎದ್ದುಕಾಣಿಸಿತು. ಪತ್ರಿಕೆಯನ್ನು ಓದಿದ ನಾನು ತಕ್ಷಣ ರೈತ ಹೋರಾಟಗಾರ್ತಿ ಕಬ್ಬು ಅಭಿವೃದ್ಧಿ ನಿಯಂತ್ರಣ ಮಂಡಳಿ ಸದಸ್ಯರಾಗಿದ್ದ ಸುನಂದಾ ಜಯರಾಂರವರಿಗೆ ಫೋನ್ ಮಾಡಿ, ಅವರ ಹೇಳಿಕೆ ಇರುವ ಬಗ್ಗೆ ಕೇಳಿದಾಗ, ಆಗ ಅವರು ನನ್ನ ಹೆಸರು ಹಾಕಿದ್ದಾರೆ, ಆದರೆ ಹೇಳಿಕ ತಮ್ಮದಲ್ಲವೆಂದು ತಿಳಿಸಿದರು. ಅಲ್ಲದೆ ಖಾಸಗೀಕರಣಕ್ಕೆ ತಮ್ಮ

ಪುಟ 10 ನೋಡಿ

ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ಉಳಿಸಿದ ಸಫಲ ಹೋರಾಟ.........

ಪುಟ 9 ರಿಂದ

ವಿರೋಧವೂ ಇರುವುದಾಗಿ ತಿಳಿಸಿದರು. ನಂತರ ವಿವಿಧ ಸಂಘಟನೆಗಳ ಜೊತೆಗೂಡಿ ಸಭೆ ನಡೆಸಿ ಹಂತ ಹಂತವಾಗಿ, ಸಾಂಘಿಕವಾಗಿ ಹೋರಾಟ ರೂಪಿಸಲಾಯಿತು. ಸಾವಿರಾರು ಕೋಟಿ ರೂ, ಆಸ್ತಿ ಹೊಂದಿರುವ ಮೈಷುಗರ್ ಕಾರ್ಖಾನೆಯನ್ನು ಮೂರು ಕಾಸಿಗೆಮಾರಾಟ ಮಾಡುವುದು, ಗುತ್ತಿಗೆಗೆ ನೀಡುವುದು ಅಥವಾ O&M (Operation And Maintenance: ಕಾರ್ಖಾನೆಯನ್ನು ನಡೆಸುವ, ಆದಾಯ ತೆಗೆದುಕೊಳ್ಳುವ ಮತ್ತು ಅಗತ್ಯ ರಿಪೇರಿಯನ್ನು ತಾವೇ ಮಾಡಿಕೊಳ್ಳುವ ಗುತ್ತಿಗೆ ವಿಧಾನ) ಮಾಡುವುದು ಸರಿಯಲ್ಲ ಎಂದು ಜಿಲ್ಲೆಯ ಜನ ಪ್ರತಿನಿಧಿಗಳಿಗೆ ಜಿಲ್ಲಾಡಳಿತಕ್ಕೆ, ರಾಜ್ಯ ಸರ್ಕಾರಕ್ಕೆ ಸರ್ಕಾರಿ ಸ್ವಾಮ್ಯದಲ್ಲೆ ಮೈಷುಗರ್ ನಿರ್ವಹಣೆಗೆ ಮನವರಿಕೆ ಮಾಡಿ ಒತ್ತಾಯಿಸಲಾಯಿತು. ಹಲವು ಹಂತದ ಹೋರಾಟಗಳನ್ನು ನಡೆಸಲಾಯಿತು ಹಾಗೂ ಜಾಗೃತಿ ಸಭೆಗಳನ್ನು ನಡೆಸುವ ಮೂಲಕ ಮಾಧ್ಯಮಗಳಲ್ಲಿ ಮೈಷುಗರ್ ಸರ್ಕಾರಿ ಸ್ವಾಮ್ಯದಲ್ಲೇ ಉಳಿಯಬೇಕೆಂಬ ಅರಿವಿನ ಚರ್ಚೆಯನ್ನು ಹುಟ್ಟುಹಾಕಲಾಯಿತು. ಹಳ್ಳಿ ಹಳ್ಳಿಯಲ್ಲಿ ಕಬ್ಬು ಬೆಳೆಗಾರರಿಗೆ ಸರ್ಕಾರಿ ಸ್ವಾಮ್ಯದಲ್ಲಿಯೇ ಏಕೆ ಮೈಷುಗರ್ ಉಳಿಯಬೇಕೆಂಬುದನ್ನು ಅರ್ಥಮಾಡಿಸುತ್ತಾ, ಹೇಗಾದರೂ ಆಗಲಿ ಕಾರ್ಖಾನೆ ಆರಂಭವಾಗಲಿ ಎನ್ನುವ ಮತ್ತು O&M ಗುತ್ತಿಗೆ ನೀಡಬೇಕೆನ್ನುವ ಖಾಸಗೀಕರಣದ ಪರ ಇರುವ ಮನಸ್ಥಿತಿಯ ವಿರುದ್ಧ ಹಾಗೂ ಸಾವಿರಾರು ಕೋಟಿ ಬೆಲೆಬಾಳುವ ಮೈಷುಗರ್ ಆಸ್ತಿಯನ್ನು ಲೂಟಿಮಾಡಲು ಹವಣಿಸಲಾಗುತ್ತಿದೆ ಎಂದು ಎಚ್ಚರಿಸಲಾಯಿತು. ಕಾರ್ಖಾನೆ ನಡೆಸುವ ಸಾಮರ್ಥ್ಯ ಸರ್ಕಾರಕ್ಕಿದೆ, ಮೈಷುಗರ್ ಆಸ್ತಿ ಉಳಿಸುವ ಹಾಗೂ ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ನಿರ್ವಹಣೆ ಆಗಬೇಕೆಂದು ಸರ್ಕಾರವನ್ನು ಆಗ್ರಹಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ತಿಳಿಸುವ ಕರಪತ್ರಗಳನ್ನು ತಯಾರಿಸಲಾಯಿತು.

ಕರಪತ್ರಗಳನ್ನು ಜನಾಂದೋಲನದ ಮೂಲಕ ಜನರಿಗೆ ನೀಡಲು ಇಂಡುವಾಳು ಬೂದನೂರಿನಲ್ಲಿ ಸಭೆ ಮಾಡಲಾಯಿತು. ಮರುದಿನ ಕಾರ್ಖಾನೆ ಆವರಣದಿಂದ ಪ್ರಚಾರ ಕೈಗೊಂಡು ನಗರದ ಮಹಾವೀರ ಸರ್ಕಲ್ ಮೂಲಕ ಹಾದು ವಿ.ವಿ.ರಸ್ತೆಯಲ್ಲಿ ಕರಪತ್ರ ವಿತರಿಸುತ್ತಿದ್ದಾಗ ಖಾಸಗೀಕರಣದ ಹುನ್ನಾರವನ್ನರಿಯದ ಶಕ್ತಿಗಳು ನಮ್ಮ ಮೇಲೆ ಮುಗಿಬಿದ್ದು ನಿಂದನೆಯ ಮಾತುಗಳನ್ನಾಡಿದರು. ಅಪಪ್ರಚಾರಕ್ಕಿಳಿದು ಅಡ್ಡಿಪಡಿಸಲು ಯತ್ನಿಸಿದರು. ಅಷ್ಟರಲ್ಲಿ ಪೊಲೀಸ್ ಇಲಾಖೆ ಎಚ್ಚೆತ್ತು ಅಂತಹ ಶಕ್ತಿಗಳನ್ನು ನಿಯಂತ್ರಿಸಿದರು. ಈ ಘಟನೆಯಿಂದ ಕೆಲವರು ಹಿಂದಕ್ಕೆ ಸರಿದರು. ಆದರೆ ಸೈದ್ಧಾಂತಿಕವಾಗಿ ಬದ್ಧತೆಯುಳ್ಳ ಹೋರಾಟಗಾರರು ವಿಚಲಿತರಾಗದೆ ಸರ್ಕಾರದ ಮೇಲೆ ಹಂತ ಹಂತವಾಗಿ ನಿರಂತರ ಒತ್ತಡ ತರಲಾಯಿತು. ಹೋರಾಟವನ್ನು ಇನ್ನಷ್ಟು ಗಟ್ಟಿಗೊಳಿಸಲು ಸರ್ಕಾರದ ಮೇಲೆ ಒತ್ತಡ ತರುವ ನಿಟ್ಟಿನಲ್ಲಿ, ಮೈಷುಗರ್‌ನ ಹಿನ್ನೆಲೆ, ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್.ಎಂ.ವಿ, ಮಿರ್ಜಾ ಇಸ್ಮಾಯಿಲ್ ಮತ್ತು ಲೆಸ್ಲಿ.ಸಿ. ಕೋಲ್ಮನ್‌ರವರ ಅಪಾರ ಪರಿಶ್ರಮ ಹಾಗೂ ಮೈಷುಗರ್‌ನ ದೀರ್ಘಕಾಲದ ಆದಾಯದ ಗತ ವೈಭದ ಮಾಹಿತಿಯನ್ನೊಳಗೊಂಡ, **ಒಂದು ಕಿರು ಪುಸ್ತಕ ಹಾಗೂ ಅಧ್ಯಯನ ವರದಿಯನ್ನು ಪ್ರಕಟಿಸಲಾಯಿತು.** ಮೈಷುಗರ್ ಕಾರ್ಖಾನೆಯ ಹಿನ್ನೆಲೆ, ಅದಕ್ಕಿರುವ ಮಹತ್ವ ಮತ್ತು ಜಿಲ್ಲೆಯ ಆರ್ಥಿಕ ಸೆಲೆಯಾಗಿರುವ ಹಾಗೂ ರೈತರ ಜೀವಾಳವಾದ ಮೈಷುಗರ್ ಮಂಡ್ಯ ಸಕ್ಕರೆ ನಾಡು ಎಂಬ ಖ್ಯಾತಿ ಕೊಟ್ಟ ಇತಿಹಾಸದ ಬಗ್ಗೆ ತಿಳಿಸುವ ಮಾಹಿತಿಯನ್ನು ಈ ಎರಡು ಪುಸ್ತಕಗಳಲ್ಲಿ ಮೈಷುಗರ್ ಸರ್ಕಾರಿ ಸ್ವಾಮ್ಯದಲ್ಲೇ ನಿರ್ವಹಣೆಗೆ ಆಗ್ರಹಿಸುತ್ತಿದ್ದ ಹೋರಾಟಗಾರರು ದಾಖಲಿಸಿದ್ದರು.

ದಿನಾಂಕ 30 ಜೂನ್ 2020 ರಂದು ಮಂಡ್ಯದ ಪತ್ರಿಕಾ ಭವನದಲ್ಲಿ ಮೈಷುಗರ್ ಕಾರ್ಖಾನೆ ಖಾಸಗೀಕರಣ ಹಿನ್ನೆಲೆ, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಮತ್ತು ಪರಿಣಾಮಗಳ ಕುರಿತ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಯಿತು. **ಈ ವಿಚಾರ ಸಂಕಿರಣದ ಆನ್‌ಲೈನ್ ಉದ್ಘಾಟನೆಯನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಗಳಾದ ವಿ.ಗೋಪಾಲಗೌಡರು ನೆರವೇರಿಸಿಕೊಟ್ಟಿದ್ದರು. ಡಾ.ಜಿ. ಮಾದೇಗೌಡರ ಉಪಸ್ಥಿತಿಯಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾದ ಕೆ.ಎನ್. ಉಮೇಶ್‌ರವರು ವಿಷಯ ಮಂಡನೆ ಮಾಡಿದರು.** ಉಳಿದಂತೆ ವೇದಿಕೆಯಲ್ಲಿ ಹೋರಾಟದ ಮುಂಚೂಣಿಯಲ್ಲಿದ್ದ ರೈತ ಹಿತರಕ್ಷಣಾ ಸಮಿತಿಯ ಸುನಂದಾಜಯರಾಂ, ಡಿ.ಎಸ್.ಎಸ್.ನ ಎಂ.ಬಿ.ಶ್ರೀನಿವಾಸ್, ಸಿಐಟಿಯುನ ಸಿ.ಕುಮಾರಿ, ರೈತ ಹಿತರಕ್ಷಣಾ ಸಮಿತಿಯ ಕೆ.ಬೋರಯ್ಯ, ಅಖಂಡ ರೈತಸಂಘದ ಸುಧೀರ್ ಕುಮಾರ್, ರೈತ ಸಂಘ(ಮೂಲ)ದ ಇಂಡುವಾಳು ಚಂದ್ರಶೇಖರ್, ರೈತಸಂಘದ ಮುದ್ದೇಗೌಡ, ಪ್ರಾಂತ ರೈತ ಸಂಘದ ಟಿ.ಎಲ್. ಕೃಷ್ಣೇಗೌಡ, ಟಿ. ಯಶವಂತ್, ಪ್ರಾಂತ ಕೃಷಿ ಕೂಲಿಕಾರರ ಸಂಘದ ಎಂ.ಪುಟ್ಟಮಾದು, ಮಂಜುನಾಥ್ ಇದ್ದರು. ವಿಚಾರ ಸಂಕಿರಣದಲ್ಲಿ ರೈತ, ದಲಿತ, ಕಾರ್ಮಿಕ, ಮಹಿಳಾ, ಪ್ರಗತಿಪರ ಸಂಘಟನೆಯ ಕಾರ್ಯಕರ್ತರು, ಕಬ್ಬು ಬೆಳೆಯುವ ರೈತರು ಭಾಗವಹಿಸಿದ್ದರು.

ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ನ್ಯಾಯಮೂರ್ತಿಗಳಾದ ವಿ. ಗೋಪಾಲಗೌಡರು ಖಾಸಗೀಕರಣಕ್ಕೆ ಒಲವು ತೋರುತ್ತಿರುವ ಸರ್ಕಾರಕ್ಕೆ ಸಾವಿರಾರು ಕೋಟಿ ಆಸ್ತಿಯುಳ್ಳ ರಾಜ್ಯ ಸರ್ಕಾರದ ಅಧೀನದ ಮೈಷುಗರ್ ಕಾರ್ಖಾನೆಯನ್ನು ಸಹಸ್ರಾರು ರೈತರು, ಕಾರ್ಮಿಕರು, ಕೃಷಿ ಕೂಲಿಕಾರರು ಅವಲಂಬಿಸಿದ್ದಾರೆ. ಇದನ್ನು ಪರಿಗಣಿಸಿ ಈ ಎಲ್ಲಾ ಅವಲಂಬಿತರ ಹಾಗೂ ರಾಜ್ಯದ ಜನರ ಮಾಲೀಕತ್ವದ ಕಾರ್ಖಾನೆಯನ್ನು ಸಂರಕ್ಷಣೆ ಮಾಡುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ ಎಂದು ಸರ್ಕಾರವನ್ನು ಎಚ್ಚರಿಸಿದರು. ನಮ್ಮ ಸಂವಿಧಾನ ಪ್ರಜಾಪ್ರಭುತ್ವ, ಗಣತಂತ್ರ, ಸಮಾಜವಾದ, ಸಾಮಾಜಿಕ ನ್ಯಾಯ ಮತ್ತು ಧರ್ಮ ನಿರಪೇಕ್ಷತೆ ಮುಂತಾದ ಮೂಲಭೂತ ತತ್ವಗಳನ್ನು ಹೊಂದಿದೆ. ಎಲ್ಲರಿಗೂ ಸಮಾನವಾದ ಅವಕಾಶ ನೀಡುವ ಕರ್ತವ್ಯವನ್ನು ಸಂವಿಧಾನ ಸರ್ಕಾರಗಳಿಗೆ ನೀಡಿದೆ. ಆದ್ದರಿಂದ ಈ ಜವಾಬ್ದಾರಿಗಳನ್ನು ನಿರ್ವಹಿಸಲು ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಿವೆ. ಸರ್ಕಾರವು ಕೈಗೊಳ್ಳುವ ಖಾಸಗೀಕರಣವು ಇಂತಹ ಘನ ಉದ್ದೇಶಕ್ಕೆ ಚ್ಯುತಿಯಾಗುತ್ತದೆ. 2013–14 ಸಾಲಿನ ಮೈಷುಗರ್ ವಾರ್ಷಿಕ ಮಹಾ ಸಭೆಯನ್ನು 22–6–2020ರಂದು ಆನ್‌ಲೈನ್ ಮೂಲಕ ಸಭೆ ನಿಗದಿಗೊಳಿಸಿ ಮಂಡಿಸಲು ಹೊರಟಿದ್ದ ವರದಿಯಲ್ಲಿ ಒಂದು ಮಿಲ್ ಸುಸ್ಥಿತಿಯಲ್ಲಿದೆ 5 ಸಾವಿರ ಟನ್ ಪ್ರತಿದಿನ ನುರಿಸುವ ಸಾಮರ್ಥ್ಯವಿದೆ ಎಂದು ತಿಳಿಸಲಾಗಿದೆ. ಆದ್ದರಿಂದ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ ಸಂವಿಧಾನ ಬದ್ಧವಾಗಿಲ್ಲ, ಕಾನೂನು ಬದ್ಧವಾಗಿಲ್ಲ. ರಾಜ್ಯ ಸರ್ಕಾರ ಮೈಷುಗರ್‌ನಂತಹ ಸಾರ್ವಜನಿಕ ಉದ್ದಿಮೆಯ ಖಾಸಗೀಕರಣವನ್ನು



ಕೈಬಿಡಬೇಕೆಂದು ಸರ್ಕಾರಕ್ಕೆ ತಾಕೀತು ಮಾಡಿದರು.

ಮೈಷುಗರ್ ಖಾಸಗೀಕರಣದಲ್ಲಿ ರಾಜ್ಯ ಸರ್ಕಾರದ ಹುನ್ನಾರ:

ಮಂಡ್ಯ ಜಿಲ್ಲೆಯ ರೈತ ಹಿತರಕ್ಷಣಾ ಸಮಿತಿ ಸಭೆಯು ಹಿರಿಯ ರಾಜಕಾರಣಿ ಹಾಗೂ ಹೋರಾಟಗಾರರಾದ ಡಾ.ಜಿ. ಮಾದೇಗೌಡರ ಅಧ್ಯಕ್ಷತೆಯಲ್ಲಿ 16 ಮೇ 2020ರಲ್ಲಿ ಸಭೆ ಸೇರಿತು. ಸರ್ಕಾರಿ ಸ್ವಾಮ್ಯದಲ್ಲೆ ಮೈಷುಗರ್ ನಿರ್ವಹಣೆಯಾಗಬೇಕು, ಇಲ್ಲದಿದ್ದರೆ ಜನ ದಂಗೆ ಏಳುತ್ತಾರೆ ಎಂದು ಸಭೆಯಲ್ಲಿ ಡಾ. ಜಿ.ಮಾದೇಗೌಡರು ಘೋಷಿಸಿದರು. ಈ ಘೋಷಣೆಯ ಕುರಿತು ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪನವರ ಬಳಿದೃಶ್ಯ ಮಾಧ್ಯಮಗಳು ಮೈಷುಗರ್ ಕುರಿತು ಪ್ರತಿಕ್ರಿಯೆ ಕೇಳಿದಾಗ, ಸಾಲ ಮಾಡಿಯಾದರೂ ಸರ್ಕಾರಿ ಸ್ವಾಮ್ಯದಲ್ಲಿಯೇ ಮೈಷುಗರ್ ನಿರ್ವಹಣೆ ಮಾಡುತ್ತೇನೆ ಎಂದು ಘೋಷಣೆ ಮಾಡಿದರು. ಆ ಘೋಷಣೆ ಮಾಧ್ಯಮಗಳಲ್ಲಿ ಬಿತ್ತರಗೊಂಡ ತತಕ್ಷಣವೇ ಖಾಸಗೀಕರಣದ ಮೂಲಕ ಮೈಷುಗರ್ ಆಸ್ತಿ ಹೊಡೆಯಲು ಹೊಂಚು ಹಾಕಿದ್ದ ರಾಜಕಾರಣಿ ವಿಲವಿಲ ಒದ್ದಾಡಿ ಜಿಲ್ಲೆಯ ಹಿರಿಯ ರಾಜಕಾರಣಿಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ, M&JAಗೆ ಒತ್ತಾಯಿಸಿದರು. ಸಭೆ ಮಾಡಿ ಸರ್ಕಾರಿ ಸ್ವಾಮ್ಯದಲ್ಲಿ ಮೈಷುಗರ್ ಉಳಿಯ ಬೇಕೆನ್ನುವ ಮುಂಚೂಣಿಯಲ್ಲಿದ್ದ ಹೋರಾಟಗಾರರನ್ನು ಡೋಂಗಿಗಳೆಂದು ಕರೆದು ಅಪಮಾನಗೊಳಿಸಿದರು. ಜಿಲ್ಲೆಯ ಸಂಸದರ ನೇತೃತ್ವದಲ್ಲಿ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು. ನಂತರ ಸರ್ಕಾರದ ಮೇಲೆ ಪ್ರಭಾವ ಬೀರಿ ದಿನಾಂಕ 22 ಜೂನ್ 2020 ರಂದು ಆನ್‌ಲೈನ್ ಮೂಲಕ ಷೇರುದಾರರ ಸಭೆ ನಡೆಸಲು ಮುಂದಾಗಿದ್ದನ್ನು, ಹೋರಾಟದ ಮೂಲಕ ತಡೆದು ನಿಲ್ಲಿಸಲಾಯಿತು.

ತತ್‌ಕ್ಷಣವೇ ಜಿಲ್ಲೆಯ ಈ ಸಂದರ್ಭವನ್ನು ದೋಚುವ ಸಲುವಾಗಿ ರಾಜ್ಯ ಬಿಜೆಪಿ ಸರ್ಕಾರದ ಸಚಿವ ಸಂಘುಟ ಸಭೆ ಸೇರಿ ಮೈಷುಗರ್ ಅಧ್ಯಯನ ವರದಿ ನೀಡಲು ಉಪಸಮಿತಿ ರಚಿಸಿತು. ಗೋವಿಂದ ಕಾರಜೋಳ ಮತ್ತು ಲಕ್ಷ್ಮಣ ಸವದಿಯ ನೇತೃತ್ವದ ಸಮಿತಿಯ ವರದಿ ಪ್ರಕಾರ, ಎಲ್.ಆರ್.ಒ.ಟಿ (Lease-Refurbish-Operate-Transfer- ಗುತ್ತಿಗೆ ತೆಗೆದುಕೊಂಡು, ಅಗತ್ಯ ದುರಸ್ತಿ ಮಾಡಿ, ಒಂದು ಅವಧಿಯವರೆಗೆ ನಡೆಸಿ, ವಾಪಸು ಮೂಲ ಒಡೆಯರಿಗೆ ವಾಪಸು ಮಾಡುವ ಗುತ್ತಿಗೆಯ ವಿಧಾನದ ಮೂಲಕ ಖಾಸಗೀಕರಣ ಮಾಡುವ ಪದ್ಧತಿ) ಅಥವಾ M&JA ಸಾಧ್ಯವೇ ಇಲ್ಲವೆಂದು ಸ್ಪಷ್ಟಪಡಿಸಿ, 40 ವರ್ಷಗಳ ಎಲ್.ಆರ್.ಒ.ಟಿ. ಕೈಬಿಟ್ಟು **2033ಕ್ಕೆ ಶತಮಾನ ಪೂರೈಸಲಿರುವ ಪುರಾತನ ಸಂಸ್ಥೆಯಾದ ಮೈಷುಗರ್ ಕಾರ್ಖಾನೆಯನ್ನು ಉಳಿಸಲು ಮುಂದಾಗಬೇಕೆಂದು ವರದಿ ನೀಡಿತು.**



ಇಷ್ಟೆಲ್ಲಾ ಇತಿಹಾಸವಿರುವ ಮೈಷುಗರ್ ಕಾರ್ಖಾನೆಯನ್ನು ಗುತ್ತಿಗೆ ಸ್ವರೂಪದ ಯಾವುದೇ ಖಾಸಗೀಕರಣ ಮಾಡಬಾರದೆಂದು ಮೈಷುಗರ್ ಸರ್ಕಾರಿ ಸ್ವಾಮ್ಯದಲ್ಲೇ ಉಳಿದು ನಿರ್ವಹಣೆಯಾಗಲು ಕಳೆದ ಒಂದೂವರೆ ವರ್ಷದಿಂದ ಚಳುವಳಿ ರೂಪಿಸಲಾಯಿತು. ಈ ಚಳುವಳಿಯಲ್ಲಿ ಮಂಡ್ಯ ಜಿಲ್ಲಾ ರೈತ ಹಿತ ರಕ್ಷಣಾ ಸಮಿತಿ, ರೈತ, ದಲಿತ, ಕಾರ್ಮಿಕ, ಮಹಿಳಾ, ಕನ್ನಡ ಸೇನೆ, ಪ್ರಗತಿಪರ ಸಂಘಟಣೆಗಳು ನಾಯಕತ್ವ ವಹಿಸಿದ್ದವು.

2020 ಮಾರ್ಚ್ ತಿಂಗಳಲ್ಲಿ ಸರ್ಕಾರಿ ಸ್ವಾಮ್ಯದಲ್ಲೆ ಮೈಷುಗರ್ ನಿರ್ವಹಣೆಯಾಗಬೇಕೆಂದು ಹೋರಾಟ ಆರಂಭವಾಯಿತು. ಜಿಲ್ಲೆಯ ಉಸ್ತುವಾರಿ ಸಚಿವರು, ಹಾಗು ತದನಂತರ ಸರ್ಕಾರ ಖಾಸಗೀಕರಣದತ್ತನೇ ಒಲವು ತೋರಿ ಜಿಲ್ಲೆಯಲ್ಲಿ ಸಂಸದರ ಮಾತಿಗೆ ಮಣೆಹಾಕುತ್ತಾ ಬಂತು. ಇದೇ ಸಂದರ್ಭವನ್ನು ಸಂಸದರು ಬಳಸಿಕೊಂಡು ಜಿಲ್ಲೆಯಲ್ಲಿ ಭಿನ್ನಾಭಿಪ್ರಾಯ ಹುಟ್ಟುಹಾಕಿದರು. ರೈತರ ಹಿತವೆನ್ನುವ ನೆಪಮಾಡಿಕೊಂಡು ಹೇಗಾದರೂ ಆಗಲಿ ಕಾರ್ಖಾನೆ ಆರಂಭವಾಗಲಿ ಎಂಬುದನ್ನು ರೈತರ ನಡುವೆ ಹರಿಬಿಟ್ಟರು.

O&M ಮತ್ತಿತರ ಗುತ್ತಿಗೆ ಮೂಲಕ ಖಾಸಗೀಕರಣದ ಅಪಾಯದ ಬಗ್ಗೆ ಅರಿವು ನೀಡುವಲ್ಲಿ ಸಫಲತೆ:

O & M ಅಥವಾ ಗುತ್ತಿಗೆ ಎನ್ನುವುದು ಸರ್ಕಾರಕ್ಕಿರುವ ಸಾಮರ್ಥ್ಯವನ್ನು ಅಲ್ಲಗಳೆಯುವಂತಿದೆ. ಜಿಲ್ಲೆಯೂ ಸೇರಿದಂತೆ ಉಳಿದ ಖಾಸಗಿ ಸಕ್ಕರೆ ಕಾರ್ಖಾನೆಗಳು ಲಾಭ ಲೂಟಿಯ ಸಕ್ಕರೆ ಲಾಬಿಯಲ್ಲಿ ಮುಳುಗಿವೆ. ಖಾಸಗಿ ಸಕ್ಕರೆ ಕಾರ್ಖಾನೆಗಳು ಸಹ ನೂರಾರು ಕೋಟಿ ರೂ, ಬಾಕಿ ಉಳಿಸಿಕೊಂಡಿರುವ ಉದಾಹರಣೆಗಳಿವೆ. ಸರ್ಕಾರವು ಖಾಸಗಿ ಕಾರ್ಖಾನೆಗಳಿಗೆ ಅನುದಾನ ನೀಡಿದರೂ ಬಹುತೇಕ ಖಾಸಗಿ ಕಾರ್ಖಾನೆಗಳು ಲಾಭದಾಯಕವಾಗಿಲ್ಲ. ನಮ್ಮದೇ ರಾಜ್ಯದ ಹಾವೇರಿ ಜಿಲ್ಲೆಯಲ್ಲಿ ರೈತರು ಕಟ್ಟಿ ಬೆಳೆಸಿದ ಸಂಗೂರು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಕೆಲ ರಾಜಕೀಯ ವ್ಯಕ್ತಿಗಳ ಸ್ವಾರ್ಥಕ್ಕಾಗಿ ಕಾರ್ಖಾನೆಯನ್ನು ಜಿ.ಎಂ. ಷುಗರ್ಸ್‌ಗೆ ಗುತ್ತಿಗೆ ನೀಡಿದ 11 ವರ್ಷದಲ್ಲಿಯೇ ರೈತರಿಗೆ ಕಬ್ಬಿನ ಬಾಕಿ ನೀಡದೆ ಕಾರ್ಖಾನೆಯು ಇನ್ನಷ್ಟು ಸಾಲದ ಸುಳಿಗೆ ಸಿಲುಕಿ ನಷ್ಟದತ್ತ ದಾಪುಗಾಲಿಟ್ಟಿದೆ. ಕಾರ್ಖಾನೆ ಮತ್ತು ಅದರ ಇಡೀ ಆಸ್ತಿಯು ಗುತ್ತಿಗೆದಾರನ ಪಾಲಾಗುವ ಭೀತಿಯಲ್ಲಿರುವ ಸ್ಪಷ್ಟ ನಿದರ್ಶನ ನಮ್ಮ ಮುಂದಿದೆ. ಅಲ್ಲಿಯ ರೈತರು ಗುತ್ತಿಗೆದಾರನ ವಿರುದ್ಧ ಸೆಣಸಬೇಕಾದ ಪರಿಸ್ಥಿತಿ ಬಂದೊದಗಿದೆ. ಮೈಷುಗರ್‌ನಂತಹ ಸಾರ್ವಜನಿಕ ಉದ್ದಿಮೆಯು O&M ಅಥವಾ ಗುತ್ತಿಗೆಯಂತಹ ಪದ್ಧತಿಯಲ್ಲಿ ಖಾಸಗಿ ಕಂಪನಿಗಳ ಕೈಯಲ್ಲಿ ಸಿಲುಕಿದರೆ ಅದರ ಆರ್ಥಿಕ ಬೆಳವಣಿಗೆಯನ್ನು ವಿರೂಪಗೊಳಿಸಿದಂತಾಗುತ್ತದೆ. ಹಾಗೂ ರೈತ ಕಾರ್ಮಿಕರನ್ನು ಶಾಶ್ವತ ಶೋಷಣೆಗೆ ನೂಕಿದಂತಾಗುತ್ತದೆ ಎನ್ನುವ ತಾಜಾ ಉದಾಹರಣೆಯನ್ನು ಸರ್ಕಾರಕ್ಕೆ ಅರ್ಥಮಾಡಿಸುವಲ್ಲಿ, ಮೈಷುಗರ್ ಹೋರಾಟವು ಪ್ರಮುಖ ಪಾತ್ರ ವಹಿಸಿತು.

ಸರ್ಕಾರವೇ ನಿರ್ವಹಣೆ ಮಾಡುವುದರಿಂದ ಇರುವ ಅನುಕೂಲಗಳು ಮತ್ತು ಸಾಧ್ಯತೆಗಳು:

ಮೈಷುಗರ್ ಕಾರ್ಖಾನೆಯನ್ನು ಸರ್ಕಾರ ನಡೆಸುವುದರಿಂದ ಈಗಾಗಲೇ ಪ್ರತಿದಿನ 5000 ಟನ್ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿರುವ ಕಾರ್ಖಾನೆಗೆ ಲಾಭಗಳಿಸಲು ಹಲವು ಅವಕಾಶಗಳಿವೆ. ಜೊತೆಗೆ ಉಪಉತ್ಪನ್ನ ಘಟಕಗಳಾದ ವಿದ್ಯುತ್, ಡಿಸ್ಟಿಲರಿ ವಿಭಾಗ, ಕಬ್ಬು ತಳಿ ಅಭಿವೃದ್ಧಿ ಫಾರಂಗಳನ್ನು ಹೊಂದಿದೆ. ಸರ್ಕಾರವು ಕಾರ್ಖಾನೆಗೆ ಪ್ರಸಕ್ತ ಅಗತ್ಯ



ಹಣಕಾಸು ಮತ್ತು ಸಿಬ್ಬಂದಿಯನ್ನು ಒದಗಿಸಿ ದಕ್ಷತೆಯಿಂದ ನಿರ್ವಹಿಸಿದರೆ ಕಾರ್ಖಾನೆಯು ಉತ್ತಮ ಸ್ಥಿತಿಯಲ್ಲಿ ನಡೆಯುತ್ತದೆ. ಹಾಗೂ ರೈತ ಕಾರ್ಮಿಕರಿಗೆ ಸಕಾಲಕ್ಕೆ ಹಣಕಾಸು ನಿರ್ವಹಣೆ ಮತ್ತು ಜನ ಸಾಮಾನ್ಯರ ಕಲ್ಯಾಣ ಕೆಲಸಗಳಿಗೆ ಬಳಕೆ ಮಾಡಲು ಸಾಧ್ಯವಾಗುತ್ತದೆ.

ಮೈಷುಗರ್ ಕಾರ್ಖಾನೆಯು ಈಗಾಗಲೇ ಉತ್ಪಾದಿಸಿರುವ 50 ಸಾವಿರ ಕ್ವಿಂಟಾಲ್ ಸಕ್ಕರೆ ಸ್ಟಾಕ್ ಇದ್ದು ಅದನ್ನು ಮಾರಾಟ ಮಾಡುವುದರಿಂದ ಬರುವ ಮೊತ್ತ ಅಂದಾಜು 15 ಕೋಟಿ ಆಗಲಿದೆ. ಈಗಾಗಲೇ ಮೈಷುಗರ್ ಕಾರ್ಖಾನೆಯಿಂದ ಸಾಕಷ್ಟು ಹಳೆಯದಾದ ಬಾಕಿಗಳಾದ ಆಹಾರ ನಿಗಮ, ವಿದ್ಯುತ್, ಸಾರಾಯಿ ಬಾಕಿಗಳನ್ನು ಸರ್ಕಾರವೆ ಮನ್ನಾ ಮಾಡಬಹುದು. ಲಕ್ಷಾಂತರ ಕೋಟಿ ರೂಪಾಯಿ ಬಜೆಟ್ ಮಂಡಿಸುವ ರಾಜ್ಯ ಸರ್ಕಾರಕ್ಕೆ ಮನಸ್ಸು ಮಾಡಿದರೆ ಮೈಷುಗರ್ ಕಾರ್ಖಾನೆಯನ್ನು ಉಳಿಸಿ ನಡೆಸುವುದು ಕಷ್ಟವಲ್ಲ. ಸರ್ಕಾರದ ಉದ್ದಿಮೆಯಾದ್ದರಿಂದ ಅಭಿವೃದ್ಧಿಯ ದೃಷ್ಟಿಯಲ್ಲಿ ಹೆಚ್ಚಿನ ಅನುದಾನವನ್ನು ನೀಡುವ ಮೂಲಕ ತಾಂತ್ರಿಕ ಕಾರ್ಯಾಚರಣೆ, ದಕ್ಷ ಆಡಳಿತ ನಿರ್ವಹಣೆ ಕಾರ್ಖಾನೆಯ ಒಳಗೆ ಮತ್ತು ಹೊರಗೆ ಬಿಗಿಯಾದ ನಿರ್ವಹಣೆಯ ಮೂಲಕ ಸರ್ಕಾರವು ದಕ್ಷತೆಯಿಂದ ನಿರ್ವಹಿಸಬೇಕೆಂದು ಸರ್ಕಾರಕ್ಕೆ ಸಲಹೆ ನೀಡಲಾಯಿತು.

ಶಾಶ್ವತವಾಗಿ ಸರ್ಕಾರಿ ಸ್ವಾಮ್ಯದಲ್ಲಿಯೇ ನಡೆಸಲು ಸರ್ಕಾರಕ್ಕೆ ಸಲಹೆಗಳು:

ಸಾರ್ವಜನಿಕ ವಲಯದ ಮೈಷುಗರ್ ಉದ್ದಿಮೆಯನ್ನು ಆಧುನೀಕರಣಗೊಳಿಸಿ ಪ್ರಜಾಪ್ರಭುತ್ವೀಕರಣಗೊಳಿಸಬೇಕು. ಅಧಿಕಾರಶಾಹಿ ನಿಯಂತ್ರಣ ಮತ್ತು ಭ್ರಷ್ಟಾಚಾರದಿಂದ ಮುಕ್ತಗೊಳಿಸುವುದು, ಕಟ್ಟುನಿಟ್ಟಾದ ಜವಾಬುದಾರಿಕೆಯನ್ನು ನಿಗದಿಪಡಿಸುವುದು. ಆಡಳಿತದಲ್ಲಿ ರೈತ–ಕಾರ್ಮಿಕರ ಭಾಗವಹಿಸುವಿಕೆಯನ್ನು ಖಚಿತಪಡಿಸುವುದು ಮತ್ತು ಅದು ಅರ್ಥ ವ್ಯವಸ್ಥೆಯಲ್ಲಿ ಉನ್ನತ ಸ್ಥಾನಮಾನ ಹೊಂದುವಂತಾಗಲು ಅವಶ್ಯವಾದ ಸ್ಪರ್ಧಾತ್ಮಕತೆಯನ್ನು ಪಡೆಯುವಂತೆ ಮಾಡುವ ಮೂಲಕ ಬಲಪಡಿಸಬೇಕೆಂದು ಒತ್ತಾಯಿಸಲಾಯಿತು.

- ದಕ್ಷ ಸಮಿತಿ ರಚಿಸಬೇಕು. ಅದರಲ್ಲಿ ಸಕ್ಕರೆ ನಿರ್ದೇಶಕರು, ಕೃಷಿ ನಿರ್ದೇಕರು, ತಾಂತ್ರಿಕ ತಜ್ಞರು, ಆರ್ಥಿಕ ಸಲಹೆಗಾರರು, ಅನುಭವ ಉಳ್ಳ ದಕ್ಷ ಜನರಲ್ ಮ್ಯಾನೇಜರ್, ಚೀಫ್ ಕೆಮಿಸ್ಟ್, ಚೀಫ್‌ಎಂಜಿನಿಯರ್, ಡಿಸ್ಟಿಲರಿ ಚೀಫ್‌ಮ್ಯಾನೇಜರ್, ಆರ್ಥಿಕ ಚೀಫ್‌ಅಕೌಂಟ್ ಆಫೀಸರ್, ಕೇನ್ ಡೆವಲೆಪಮೆಂಟ್ ಆಫೀಸರ್ ಹಾಗೂ ಅಗತ್ಯ ಹಣಕಾಸು ಸಿಬ್ಬಂದಿಗಳನ್ನು ತಕ್ಷಣ ನೇಮಿಸಿಕೊಳ್ಳಬೇಕು.
- ಸುಸ್ಥಿತಿಯಲ್ಲಿರುವ ಒಂದು ಮಿಲ್ ಸರಕಾರದ ಘೋಷಣೆಯಂತೆ 2022ರ ಜೂನ್ ಹಂಗಾಮಿನಲ್ಲೆ ಆರಂಭಿಸಲು ಅಗತ್ಯ ತಯಾರಿ ನಡೆಸಬೇಕು. ಹಾಗೂ ಕಾರ್ಖಾನೆ ಆಧುನೀಕರಣಗೊಳಿಸಬೇಕು.
- ಮೈಷುಗರ್ ವ್ಯಾಪ್ತಿಯ ನೂರಾರು ಹಳ್ಳಿಗಳ ಕಬ್ಬು ಒಪ್ಪಿಗೆದಾರರ ನೋಂದಣಿಯನ್ನು ತಕ್ಷಣ ಆರಂಭಿಸಬೇಕು.
- ಸಕ್ಕರೆ ಉತ್ಪಾದನೆಯ ಜೊತೆಗೆ ಉತ್ಪನ್ನಗಳಾದ ಡಿಸ್ಟಿಲರಿ, ಕೋಜನ್, ಎಥನಾಲ್, ಆಮ್ಲಜನಕ, ಸ್ಯಾನಿಟೈಜರ್ ಹಾಗೂ ಇನ್ನಿತರೆ ಆದಾಯದಾಯಕ ಉತ್ಪನ್ನಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.
- ರಾಜ್ಯದ ಜನತೆಗೆ ಮೈಷುಗರ್‌ನಲ್ಲಿ ಉತ್ಪಾದನೆಂತಾಗುವ ಸಕ್ಕರೆಯನ್ನು ಪಡಿತರ ಮೂಲಕ ವಿತರಿಸಲು ಕ್ರಮ ಕೈಗೊಳ್ಳಬೇಕು.
- ಸಾಗಾಣಿಕೆ ವೆಚ್ಚವನ್ನು ಬಾಕಿ ಸಮೇತ ರೈತರಿಗೆ ನೀಡಬೇಕು.
- ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಗದಿಪಡಿಸುವ ಕಬ್ಬಿನ ಸಹಾಯಧನ ಸಕಾಲದಲ್ಲಿ ರೈತರಿಗೆ ಪಾವತಿಸುವಂತೆ ಕ್ರಮವಹಿಸುವುದು.
- ಇದುವರೆಗಿನ ಹಣಕಾಸಿನ ಬಗ್ಗೆ ಅಗತ್ಯ ಕ್ರಮವಹಿಸಬೇಕು.
- ಮೈಷುಗರ್ ವ್ಯಾಪ್ತಿಯ ರೈತರೊಟ್ಟಿಗೆ ನಿರಂತರ ಬಾಂಧವ್ಯ ಏರ್ಪಡಿಸಬೇಕು. ಹೀಗೆ ಮಾಡುವ ಮೂಲಕ ರಾಜ್ಯದ ಏಕಮಾತ್ರ ಸರ್ಕಾರಿ ಸಕ್ಕರೆ ಕಾರ್ಖಾನೆಯನ್ನು 2 ವರ್ಷಕ್ಕೆ ಸೀಮಿತಗೊಳಿಸದೆ ಶಾಶ್ವತವಾಗಿ ಸರ್ಕಾರಿ ಸ್ವಾಮ್ಯದಲ್ಲಿಯೇ ನಿರ್ವಹಣೆಯಾಗುವ ರೀತಿ ಪುನಶ್ಚೇತನಗೊಳಿಸಬೇಕು.
- ಪಿ.ಎಸ್.ಎಸ್.ಕೆ. ಕಾರ್ಖಾನೆಯನ್ನು ನಿರಾಣಿ ಷುಗರ್ಸ್‌ಗೆ 40ವರ್ಷಕ್ಕೆ ಗುತ್ತಿಗೆ ನೀಡಿರುವುದನ್ನು ರದ್ದುಪಡಿಸಿ ಸರ್ಕಾರವೆ ಅನುದಾನ ನೀಡುವ ಮೂಲಕ ರೈತರು ಕಟ್ಟಿದ ಸಹಕಾರಿ ಕಾರ್ಖಾನೆ ಸುಸ್ಥಿರಕ್ಕೆ ಕ್ರಮವಹಿಸಬೇಕು.
- ಕಬ್ಬು ಬೆಳೆಯುವ ರೈತರಿಗೆ ಖಾಸಗಿ ಕಾರ್ಖಾನೆಗಳಿಂದ ಅನ್ಯಾಯವರಸಗದಂತೆ ಕ್ರಮ ವಹಿಸುವುದು ಸರ್ಕಾರದ ಆದ್ಯತೆಯಾಗಬೇಕು.

ನಿರಂತರ ಧರಣಿ:

ಮೊದ ಮೊದಲು ಅದರ ಹಿಂದಿನ ಖಾಸಗೀಕರಣದ ಹುನ್ನಾರ ಅರ್ಥವಾಗದ ಕೆಲವು ಮಂದಿ ಸಂಸದರ ಜೊತೆಗೆ ಕೈಜೋಡಿಸಿದ್ದು ಇತಿಹಾಸ. ತದನಂತರ ಈ ಸಂದರ್ಭವನ್ನು ಉಪಯೋಗಿಸಿಕೊಂಡ ಸರ್ಕಾರ 40 ವರ್ಷ ಗುತ್ತಿಗೆಗೆ ಕೊಡಲು ಮುಂದಾಗಿತ್ತು. ಸರ್ಕಾರದ ನಿರ್ಧಾರವನ್ನು ವಿರೋಧಿಸಿ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಸುನಂದಾ ಜಯರಾಂ, ಕೆ.ಬೋರಯ್ಯ, ಡಿ.ಎಸ್.ಎಸ್.ನ ಎಂ.ಬಿ.ಶ್ರೀನಿವಾಸ್, ಸಿಐಟಿಯುನ ಸಿ. ಕುಮಾರಿ, ರೈತ ಸಂಘ(ಮೂಲ)ದ ಇಂಡುವಾಳು ಚಂದ್ರಶೇಖರ್, ರೈತಸಂಘದ ಮುದ್ದೇಗೌಡ, ಅಖಂಡ ರೈತಸಂಘದ ಸುಧೀರ್ ಕುಮಾರ್, ಪ್ರಾಂತ ರೈತ ಸಂಘದ ಟಿ.ಎಲ್. ಕೃಷ್ಣೇಗೌಡ, ಟಿ.ಯಶ್ವಂತ್, ಪ್ರಾಂತ ಕೃಷಿಕೂಲಿಕಾರರ ಸಂಘದ ಎಂ. ಪುಟ್ಟಮಾದು, ಕನ್ನಡ ಸೇನೆಯ ಮಂಜುನಾಥ್ ಇವರುಗಳು ತಮ್ಮ ತಮ್ಮ ಸಂಘಟನೆಗಳ ಕಾರ್ಯಕರ್ತರೊಂದಿಗೆ 13 ಸೆಪ್ಟೆಂಬರ್ 2021 ರಿಂದ ನಿರಂತರ ಧರಣಿ ಪ್ರಾರಂಭಿಸಿದರು.

ಇದರಿಂದ ಇಡೀ ಜಿಲ್ಲೆಯ ಜನ ಪಕ್ಷಾತೀತವಾಗಿ ಕಾರ್ಖಾನೆ ಯಾವ ಕಾರಣಕ್ಕೂ ಖಾಸಗೀಕರಣಗೊಳ್ಳಬಾರದು ಸರ್ಕಾರಿ ಸ್ವಾಮ್ಯದಲ್ಲಿಯೇ ಉಳಿಯಬೇಕೆಂದು ನಿರಂತರ ಧರಣಿಗೆ ಬೆಂಬಲವಾಗಿ ನಿಂತರು. ಹಾಗೆ ಬೆಂಬಲವಾಗಿ ನಿಂತ ಪ್ರಮುಖರಲ್ಲಿ ವಿಧಾನ ಪರಿಷತ್ ಸದಸ್ಯರುಗಳಾದ ಕೆ.ಟಿ. ಶ್ರೀಕಂಠೇಗೌಡ, ಮರಿತಿಬ್ಬೇಗೌಡ, ಅಪ್ಪಾಜಿಗೌಡ, ವಿಧಾನಸಭಾ ಸದಸ್ಯರುಗಳಾದ ಡಿ.ಸಿ.ತಮ್ಮಣ್ಣ, ಎಂ.ಶ್ರೀನಿವಾಸ್, ಸಿ.ಎಸ್. ಪುಟ್ಟರಾಜು, ಸುರೇಶ್‌ಗೌಡ, ಡಾ.ಕೆ. ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಮಾಜಿ ಸಚಿವರುಗಳಾದ ಎನ್.ಚಲುವರಾಯಸ್ವಾಮಿ, ನರೇಂದ್ರಸ್ವಾಮಿ, ಬಿ.ಸೋಮಶೇಖರ್, ಎಂ.ಎಸ್. ಆತ್ಮಾನಂದ, ಲೀಲಾದೇವಿ, ಆರ್.ಪ್ರಸಾದ್, ಬಿ.ಟಿ.ಲಲಿತಾನಾಯಕ್, ಮಾಜಿ ಶಾಸಕರುಗಳಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಜಿ.ಬಿ. ಶಿವಕುಮಾರ್, ಹೆಚ್.ಡಿ. ಚೌಡಯ್ಯ, ಮೈಷುಗರ್ ಮಾಜಿ ಅಧ್ಯಕ್ಷರುಗಳಾದ ಬಿ.ಸಿ.ಶಿವಾನಂದ, ಸಿದ್ದರಾಮೇಗೌಡ, ರಾಮಲಿಂಗಯ್ಯ, ವಿವಿಧ ರಾಜಕೀಯ ಪಕ್ಷಗಳ ಮುಖಂಡರುಗಳಾದ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಎಂ.ಪುಟ್ಟಮಾದು, ಬಿ.ಎಸ್.ಪಿ. ರಾಜ್ಯಾಧ್ಯಕ್ಷ ಕೃಷ್ಣಮೂರ್ತಿ, ಕೆ.ಎಸ್.ಆರ್. ಪಕ್ಷದ ಲಿಂಗೇಗೌಡ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿಸುಂದರಂ, ಉಪಾಧ್ಯಕ್ಷ ಡಾ.ಕೆ.ಪ್ರಕಾಶ್, ಕೆ.ಎನ್.ಉಮೇಶ್, ರಾಜ್ಯ ರೈತಸಂಘದ ಬಸವರಾಪ್ಪ, ನಂಜೇಗೌಡ, ಕಬ್ಬುಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ಬೋರಾಪುರ ಶಂಕರೇಗೌಡ, ಮರಿಸ್ವಾಮಿ, ತಗ್ಗಹಳ್ಳಿ ವೆಂಟೇಶ್, ಶಂಭೂನಹಳ್ಳಿ ಕೃಷ್ಣ, ವೇಣು ಸಾತನೂರು, ಸಿ.ಎಂ. ದ್ಯಾವಪ್ಪ, ಭರತ್‌ರಾಜ್, ಕೀಲಾರ ಕೃಷ್ಣ, ಅಂಜನಾ ಶ್ರೀಕಾಂತ್, ವಿಜಯಲಕ್ಷ್ಮಿ ರಘುನಂದನ್, ಜಬಿವುಲ್ಲಾ, ಬಸವರಾಜು, ಜಗದೀಶ್, ಕಾಳೇಗೌಡ ಹುಲಿವಾನ, ಸುಶೀಲ, ಶಿವರತ್ನಮ್ಮ, ಜಯರಾಮು, ಸೋಮಣ್ಣ, ಬೊಮ್ಮೇಗೌಡ, ತೂಬಿನಕೆರೆ ಲಿಂಗರಾಜು, ಫಯಾಜ್, ಅಂಬುಜಮ್ಮ, ಬೋರಲಿಂಗೇಗೌಡ, ಸೊಳ್ಳೇಪುರ ವಿಶ್ವನಾಥ್, ಶಿವರಾಮು, ಪ್ರಕಾಶ್, ಜವರಯ್ಯ, ನಾಗೇಂದ್ರ, ಕೃಷ್ಣಪ್ರಕಾಶ್, ಶಶಿಕಲಾ, ಜಯಲಕ್ಷ್ಮಮ್ಮ, ಟಿ.ಹೆಚ್. ಆನಂದ್, ಹನುಮಂತು, ಜವರಪ್ಪ, ಚಂದ್ರಶೇಖರ್, ರಾಮು, ರಾಜು, ಅಮಾಸೆ, ಸಂತೋಷ, ಮಹದೇವಮ್ಮ, ಸುನೀತ, ಪುಟ್ಟಮ್ಮ, ದೇವರಾಜು, ರತ್ನಮ್ಮ, ಸಬೀನ್‌ತಾಜ್, ನಾಗೇಂದ್ರ, ತಿಮ್ಮೇಗೌಡ, ಶಿವಕುಮಾರ್, ತುಳಸೀಧರ್, ಗೌರಮ್ಮ, ಲತಾ, ಶೋಭ,ದೇವಿ, ಜಿ.ಟಿ.ವೀರಪ್ಪ, ಬಿ.ಟಿ.ವಿಶ್ವನಾಥ್, ವೆಂಕಟಲಕ್ಷ್ಮಿ, ಲಕ್ಷ್ಮಿ, ಪ್ರಮೀಳ, ಮುರಳಿ, ಕುಮಾರ್, ಬಾಣಸವಾಡಿ ನಾಗಣ್ಣ, ಹುರುಗಲವಾಡಿ ರಾಮಯ್ಯ, ಸ್ವಾಮಿ ಗಾಮನಹಳ್ಳಿ, ಮಂಜುಳಾ, ಸಚಿನ್, ಟಿ.ಡಿ.ನಾಗರಾಜು, ವೈರಮುಡಿ, ಮಳವಳ್ಳಿ ಶಾಸಕರಾದ ಡಾ.ಕೆ. ಅನ್ನದಾನಿಯವರು ಮಳವಳ್ಳಿಯಿಂದ ಮಂಡ್ಯದವರೆಗೆ ನೂರಾರು ಜನರೊಟ್ಟಿಗೆ ಪಾದಯಾತ್ರೆ ನಡೆಸಿ ಧರಣಿಗೆ ಬೆಂಬಲ ನೀಡಿದರು. ಅಂತೆಯೇ ಹಲವು ಸಂಘಟನೆಗಳು ಬೈಕ್ ಜಾಥಾ, ಎತ್ತಿನಗಾಡಿಯ ಮೆರವಣಿಗೆಗಳನ್ನು ನಡೆಸಿಧರಣಿಯನ್ನು ಬೆಂಬಲಿಸಿದ್ದಾರೆ.

ನಿರಂತರ ಧರಣಿ ಆರಂಭಗೊಂಡ ದಿನವೇ ವಿಧಾನಸಭೆ ಮತ್ತು ವಿಧಾನ ಪರಿಷತ್ತಗಳಲ್ಲಿ ಸರ್ಕಾರಿ ಸ್ವಾಮ್ಯದಲ್ಲಿ ಮೈಷುಗರ್ ನಡೆಯಬೇಕೆಂದು ಕೆ.ಟಿ.ಶ್ರೀಕಂಠೇಗೌಡರು ವಿಧಾನ ಸಭೆಯಲ್ಲಿ ಡಿ.ಸಿ.ತಮ್ಮಣ್ಣನವರು, ಡಾ.ಕೆ ಅನ್ನದಾನಿಯವರು, ಸುರೇಶ್‌ಗೌಡರು ಚರ್ಚಿಸಿದರು. ವಿರೋಧ ಪಕ್ಷದ ನಾಯಕರು ದನಿಗೂಡಿಸಿ ಸರ್ಕಾರದ ಮೇಲೆ ಒತ್ತಡ ಹಾಕಿದರು. ತದನಂತರ ಸರ್ಕಾರ ಸಕ್ಕರೆ ಸಚಿವರ ನೇತೃತ್ವದಲ್ಲಿ ಒಂದು ಉಪ ಸಮಿತಿ ರಚಿಸಿ ಕೈಚೆಲ್ಲಿತ್ತು. ನಿರಂತರ ಧರಣಿಯನ್ನು ಕೈ ಬಿಡದೆ ಮುಂದುವರಿಸಿದ ಕಾರಣ ಸಚಿವರುಗಳಾದ ನಾರಾಯಣಗೌಡ ಆರ್.ಅಶೋಕ್, ಕೋಟಾ ಶ್ರೀನಿವಾಸ್ ಪೂಜಾರ್, ಆರಗ ಜ್ಞಾನೇಂದ್ರ ಧರಣಿ ಸ್ಥಳಕ್ಕೆ ಭೇಟಿ ನೀಡಿ ಧರಣಿ ನಿರತರಿಂದ ಮನವಿ ಸ್ವೀಕರಿಸಿದ್ದರು.ಮಾಜಿ ಮುಖ್ಯಮಂತ್ರಿಗಳಾದ ಎಸ್. ಎಂ. ಕೃಷ್ಣರವರು, ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯನವರು, ಧರಣಿ ಸ್ಥಳಕ್ಕೆ ಭೇಟಿನೀಡಿ ಸರ್ಕಾರದ ಜೊತೆ ಮಾತನಾಡುವುದಾಗಿ ತಿಳಿಸಿದರು. ಅಲ್ಲದೆ ಕೆಲವು ಸಂಘಟನೆಗಳ ರಾಜ್ಯ ಮಟ್ಟದ ಮುಖಂಡರುಗಳು ಧರಣಿಯಲ್ಲಿ ಭಾಗವಹಿಸಿ ಬೆಂಬಲ ವ್ಯಕ್ತಪಡಿಸಿದರು. ಅದರಲ್ಲಿ ಸಿಐಟಿಯು, ರೈತ ಸಂಘಗಳು, ಕನ್ನಡ ಸೇನೆ, ಒಕ್ಕಲಿಗರ ರಕ್ಷಣಾ ವೇದಿಕೆ ಪ್ರಮುಖವಾಗಿವೆ.

ಜಿಲ್ಲೆಯ ಜನಪರ ಸಂಘಟನೆಗಳ ಮುಖಂಡರುಗಳು ಧರಣಿಯಲ್ಲಿ ಭಾಗವಹಿಸಿ ಬೆಂಬಲಿಸಿದ್ದಾರೆ. ದಿನೇ ದಿನೇ ಹೋರಾಟಕ್ಕೆ ಸಿಗುತ್ತಿದ್ದ ಬೆಂಬಲವನ್ನು ಗಮನಿಸಿದ ಮುಖ್ಯಮಂತ್ರಿಗಳಾದ ಬಸವರಾಜ್ ಬೊಮ್ಮಾಯಿರವರು 15–10–2021ರಂದು ಧರಣಿ ಸ್ಥಳಕ್ಕೆ ಆಗಮಿಸಿ ದಿನಾಂಕ 18–10–2021ರಂದು ವಿಧಾನ ಸೌಧದಲ್ಲಿ ಸಭೆ ಕರೆಯಲಾಗಿದೆ. ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ನಿರ್ವಹಣೆ ಹೋರಾಟ ನಿರತ ಮುಖಂಡರು ಸಭೆಗೆ ಬರುವಂತೆ ಆಹ್ವಾನ ನೀಡಿದರು. ಅಲ್ಲಿಗೆ ಧರಣಿ ಪ್ರಾರಂಭಿಸಿ 35 ದಿನಗಳಾಗಿದ್ದವು. ಧರಣಿ ಸ್ಥಳದಲ್ಲೇ ಪತ್ರಿಕಾ ಗೋಷ್ಠಿ ನಡೆಸಿ, ಧರಣಿಗೆ ಬೆಂಬಲ ನೀಡಿದ ಸಂಘಸಂಸ್ಥೆಗಳು ಹಾಗೂ ಜನಪ್ರತಿನಿಧಿಗಳ ಸಭೆ ನಡೆಸಿ ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ನಿರ್ವಹಣೆಯಾಗಬೇಕೆಂದು ಒಕ್ಕೊರಲ ತೀರ್ಮಾನ ಕೈಗೊಳ್ಳಲಾಯಿತು.


ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ, ರೈತ, ದಲಿತ, ಕಾರ್ಮಿಕ, ಮಹಿಳಾ, ಕನ್ನಡಸೇನೆ, ಪ್ರಗತಿಪರ ಸಂಘನೆಗಳ ನೇತೃತ್ವದಲ್ಲಿ ಪ್ರಾರಂಭವಾಗಿದ್ದ ಈ ಧರಣಿಯಲ್ಲಿ ಜಿಲ್ಲೆಯ ಜನಪ್ರತಿನಿಧಿಗಳು, ಹಾಲಿ–ಮಾಜಿ ಶಾಸಕರುಗಳು, ಜೆಡಿಎಸ್, ಕಾಂಗ್ರೆಸ್, ಸಿಪಿಐ(ಎಂ), ಬಿ.ಎಸ್.ಪಿ, ಕೆ.ಎಸ್.ಆರ್.ಪಕ್ಷದ ಮುಖಂಡರುಗಳು, ಇಂಡುವಾಳು, ಸಿದ್ದಯ್ಯನ ಕೊಪ್ಪಲು, ಮೊಳೆಕೊಪ್ಪಲು, ತಗ್ಗಹಳ್ಳಿ, ಕಾರಸವಾಡಿ, ಸೂನಗಹಳ್ಳಿ, ಮಂಗಲ, ಸಂತೆಕಸಲಗೆರೆ, ಸಾತನೂರು, ಹುಲಿವಾನ, ಗುನ್ನಾಯಕನಹಳ್ಳಿ, ಬೂದನೂರು ಸೇರಿದಂತೆ ವಿವಿಧ ಗ್ರಾಮಗಳ ರೈತರು, ಸಿ.ಐ.ಟಿ.ಯು, ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ,ಜನವಾದಿ ಮಹಿಳಾ ಸಂಘಟನೆ, ಕರ್ನಾಟಕ ರಾಜ್ಯ ರೈತ ಸಂಘ(ಮೂಲ ಸಂಘಟನೆ), ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಅಖಂಡ ಕರ್ನಾಟಕ ರಾಜ್ಯ ರೈತ ಸಂಘ, ಕಬ್ಬು ಬೆಳೆಗಾರರು, ಕಬ್ಬು ಒಪ್ಪಿಗೆದಾರರ ಸಂಘ, ಪತ್ರಕರ್ತರ ಸಂಘ, ಸ್ವಂತ ಮನೆ ನಮ್ಮ ಹಕ್ಕು ಸಂಘಟನೆ, ಸ್ಪಂದನಾ ಮಹಿಳಾ ಸಂಘಟನೆ, ವಿಮೋಚನಾ ಮಹಿಳಾ ಸಂಘಟನೆ, ಜನಪರ ಟ್ರಸ್ಟ್, ಮೈಷುಗರ್ ಕಾರ್ಖಾನೆಯ ನಿವೃತ್ತ ನೌಕರರು, ಛಾಯಾಗ್ರಾಹಕರ ಸಂಘ, ಕಲಾವಿದರ ಸಂಘ, ಮಂಡ್ಯ ಜಿಲ್ಲಾ ಅಂಗವಿಕಲರ ಮತ್ತು ಪಾಲಕರ ಒಕ್ಕೂಟ, ಜಯಕರ್ನಾಟಕ ಅಂಗವಿಕಲರ ಸಂಘ, ಅಖಂಡ ರಕ್ಷಣಾ ಸೇವಾದಳ, ಲಾರಿ ಮಾಲೀಕರು ಮತ್ತು ಚಾಲಕರ ಸಂಘ, ಆಟೋ ಚಾಲಕರ ಸಂಘ, ನಾಲ್ವಡಿ ಕೃಷ್ಣರಾಜ ಒಡೆಯರ್ ಅಭಿಮಾನಿಗಳ ಸಂಘ, ಬಿಸಿಯೂಟ, ಅಂಗನವಾಡಿ, ಬೀದಿಬದಿ, ಬೀಡಿ ಕಾರ್ಮಿಕರು, ಗ್ರಾಮಪಂಚಾಯಿತಿ, ಕಟ್ಟಡ, ಕೈಗಾರಿಕಾ ಸಿಐಟಿಯು ಸಂಯೋಜಿತ ಕಾರ್ಮಿಕ ಸಂಘಗಳು, ಕನ್ನಡ ಸಾಹಿತ್ಯ ಪರಿಷತ್, ಸಾಹಿತಿಗಳು, ಅಂಕಣಕಾರರು, ಬರಹಗಾರರು ಸೇರಿದಂತೆ 70ಕ್ಕೂ ಅಧಿಕ ಸಂಘಟನೆಗಳು ಧರಣಿಯನ್ನು ಬೆಂಬಲಿಸಿ ಧರಣಿಯಲ್ಲಿ ಭಾಗವಹಿಸಿದ್ದಾರೆ.

ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ನಿರ್ವಹಣೆ ಹೋರಾಟಕ್ಕೆ ಸಿಕ್ಕ ಜಯ:

ದಿನಾಂಕ 18–10–2021ರ ಮುಖ್ಯಮಂತ್ರಿಗಳ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ 2 ವರ್ಷಗಳ ಅವಧಿಗೆ ಸರ್ಕಾರಿ ಸ್ವಾಮ್ಯದಲ್ಲೇ ಮೈಷುಗರ್ ನಿರ್ವಹಣೆ ಮಾಡುತ್ತೇವೆ ಎಂದು ಮುಖ್ಯಮಂತ್ರಿಗಳು ಘೋಷಿಸಿದರು. 2 ವರ್ಷಗಳ ನಂತರ ಅದರ ಸಾಧಕ–ಬಾಧಕಗಳನ್ನು ಗಮನಿಸಿ ಮುಂದಿನ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಇಂತಹ ಇತಿಹಾಸವಿರುವ ಕಾರ್ಖಾನೆಯನ್ನು ಲಾಭಕೋರ ನೀತಿಗೆ ವರ್ಗಾಯಿಸಲು ಹೊರಟಿದ್ದ ಸ್ವಾರ್ಥ ಹಾಗೂ ಸಮಯಸಾದಕ ರಾಜಕಾರಣವನ್ನು, ಭ್ರಷ್ಟಾಚಾರವನ್ನು ಹಿಮ್ಮೆಟ್ಟಿಸಲಾಗಿದೆ. ದೊಡ್ಡ ಜನಾಂದೋಲನದ ಮೂಲಕ ಮೈಶುಗರ್ ಜನರ ಆಸ್ತಿಯನ್ನು ಸಾರ್ವಜನಿಕ ವಲಯದಲ್ಲಿಯೇ ಉಳಿಸಲು ಸಾಧ್ಯವಾಗಿದೆ.

ದೇಶದ ಸಂಪತ್ತನ್ನು ಮಾರಲು ಹೊರಟಿರುವ ಮೋದಿ ಸರ್ಕಾರದ ಈ ಕಾಲಘಟ್ಟದಲ್ಲಿ ಸಾರ್ವಜನಿಕ ಉದ್ದಿಮೆಗಳ ಉಳಿವಿನ ಹೋರಾಟದ ಸ್ಫೂರ್ತಿಯಾಗಿ ಮೈಷುಗರ್ ಒಂದು ಸ್ಮರಣೀಯ ನೆನಪು. ●



ಐದು ಕೋಟಿ ಮನರೇಗ ಕುಟುಂಬಗಳಿಗೆ ಕತ್ತಲ ದೀಪಾವಳಿ

ಈ ದೀಪಾವಳಿಯಂದು ಅಯೋಧ್ಯೆಯಲ್ಲಿ ಒಂಭತ್ತು ಲಕ್ಷಕ್ಕೂ ಹೆಚ್ಚು ದೀಪಗಳನ್ನು ಹಚ್ಚಿ ಗಿನ್ನೆಸ್ ವಿಶ್ವ ದಾಖಲೆ ರಚಿಸಲಾಯಿತು ಎಂದು ಕಾರ್ಪೊರೇಟ್ ಮಾಧ್ಯಮಗಳು ಸಂಭ್ರಮಪಡುತ್ತಿದ್ದರೆ, ಇತ್ತ ಅಯೋಧ್ಯೆಯಿರುವ ಉತ್ತರಪ್ರದೇಶದಲ್ಲೂ ಸೇರಿದಂತೆ ದೇಶದ ಹಲವಾರು ಗ್ರಾಮಗಳಲ್ಲಿ ಎಂಟು ಕೋಟಿಗೂ ಹೆಚ್ಚು ಮನರೇಗ ಕಾರ್ಮಿಕರ ಕುಟುಂಬಗಳಿಗೆ ತಮ್ಮ ಮನೆಗಳಲ್ಲಿ ದೀಪ ಹಚ್ಚಲಾಗಲಿಲ್ಲ. ಕಾರಣ ಅವರು ಮಾಡಿದ ಕೆಲಸಗಳಿಗೆ ಕೂಲಿಬಾಕಿಯನ್ನು ಇನ್ನೂ ಕೊಟ್ಟಿಲ್ಲ.

ಮಹಾತ್ಮ ಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ನಿರ್ವಹಣಾ ಮಾಹಿತಿ ವ್ಯವಸ್ಥೆ(ಎಂಐಎಸ್) ಪ್ರಕಾರ ನವಂಬರ್ 3, 2021ರ ವೇಳೆಗೆ 8 ಕೋಟಿ ಗ್ರಾಮೀಣ ಕೆಲಸಗಾರರಿಗೆ ಕೂಲಿ ಪಾವತಿ ಆಗಿಲ್ಲ ಎಂದು ನ್ಯುಸ್‌ಕ್ಲಿಕ್(ನ.4) ವರದಿ ಮಾಡಿದೆ.

"ಇದರ ಅರ್ಥ, ದೇಶಾದ್ಯಂತ ಸುಮಾರು 5 ಕೋಟಿ ಕಾರ್ಮಿಕರಿಗೆ ಈ ಬಾರಿ ಕತ್ತಲ ದೀಪಾವಳಿ" ಎಂದು ಗ್ರಾಮೀಣ ಭಾರತದಲ್ಲಿ ಬುಡಮಟ್ಟದ ಕೆಲಸದಲ್ಲಿ ತೊಡಗಿರುವ ಸಾಮೂಹಿಕ ಸಂಘಟನೆ 'ಪೀಪಲ್ಸ್ ಆಕ್ಷನ್ ಫಾರ್ ಎಂಪ್ಲಾಯ್‌ಮೆಂಟ್ ಗ್ಯಾರಂಟಿ'(ಉದ್ಯೋಗ ಖಾತ್ರಿಗೆ ಜನತಾ ಕಾರ್ಯಾಚರಣೆ–ಪಿ.ಎ.ಇ.ಜಿ) ಹೇಳಿದೆ.

ಮನರೇಗ ಯೋಜನೆಗೆ ಕೊಡಮಾಡಿರುವ ನಿಧಿ ಖಾಲಿಯಾಗುತ್ತಿರುವುದು ಅದರ ಪ್ರಸಕ್ತ ಬಿಕ್ಕಟ್ಟಿಗೆ ಕಾರಣ. ಕೂಲಿ ಪಾವತಿ ಬಾಕಿ ಮೊತ್ತ 4920 ಕೋಟಿರೂ. ಮತ್ತು ಅತಿ ಹೆಚ್ಚು ಬಾಕಿಯಿರುವ ರಾಜ್ಯಗಳಲ್ಲಿ ಅಯೋಧ್ಯೆಎಯಿರುವ ಉತ್ತರಪ್ರದೇಶವೂ ಸೇರಿದೆ. ಉಳಿದ ರಾಜ್ಯಗಳೆಂದರೆ ಒಡಿಶ, ಆಂಧ್ರಪ್ರದೇಶ, ಪಶ್ಚಿಮ ಬಂಗಾಲ ಮತ್ತು ತಮಿಳುನಾಡು. ಕೆಲವೆಡೆ ಕಳೆದ ಜೂನ್ ತಿಂಗಳಿಂದ ಕೂಲಿ ಪಾವತಿಯಾಗಿಲ್ಲ ಎಂದು ಪಿ.ಎ.ಇ.ಜಿ. ಹೇಳಿದೆ.

ದೀಪಾವಳಿಯಂತಹ ಹಬ್ಬಗಳ ಸಂದರ್ಭದಲ್ಲಿ ತಮ್ಮ ಬಾಕಿ ಸಿಗುತ್ತದೆ, ಬಹುಶಃ ಬೋನಸ್ ಕೂಡ ಸಿಗುತ್ತದೆ ಎಂಬುದು ಸಾಮಾನ್ಯ ನಿರೀಕ್ಷೆ. ಆದರೆ ಇದು ಸದ್ಯದಲ್ಲಾದರೂ ಸಿಗುತ್ತದೆ ಎಂಬ ನಿರೀಕ್ಷೆಯನ್ನೂ 'ರೇಗ ಕುಟುಂಬಗಳು ಇಟ್ಟುಕೊಳ್ಳುವಂತಿಲ್ಲ. ಏಕೆಂದರೆ 2020–21ರ ಸಾಲಿಗೆ ಈ ಯೋಜನೆಗೆಂದು ಬಜೆಟಿನಲ್ಲಿ ಕೊಟ್ಟಿರುವ ಮೊತ್ತದಲ್ಲಿ 90%ದಷ್ಟು ಈಗಾಗಲೇ ಖರ್ಚಾಗಿದೆ. ಈ ಹಣಕಾಸು ವರ್ಷ ಕೊನೆಗೊಳ್ಳಲು ಇನ್ನೂ ಸುಮಾರು 5 ತಿಂಗಳಿದ್ದರೂ, ಕೇವಲ 13 ದಿನಗಳ ಕೂಲಿಗೆ ಸಾಲುವಷ್ಟು ಹಣ ಮಾತ್ರ ಉಳಿದಿದೆ ಎಂದು ಪಿ.ಎ.ಇ.ಜಿ. ವರದಿ ಹೇಳುತ್ತದೆ.

ಕಳೆದ ವರ್ಷ ಈ ಯೋಜನೆಗೆ ಖರ್ಚಾದ ಹಣಕ್ಕಿಂತ ಹೆಚ್ಚಿನ ಮೊತ್ತವನ್ನು ಕೊಡುವ ಬದಲು ಈ ಬಾರಿಯ ಬಜೆಟಿನಲ್ಲಿ 34% ಕಡಿತ ಮಾಡಿ ಕೇವಲ 73,000 ಕೋಟಿ ರೂ. ನೀಡಲಾಗಿತ್ತು. ಇದನ್ನು ಜನಪರ ಅರ್ಥಶಾಸ್ತ್ರಜ್ಞರು ಮತ್ತು ಪ್ರತಿಪಕ್ಷಗಳು, ವಿಶೇಷವಾಗಿ ಎಡಪಕ್ಷಗಳು ಆಗಲೇ ಕಟುವಾಗಿ ಟೀಕಿಸಿದ್ದರು. ಸಹಜವಾಗಿಯೇ ಈ ಮೊತ್ತ ಆಗಲೇ ಖರ್ಚಾಗಿ ಹೋಗಿದೆಯಾದ್ದರಿಂದ ಇದು ಉದ್ಯೋಗಾವಕಾಶ ನಿರ್ಮಾಣದ ಮೇಲೆ ಭಾರೀ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಪಿ.ಎ.ಇ.ಜಿ. ಹೇಳಿದೆ.

ಈ ಗ್ರಾಮೀಣ ಉದ್ಯೋಗ ಯೋಜನೆಯ ಅಡಿಯಲ್ಲಿ 17 ಕೋಟಿ"ಜಾಬ್ ಕಾರ್ಡ್‌ಗಳು' ನೋಂದಾವಣೆಗೊಂಡಿವೆ. ಇವುಗಳಲ್ಲಿ 9.71 ಕೋಟಿ 'ಸಕ್ರಿಯ ಜಾಬ್ ಕಾರ್ಡ್‌ಗಳು' ಅಂದರೆ ಉದ್ಯೋಗದ ಅಗತ್ಯ ಬಹಳವಾಗಿ ಇರುವವರು. ಇವರಲ್ಲಿ 6.68 ಕೋಟಿ ಜನ ಈಗಾಗಲೇ ಕೆಲಸ ಕೊಡಬೇಕೆಂದು ಅರ್ಜಿ ಹಾಕಿದ್ದಾರೆ. ಏಕೆಂದರೆ ಕೊವಿಡ್–19 ಮತ್ತು ಲಾಕ್‌ಡೌನಿನ ದುಷ್ಪರಿಣಾಮ ಇನ್ನೂ ಇರುವುದರಿಂದಾಗಿ ಮನರೇಗ ಈಗ ಗ್ರಾಮೀಣ ಬಡವರಿಗೆ ಏಕೈಕ ಜೀವನರೇಖೆಯಾಗಿದೆ.

ಈ ನಡುವೆ ಈ ಹಣಕಾಸು ವರ್ಷದಿಂದ ಈ ಯೋಜನೆಯ ಅಡಿಯಲ್ಲಿ ಕೂಲಿಪಾವತಿಯನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟುಗಳು ಮತ್ತು ಇತರರು ಎಂದು ಪ್ರತ್ಯೇಕಿಸಬೇಕು ಎಂದು ಕೇಂದ್ರ ಸರಕಾರ ಸಲಹಾದೇಶ ಹೊರಡಿಸಿತ್ತು. ಇದರಿಂದ ಪರಿಶಿಷ್ಟ ಜಾತಿ/ಬುಡಕಟ್ಟುಗಳ ಜನರಿಗೆ ಕೂಲಿ ಬಾಕಿಯೂ ಸೇರಿದಂತೆ ಏನೂ ರಕ್ಷಣೆ ಸಿಕ್ಕಿಲ್ಲ, ಬದಲಿಗೆ, ಗ್ರಾಮೀಣ ಪ್ರದೇಶಗಳಲ್ಲಿ ಜಾತಿ/ಧರ್ಮದ ಸೆಳೆತಗಳನ್ನು ಉಂಟುಮಾಡಿದೆಯಷ್ಟೇ. ಈಗ ಕೇಂದ್ರ ಸರಕಾರ ಈ ಆದೇಶವನ್ನು ಹಿಂದಕ್ಕೆ ತೆಗೆದುಕೊಂಡಿದೆ ಎಂದು ವರದಿಯಾಗಿದೆ.

ಮನರೇಗ ಕಾಯ್ದೆಯ ಪ್ರಕಾರ ಕೆಲಸಕ್ಕೆ 15 ದಿನಗಳೊಳಗೆ ಕೂಲಿ ಪಾವತಿ ಮಾಡಬೇಕು, ಇಲ್ಲವಾದರೆ ದಿನಕ್ಕೆ ಕೂಲಿಯ 0.05%ದಂತೆ ವಿಳಂಬ ಪರಿಹಾರ ಒದಗಿಸಬೇಕು. ಆದರೆ ಇದನ್ನು ಲೆಕ್ಕ ಹಾಕುತ್ತಿಲ್ಲ ಎಂದು ಈ ಕುರಿತು ಅಧ್ಯಯನ ಮಾಡಿರುವ ಲಿಬ್‌ಟೆಕ್ ಇಂಡಿಯಾ ವರದಿ ಹೇಳುತ್ತದೆ ಎಂದು ಪಿ.ಎ.ಇ.ಜಿ. ದೀಪಾವಳಿಯ ಮರುದಿನ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದೆ.

ನ್ಯೂ ಇಂಡಿಯಾ ನ್ಯೂಸ್

5 ರಾಜ್ಯಗಳ ಚುನಾವಣೆಗಳಲ್ಲಿ ಘೋಷಿತ ವೆಚ್ಚ 252 ಕೋಟಿ ರೂ.

2021ರಲ್ಲಿ ನಡೆದ ಐದು ರಾಜ್ಯಗಳ ಚುನಾವಣೆಯ ಪ್ರಚಾರಕ್ಕೆ ಬಿಜೆಪಿ ಎಲ್ಲರಿಗಿಂತ ಹೆಚ್ಚು, 252 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದು, ಈ ಪೈಕಿ ಶೇ. 60ರಷ್ಟು ಹಣವನ್ನು ಅಂದರೆ ರೂ.151 ಕೋಟಿ ಕೇವಲ ಪಶ್ಚಿಮ ಬಂಗಾಳ ರಾಜ್ಯ ಒಂದಕ್ಕೇ ಖರ್ಚು ಮಾಡಿದೆ ಎಂದು ಅದು ಚುನಾವಣಾ ಆಯೋಗಕ್ಕೆ ನೀಡಿರುವ ಮಾಹಿತಿಗಳಿಂದ ತಿಳಿದು ಬಂದಿದೆ. ಈ ಪೈಕಿ ರೂ.43.81 ಕೋಟಿಯನ್ನು ಅಸ್ಸಾಂ ಮತ್ತು ರೂ.4.79 ಕೋಟಿಯನ್ನು ಪುದುಚೇರಿ ವಿಧಾನಸಭಾ ಚುನಾವಣೆಗಾಗಿ ಖರ್ಚು ಮಾಡಿದೆ.

ತಮಿಳುನಾಡಿನಲ್ಲಿ ಅಧಿಕಾರದಲ್ಲಿದ್ದ ಎಐಎಡಿಎಂಕೆಯನ್ನು ಡಿಎಂಕೆ ಅಧಿಕಾರದಿಂದ ಕೆಳಗಿಳಿಸಿತು. ತಮಿಳುನಾಡಿನಲ್ಲಿ ಶೇ 2.6ರಷ್ಟು ಮತ ಪಡೆದಿದ್ದ ಬಿಜೆಪಿ ಅಲ್ಲಿ ರೂ.22.97 ಕೋಟಿ ವ್ಯಯಿಸಿತ್ತು. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಸರ್ವ ಪ್ರಯತ್ನ ನಡೆಸಿದ ಬಿಜೆಪಿಯು ರೂ. 151 ಕೋಟಿ ಖರ್ಚು ಮಾಡಿದೆ. ಆದರೆ ಬಿಜೆಪಿಯ ಪ್ರಯತ್ನ ಫಲ ನೀಡಲಿಲ್ಲ. ಕೇರಳದಲ್ಲಿ ಈ ಬಾರಿ ಒಂದಿಷ್ಟು ಸ್ಥಾನಗಳನ್ನು ಗೆಲ್ಲಬಹುದು ಎಂಬ ನಿರೀಕ್ಷೆಯೊಂದಿಗೆ ಕಣಕ್ಕಿಳಿದಿದ್ದ ಬಿಜೆಪಿ ರೂ. 29.24 ಕೋಟಿ ಖರ್ಚು ಮಾಡಿತ್ತು.

ಪಶ್ಚಿಮ ಬಂಗಾಳದಲ್ಲಿ ಅಧಿಕಾರವನ್ನು ಉಳಿಸಿಕೊಂಡ ಟಿಎಂಸಿಯು, ಈ ಚುನಾವಣೆಗೆ ರೂ.154.28 ಕೋಟಿ ವೆಚ್ಚ ಮಾಡಿದ್ದಾಗಿ ಘೋಷಿಸಿಕೊಂಡಿದೆ. ಅಂದರೆ ಬಿಜೆಪಿಗಿಂತಲೂ ತುಸು ಹೆಚ್ಚು!

ತಮಿಳುನಾಡಿನಲ್ಲಿ ಎಐಎಡಿಎಂಕೆ ಪಕ್ಷದಿಂದ ಅಧಿಕಾರ ಕಿತ್ತುಕೊಂಡು ಗದ್ದುಗೆಗೆ ಏರಿದ ಡಿಎಂಕೆ ವಿಧಾನಸಭಾ ಚುನಾವಣೆಯಲ್ಲಿ 114.14 ಕೋಟಿ ರೂ.ಗಳನ್ನು ವ್ಯಯಿಸಿದೆ. ಈ ಖರ್ಚು ತಮಿಳುನಾಡು ಮತ್ತು ಪುದುಚೆರಿ ಎರಡೂ ಪ್ರದೇಶಗಳನ್ನು ಒಳಗೊಂಡಿದೆ. ಎಐಎಡಿಎಂಕೆ 57.33 ಕೋಟಿ ರೂ. ಖರ್ಚು ಮಾಡಿದೆ.

ರಾಷ್ಟ್ರೀಯ ಪಕ್ಷ ಕಾಂಗ್ರೆಸ್ 84.93 ಕೋಟಿ ರೂ. ಖರ್ಚು ಮಾಡಿದೆ. ಈ ಚುನಾವಣಾ ಪ್ರಚಾರಕ್ಕೆ ಅತಿ ಕಡಿಮೆ ಖರ್ಚು ಮಾಡಿದ ಪಕ್ಷಗಳೆಂದರೆ ಎಂದರೆ ಸಿಪಿಐ(ಎಂ) ಮತ್ತು ಸಿಪಿಐ ಈ ಎರಡು ಪಕ್ಷಗಳು ಒಟ್ಟು 30 ಕೋಟಿ ರೂ. ಒಳಗೆ ಖರ್ಚು ಮಾಡಿವೆ ಎಂದು ಚುನಾವಣಾ ಆಯೋಗದ ಮಾಹಿತಿಗಳು ಹೇಳುತ್ತವೆ.

ನೋಟುರದ್ಧತಿಯ 5ನೇ ವಾರ್ಷಿಕೋತ್ಸವ–'ಥ್ಯಾಂಕ್ಯು' ಇಲ್ಲ, 'ಸಾರಿ'ನೂ ಇಲ್ಲ!!

ನವಂಬರ್ 8 ರಂದು ದೇಶ ಇನ್ನೊಂದು ಉತ್ಸವ ಆಚರಿಸಬೇಕಾಗಿತ್ತು ಎಂದು ಒಬ್ಬ ಅರ್ಥಶಾಸ್ತ್ರಜ್ಞರು ಟಿಪ್ಪಣಿ ಮಾಡಿದರು. ಅಂದು ನಮ್ಮ ಪ್ರಧಾನಿಗಳ ಇನ್ನೊಂದು 'ಮಿಂಚಿನ ಪ್ರಹಾರ'(ಸರ್ಜಿಕಲ್ ಸ್ಟ್ರೈಕ್)ದ ಕ್ರಮದ ಐದನೇ ವಾರ್ಷಿಕೋತ್ಸವವನ್ನು ಆಚರಿಸಬೇಕಾಗಿತ್ತು.


ಐದು ವರ್ಷಗಳ ಹಿಂದೆ, ಇಡೀ ದೇಶವನ್ನು ಬ್ಯಾಂಕುಗಳ ಮುಂದೆ ಕ್ಯೂ ನಿಲ್ಲಿಸಿದ ಈ ಅಭೂತಪೂರ್ವ 'ಐತಿಹಾಸಿಕ' ಕಾರ್ಯಾಚರಣೆಯ ಬಗ್ಗೆ ಸರಕಾರದ ಮತ್ತು ಆಳುವ ಪಕ್ಷದ ದಿವ್ಯಮೌನವೇ ಈ ನೋಟುರದ್ಧತಿಯ ಬಗ್ಗೆ ಎಲ್ಲವನ್ನೂ ಹೇಳುತ್ತದೆ ಎನ್ನುತ್ತಾರೆ ವೀಕ್ಷಕರು.


ಕಪ್ಪು ಹಣವನ್ನು ಹೊರಗೆಳೆಯಲು ಎಂದು ಕೋಟ್ಯಂತರ ಜನರನ್ನು ನಂಬಿಸಿದ ಈ ಕಾರ್ಯಾಚರಣೆಯ ಘೋಷಿತ ಉದ್ದೇಶ ಆಗಲೇ ಪ್ರತಿದಿನ ಬದಲಾಗುತ್ತಲೇ ಇತ್ತು. ಅದು ಕಪ್ಪುಹಣದ ನಿರ್ಮೂಲನೆಯ ಬಗ್ಗೆ ಸಂದೇಹ ಮೂಡಲಾರಂಭಿಸಿದಾಗ ಅರ್ಥವ್ಯವಸ್ಥೆಯಲ್ಲಿ ಡಿಜಿಟಲ್ ಪರಿವರ್ತನೆಗಾಗಿ ಎಂದು ಹೇಳಲಾಯಿತು. ಅದನ್ನೂ ಜನ ನಂಬಲಾಗದಂತಹ ಸ್ಥಿತಿ ಉಂಟಾದಾಗ ಅದು ಭಾರತೀಯ ಅರ್ಥವ್ಯವಸ್ಥೆಯನ್ನು ಆಧುನೀಕರಿಸಲಿಕ್ಕೆ ಎನ್ನಲಾಯಿತು.

ಈ ನಡುವೆ ಜನಗಳ, ಅದರಲ್ಲೂ ಬಡವರ್ಗಗಳ ಜನರು ಪಟ್ಟ ಪಾಡು ಈಗ ಇತಿಹಾಸವಾದರೂ ಮರೆಯಲಾಗದಂತದ್ದು. ನೂರಕ್ಕೂ ಹೆಚ್ಚು ಜನಸಾಮಾನ್ಯರು ಬ್ಯಾಂಕುಗಳ ಎದುರ ಕ್ಯೂಗಳಲ್ಲಿಯೇ ಪ್ರಾಣ ಕಳಕೊಂಡರು ಎಂದು ವರದಿಯಾಗುತ್ತಿತ್ತು.

ಐದು ವರ್ಷಗಳ ನಂತರ ಕಪ್ಪು ಹಣದ ಉತ್ಪಾದನೆಯಾಗುತ್ತಿಲ್ಲ ಎಂದು ಸರಕಾರದ ಪ್ರಚಾರಯಂತ್ರಕ್ಕೂ ಹೇಳುವ ಧೈರ್ಯವಿಲ್ಲ. ಬದಲಿಗೆ ಕಪ್ಪು ಹಣವನ್ನು ಬಿಳಿ ಮಾಡುವ ಮಾತುಗಳೇ ಎಂದಿನಂತೆ ಕೇಳಬರುತ್ತಿವೆ. ಹೌದು ಡಿಜಿಟಲ್ ಪಾವತಿಯ ಹತ್ತಾರು ಕಂಪನಿಗಳು ಹುಟ್ಟಿಕೊಂಡಿವೆ. ಆದರೆ ಅರ್ಥವ್ಯವಸ್ಥೆಯಲ್ಲಿ ನಗದಿನ ಪ್ರಮಾಣ ಹೇಳಿಕೊಂಡಂತೆ ಎಳ್ಳಷ್ಟೂ ಕಡಿಮೆಯಾಗಿಲ್ಲ.

ಏನೇ ಆಗಲಿ, ಇದು ಎಲ್ಲರನ್ನೂ ಶ್ರೀಮಂತರು, ಬಡವರೆನ್ನದೆ ತಟ್ಟಿದೆ ಎಂಬ ಕೆಲವರ ಸಮಜಾಯಿಷಿಯೂ ಈಗ ಹುಸಿಯಾಗಿದೆ. ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳು ಮತ್ತು ಎಲ್ಲ ರೀತಿಯ ಅನೌಪಚಾರಿಕ ಆರ್ಥಿಕ ಚಟುವಟಿಕೆಗಳನ್ನು ನಗದಿನ ಅಭಾವ ಹಿಂಡಿ ಹಿಪ್ಪೆ ಮಾಡಿದರೆ, ಅವೆಲ್ಲ ಶ್ರೀಮಂತರಿಗೆ ವರ್ಗಾವಣೆಯಾದವು. ಇದರ ಒಟ್ಟು ಪರಿಣಾಮವೆಂದರೆ, ನೋಟುರದ್ಧತಿ ಸಾಮಾನ್ಯ ಪರಿಸ್ಥಿತಿಗಳಲ್ಲಿ ಎಂದೂ ಸಾಧ್ಯವಾಗದ ರೀತಿಯಲ್ಲಿ, ಪ್ರಮಾಣದಲ್ಲಿ ಸಂಪತ್ತಿನ ಕೇಂದ್ರೀಕರಣಕ್ಕೆ ಎಡೆಮಾಡಿಕೊಟ್ಟಿತು ಆದ್ದರಿಂದ ಕೆಲವರಿಗೆ ಈಗಲೂ ಇದೊಂದು 'ಮಾಸ್ಟರ್ ಸ್ಟ್ರೋಕ್' ಎಂದು ಕೆಲವು ಅರ್ಥಶಾಸ್ತ್ರಜ್ಞರು ಹೇಳುತ್ತಾರೆ.





ಕಪ್ಪು ಹಣ ಮತ್ತು ನೋಟು ರದ್ಧತಿಯ 5 ವರ್ಷಗಳು ವ್ಯಂಗ್ಯಚಿತ್ರಗಳು: ಅಲೋಕ್ ನಿರಂತರ್ ಮತ್ತು ಪಿ.ಮಹಮ್ಮದ್

ಲಸಿಕೆಗಾಗಿ ಅಬಕಾರಿ ಸುಂಕ ಏರಿಕೆಯ ನಂತರ ಈಗ ಸಾಲಕ್ಕೆ ಅರ್ಜಿ!

ಪೆಟ್ರೋಲ್, ಡೀಸೆಲ್ ಬೆಲೆಗಳನ್ನು ದಿನಂಪ್ರತಿ ಎಂಬಂತೆ ಹೆಚ್ಚಿಸುತ್ತಿದ್ದಾಗ ಕೇಂದ್ರ ಮಂತ್ರಿಗಳು ಇದು 200 ಕೋಟಿ ಡೋಸ್ ಕೊವಿಡ್–19ಲಸಿಕೆಯನ್ನು ಪುಕ್ಕಟೆಯಾಗಿ ಕೊಡಲಿಕ್ಕಾಗಿ ಎಂದು ಹೇಳಿದರು. ಇದಕ್ಕಾಗಿ ಬಜೆಟಿನಲ್ಲಿ ಕೊಟ್ಟಿದ್ದ 35ಸಾವಿರ ಕೋಟಿ ರೂ.ಗಳು ಎಲ್ಲಿ ಹೋದವು, ಪಿಎಂಕೇರ್‌ನಲ್ಲಿ ಇರುವ ಹಣ ಏತಕ್ಕಾಗಿ ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ.

ಈಗ ಸರಕಾರ 66.7 ಕೋಟಿ ಲಸಿಕೆಗಾಗಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್(ಎಡಿಬಿ)ನಿಂದ 150 ಕೋಟಿ ಡಾಲರ್ ಮತ್ತು ಏಷ್ಯನ್ ಮೂಲರಚನೆ ಹೂಡಿಕೆ ಬ್ಯಾಂಕ್(ಎಐಐಬಿ)ನಿಂದ 50ಕೋಟಿ ಡಾಲರ್ ಸಾಲಕ್ಕೆ ಅರ್ಜಿ ಹಾಕಿದೆ ಎಂದು ವರದಿಯಾಗಿದೆ. (ದಿ ಹಿಂದು, ಅಕ್ಟೋಬರ್ 28)


ಈ ನಡುವೆ ಹೆಚ್ಚುವರಿ ಅಬಕಾರಿ ಸುಂಕದಿಂದ 3.61ಲಕ್ಷ ಕೋಟಿ ರೂ. ಸಂಗ್ರಹವಾಗಿದೆ ಎಂದು ತಿಳಿದುಬಂದಿದೆ. ಹಾಗಿದ್ದರೆ ಈ ಹಣ ಎಲ್ಲಿ ಹೋಯಿತು ಎಂಬ ಪ್ರಶ್ನೆಯೂ ಈಗ ಸೇರಿಕೊಂಡಿದೆ.

ಒಟ್ಟಿನಲ್ಲಿ ಪಿಎಂಕೇರ್‌ನಲ್ಲಿ ಸಂಗ್ರಹಿಸಿದ ಹಣ, ಬಜೆಟಿನಲ್ಲಿ ಕೊಟ್ಟ ಹಣ ಮತ್ತು ಅಬಕಾರಿ ಸುಂಕ ಏರಿಕೆಯಿಂದ ಸಂಗ್ರಹಿಸಿದ ಹಣ ಎಲ್ಲ ಎಲ್ಲಿ ಹೋದವು? ಉತ್ತರ ಇದುವರೆಗೆ ಸಿಕ್ಕಿಲ್ಲ.

ಆದರೆ ನೂರು ಕೋಟಿ ಡೋಸ್‌ಗಳ 'ಥ್ಯಾಂಕ್ಯು' ಸಂಭ್ರಮದ ನಂತರ ಒಂದೇ ತಿಂಗಳೊಳಗೆ, ನವಂಬರ್ 10ರ ವೇಳೆಗೆ ಲಸಿಕೀಕರಣದ ವೇಗ ಆಗಸ್ಟ್ ನಂತರದ ಅತೀ ಕಮ್ಮಿ ಮಟ್ಟಕ್ಕೆ ಇಳಿದಿದೆ ಎಂದು ವರದಿಯಾಗಿದೆ.

ನವಂಬರ್1–10 ಅವಧಿಯಲ್ಲಿ ಲಸಿಕೀಕರಣದ ದೈನಂದಿನ ಸರಾಸರಿ 40ಲಕ್ಷಕ್ಕೆ ಇಳಿದಿದೆ. ಆಗಸ್ಟ್ ಅಂತ್ಯದಲ್ಲಿ 76ಲಕ್ಷ ಇದ್ದದ್ದು ಸತತವಾಗಿ ಇಳಯುತ್ತ ಬಂದಿರುವುದು ಕಂಡುಬಂದಿದೆ. ವರ್ಷಾಂತ್ಯದೊಳಗೆ ಎಲ್ಲರಿಗೂ ಲಸಿಕೆ ಹಾಕಿಸುವ ಗುರಿ ಈಡೇರಬೇಕಾದರೆ ಇನ್ನು ಉಳಿದಿರುವ ಸುಮಾರು 50ದಿನಗಳಲ್ಲಿ ಪ್ರತಿದಿನ 1.51 ಕೋಟಿ ಡೋಸ್‌ಗಳನ್ನು ಹಾಕಬೇಕಾಗುತ್ತದೆ ಎಂದು ಲೆಕ್ಕ ಹಾಕಲಾಗಿದೆ. **ನವಂಬರ್ 11ರ ವೇಳೆಗೆ ಪೂರ್ಣ ಲಸಿಕೆ ಪಡೆದವರ ಪ್ರಮಾಣ ಇನ್ನೂ 26.5%ದಲ್ಲೇ ಇದೆ, ಕನಿಷ್ಟ ಒಂದು ಡೋಸ್ ಪಡೆದವರ ಪ್ರಮಾಣ ಕೂಡ 54.6% ಮಾತ್ರ.**

ಹಣಕಾಸು ಬಂಡವಾಳದ ಅಗತ್ಯಗಳಿಗಾಗಿ ಹೊಸ ಶಿಕ್ಷಣ ನೀತಿ



ನವ-ಉದಾರವಾದವನ್ನು ಅನುಸರಿಸುವ ದೇಶಗಳಲ್ಲಿ ಕಲಿಸುವ ವಿಷಯಗಳಿಗೆ ಅನುಗುಣವಾಗಿ ಭಾರತದಲ್ಲಿ ಬೋಧಿಸುವ ಪಠ್ಯಕ್ರಮವನ್ನು ಮತ್ತು ಕೋರ್ಸ್‌ಗಳ ಹುರುಳನ್ನು ಪರಿವರ್ತಿಸುವುದು, ಮತ್ತು ಅದರ ಜೊತೆಗೆ ಭಾರತಕ್ಕೆ ನಿರ್ದಿಷ್ಟವಾದ ಹಿಂದುತ್ವ ಸಿದ್ಧಾಂತದ ತುಸು ಬೆರಕೆಯೊಂದಿಗೆ ಅದನ್ನು ಭಾರತದಲ್ಲಿ ಅಳವಡಿಸಿಕೊಳ್ಳುವುದು, ಮೋದಿ ಸರ್ಕಾರದ ಕಾರ್ಯಸೂಚಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಇದು, ಶಿಕ್ಷಣ ಕ್ಷೇತ್ರದಲ್ಲಿ, ಪ್ರಸ್ತುತ ಭಾರತದ ರಾಜಕೀಯದಲ್ಲಿ ಪ್ರಾಬಲ್ಯ ಹೊಂದಿರುವ ಕಾರ್ಪೊರೇಟ್-ಹಿಂದುತ್ವ ಮೈತ್ರಿಕೂಟದ ಪ್ರತಿರೂಪವೇ.

ಪ್ರೊ. ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ. ನಾಗರಾಜ್

ದೇಶವು ಸ್ವತಂತ್ರವಾದ ನಂತರ ಶಿಕ್ಷಣವು ವಿದ್ಯಾರ್ಥಿಗಳಿಗೆ ಜ್ಞಾನ ಮತ್ತು ಕೌಶಲ್ಯಗಳನ್ನು ಕಲಿಸುವುದನ್ನಷ್ಟೇ ಅಲ್ಲ, "ರಾಷ್ಟ್ರ ನಿರ್ಮಾಣ"ಕ್ಕಾಗಿ ಕೊಡುಗೆ ನೀಡುವವರನ್ನು ತರಬೇತುಗೊಳಿಸುವ ಉದ್ದೇಶವನ್ನೂ ಹೊಂದಿತ್ತು. ಭಾರತ "ರಾಷ್ಟ್ರ"ದ ಪರಿಕಲ್ಪನೆಯು ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ಬಳಕೆಗೆ ಬಂತಾದರೂ ಅದಕ್ಕೂ ಬಲು ಹಿಂದೆಯೇ ಅದರ ಬೀಜಾಂಕುರವಾಗಿತ್ತು ಎಂಬ ಅಂಶವನ್ನು ಅಮೀರ್ ಖುಸ್ರೊ (1253–1325) ಅವರ ಬರಹಗಳಲ್ಲಿ ಗಮನಿಸಬಹುದು. "ರಾಷ್ಟ್ರ ನಿರ್ಮಾಣ" ದಲ್ಲಿ ಶಿಕ್ಷಣವು ಒಂದು ಮಹತ್ವಪೂರ್ಣ ಪಾತ್ರ ವಹಿಸುವುದರಿಂದ, ವಿದ್ಯಾರ್ಥಿಗಳಿಗೆ ಸ್ವಾತಂತ್ರ್ಯದ ಹೋರಾಟದ ಬಗ್ಗೆ ಅದರಲ್ಲೂ ಮುಖ್ಯವಾಗಿ ಅದರ ವಸಾಹತುಶಾಹಿ ವಿರೋಧಿ ಆಯಾಮದ ಬಗ್ಗೆ ಅರಿವು ಮೂಡಿಸುವುದು ಅವಶ್ಯವಾಗುತ್ತದೆ. ಆದ್ದರಿಂದ, ವಸಾಹತುಶಾಹಿ ಆಳ್ವಿಕೆಯ ಭಾರತದ ಸ್ಥಿತಿ-ಗತಿಗಳ ಬಗ್ಗೆ ಮತ್ತು ವಸಾಹತುಶಾಹಿಯು ಜನರನ್ನು ಶೋಷಣೆಗೆ ಒಳಪಡಿಸಿದ ಸಂಗತಿಗಳನ್ನು ಮಾನವಿಕ ಮತ್ತು ಸಮಾಜ ವಿಜ್ಞಾನಗಳ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ನಿಸರ್ಗ ವಿಜ್ಞಾನ ಮತ್ತು ಎಂಜಿನಿಯರಿಂಗ್ ಸೇರಿದಂತೆ ಎಲ್ಲಾ ಶಾಖೆಯ ವಿದ್ಯಾರ್ಥಿಗಳಿಗೂ – ಅವರು ಆಂಟೋನಿಯೊ ಗ್ರಾಮ್ಸಿ ಬಣ್ಣಿಸಿದ "ಸಾವಯವ ಚಿಂತಕರು"(organic intellectual) ಗಳಾಗಿ ಹೊರಹೊಮ್ಮಬೇಕು ಎಂದಾದರೆ- ಹೇಳಿಕೊಡಬೇಕಾಗುತ್ತದೆ.

ಮುಂದುವರೆದ ದೇಶಗಳ ಅನುಕರಣೆ

ಆದ್ದರಿಂದ, "ಸಾವಯವ ಚಿಂತಕರು"ಗಳನ್ನು ತರಬೇತುಗೊಳಿಸುವಾಗ, ಪಠ್ಯಕ್ರಮ ಮತ್ತು ಬೋಧನಾ ವಿಷಯಗಳು, ಪ್ರಾಥಮಿಕ ಹಂತದಿಂದ ಹಿಡಿದು ಉನ್ನತ ಶಿಕ್ಷಣದವರೆಗೂ, ಮುಂದುವರಿದ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ವಿಭಿನ್ನವಾಗಿರಬೇಕಾಗುತ್ತದೆ. ಉದಾಹರಣೆಗೆ, ವಸಾಹತುಶಾಹಿಯು ವಸಾಹತುಗಳ ಜನತೆಯ ಬದುಕನ್ನು ಕಸಿಯಿತು ಎಂಬುದನ್ನು ಮುಂದುವರೆದ ದೇಶಗಳ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಗೊತ್ತಾಗದಂತೆ ಅವರು ತಮ್ಮ ಪಠ್ಯಕ್ರಮ ಮತ್ತು ಬೋಧನಾ ವಿಷಯಗಳನ್ನು ರೂಪಿಸುತ್ತಾರೆ. ನಿಸರ್ಗ ವಿಜ್ಞಾನ ಕೋರ್ಸ್‌ಗಳಲ್ಲಿಯೂ ಸಹ, ಭಾರತದಂತಹ ದೇಶಗಳು ತಮ್ಮದೇ ಪಠ್ಯಕ್ರಮ ಮತ್ತು ಕೋರ್ಸ್-ವಿಷಯಗಳನ್ನು ತಾವೇ ರೂಪಿಸಿಕೊಳ್ಳಬೇಕು ಮತ್ತು ಭಾರತವು ಮುಂದುವರೆದ ದೇಶಗಳನ್ನು ಅನುಕರಿಸಬಾರದು ಎಂದು ಹೆಸರಾಂತ ಬ್ರಿಟಿಷ್ ವಿಜ್ಞಾನಿ ಜೆ.ಡಿ. ಬರ್ನಾಲ್ ಅಭಿಪ್ರಾಯಪಟ್ಟಿದ್ದರು. ಉದಾಹರಣೆಗೆ, ಭಾರತದ ಜನರು ಬಳಲುವ ರೋಗ-ಖಾಯಿಲೆಗಳ ಸ್ವರೂಪವನ್ನು ಗಮದಲ್ಲಿಟ್ಟುಕೊಂಡು, ಭಾರತದ ವೈದ್ಯಕೀಯ ಶಿಕ್ಷಣವು ಬ್ರಿಟನ್ನಲ್ಲಿ ಇರುವುದಕ್ಕಿಂತ ಭಿನ್ನವಾದ ಒತ್ತು ಕೊಡಬೇಕಾಗುತ್ತದೆ. ಜೊತೆಗೆ, ಭಾರತದ ವೈದ್ಯ ವಿದ್ಯಾರ್ಥಿಗಳಿಗೆ ವಸಾಹತುಶಾಹಿಯ ಬಗ್ಗೆ ಮತ್ತು ವಸಾಹತುಶಾಹಿ-ವಿರೋಧಿ ಹೋರಾಟದ ಬಗ್ಗೆಯೂ ಹೇಳಿಕೊಡಬೇಕಾಗುತ್ತದೆ.

ಭಾರತದಂತಹ ದೇಶಗಳಲ್ಲಿ ಶಿಕ್ಷಣವು ತನ್ನ ನಿಜ ಉದ್ದೇಶವನ್ನು ಸಾಧಿಸಬೇಕು ಎಂದಾದರೆ, ಅದು ಮುಂದುವರೆದ ದೇಶಗಳಿಗಿಂತ ಭಿನ್ನವಾದ ಪಠ್ಯಕ್ರಮ ಮತ್ತು ಕೋರ್ಸ್‌ಗಳನ್ನು ರೂಪಿಸಿಕೊಳ್ಳಬೇಕು. ಅಂದರೆ, ಭೌತಶಾಸ್ತ್ರ ಅಥವಾ ರಸಾಯನಶಾಸ್ತ್ರ ಅಥವಾ ಗಣಿತದ ಮೂಲ ತತ್ವ-ಪ್ರತಿಪಾದನೆಗಳನ್ನು ಭಾರತದ ವಿದ್ಯಾರ್ಥಿಗಳಿಗೆ ಕಲಿಸಬಾರದು ಎಂದಲ್ಲ. ಆದರೆ, ಈ ವಿಷಯಗಳನ್ನು ನಮ್ಮ ಪಠ್ಯಕ್ರಮದೊಳಗೆ ಅಳವಡಿಸಿಕೊಳ್ಳುವಾಗ ಅದು ಮುಂದುವರಿದ ದೇಶಗಳ ನಕಲು ಆಗಬಾರದು. ಈ ದೃಷ್ಟಿಕೋನವನ್ನು ಭಾರತದ ಶೈಕ್ಷಣಿಕ ವಲಯಗಳು ಬಹಳ ಕಾಲದಿಂದಲೂ ಅಂಗೀಕರಿಸಿವೆ.

ಏಕರೂಪೀಕರಣ

ನವ-ಉದಾರವಾದಿ ಜಾಗತೀಕರಣದ ಇಂದಿನ ದಿನಮಾನಗಳಲ್ಲಿ ಶಿಕ್ಷಣ ವಲಯದಲ್ಲಿ ಜರುಗುತ್ತಿರುವ ಘಟನೆಗಳು ಈ ದೃಷ್ಟಿಕೋನಕ್ಕೆ ತದ್ವಿರುದ್ಧವಾಗಿವೆ. ಇಡೀ ವಿಶ್ವವನ್ನೇ ಸವಾರಿಮಾಡುತ್ತಿರುವ ಬಹುರಾಷ್ಟ್ರೀಯ ಸಂಸ್ಥೆಗಳು ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸ್ಥಳಾಂತರಿಸಬಹುದಾದ ಸಿಬ್ಬಂದಿಯನ್ನು ಹೊಂದಲು ಬಯಸುತ್ತವೆ. ಸಿಬ್ಬಂದಿಯ ಈ ಚಲನಶೀಲತೆಯಲ್ಲದೆ, ಬಂಡವಾಳವು ಕೂಡ ವಿಶ್ವಾದ್ಯಂತ ಚಲಿಸುವುದರಿಂದಾಗಿ ಎಲ್ಲಾ ಆತಿಥೇಯ ದೇಶಗಳಲ್ಲೂ ಏಕರೂಪದ ಪರಿಸ್ಥಿತಿ ಇರಬೇಕೆಂದು ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಬಯಸುತ್ತದೆ. ಅಂದರೆ, ಅದು ನೇಮಕ ಮಾಡಿಕೊಳ್ಳುವ ಸಿಬ್ಬಂದಿಯ ಮನೋಭಾವ-ವರ್ತನೆಗಳು ಮತ್ತು ಬೌದ್ಧಿಕ ಸಾಮರ್ಥ್ಯಗಳು ಏಕರೂಪದಲ್ಲಿರಬೇಕೆಂದು ಬಯಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಮಧ್ಯಮ ವರ್ಗದಿಂದ ತನ್ನ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಜಾಗತೀಕರಣಗೊಂಡ ಬಂಡವಾಳವು ಎಲ್ಲ ದೇಶಗಳ ಈ ವಿದ್ಯಾವಂತ ಮಧ್ಯಮ ವರ್ಗವು ಒಂದೇ ರೀತಿಯಲ್ಲಿರಬೇಕೆಂದು ಮತ್ತು ಅವರ ನೋಟಗಳೂ ಮುಂದುವರೆದ ದೇಶಗಳಲ್ಲಿ ಕಾಣಬರುವ ನೋಟಗಳಿಗೆ ಸಾಧ್ಯವಾದಷ್ಟು ಮಟ್ಟಿಗೆ ನಿಕಟವಾಗಿ ಇರಬೇಕೆಂದು ಬಯಸುತ್ತದೆ.

ಆದ್ದರಿಂದ, ತಾನು ನೇಮಕ ಮಾಡಿಕೊಳ್ಳುವ ಭಾವೀ ಸಿಬ್ಬಂದಿಯನ್ನು ತರಬೇತುಗೊಳಿಸುವ ಶಿಕ್ಷಣ ವ್ಯವಸ್ಥೆಯು ಪ್ರಪಂಚದಾದ್ಯಂತ ಏಕರೂಪದಲ್ಲಿರಬೇಕೆಂದು ನೋಡಿಕೊಳ್ಳುವ ಮೂಲಕ ತನ್ನನ್ನು ಬೆಂಬಲಿಸುವ ಒಂದು ಸಾಮಾಜಿಕ ನೆಲೆಯನ್ನು ರೂಪಿಸಿಕೊಳ್ಳುವ ಆಸಕ್ತಿಯನ್ನು ಜಾಗತೀಕರಣಗೊಂಡ ಹಣಕಾಸು ಬಂಡವಾಳವು ಅಪಾರವಾಗಿ ಹೊಂದಿದೆ. ಭಾರತದಂತಹ ದೇಶಗಳಲ್ಲಿ ಹಣಕಾಸು ಬಂಡವಾಳವು ಕಾಣಲು ಬಯಸುವುದು ಇದನ್ನೇ. ಮೋದಿ ಸರ್ಕಾರದ ಹೊಸ ಶಿಕ್ಷಣ ನೀತಿಯು ಮಾಡಲು ಪ್ರಯತ್ನಿಸುತ್ತಿರುವುದು ಇದನ್ನೇ.

ಶಿಕ್ಷಣದ ಈ ರೀತಿಯ ಏಕರೂಪೀಕರಣವು, ಹಿಂದುತ್ವವು ಒತ್ತಿ ಒತ್ತಿ ಹೇಳುವ ಪ್ರಾಚೀನ ಭಾರತದ "ಶ್ರೇಷ್ಠ"ತೆಗೆ, ಪುರಾತನ ಭಾರತೀಯ ವಿಜ್ಞಾನ ಮತ್ತು ಗಣಿತದ ಇದೋ ಅಥವಾ ಅದೋ ನಿರ್ದಿಷ್ಟ ಕೌತುಕಗಳ (ಇಸ್ಲಾಮಿನ ಎಲ್ಲಾ ಕೊಡುಗೆಗಳನ್ನು ಹೊರತುಪಡಿಸಿ) ಮತ್ತು ಮಧ್ಯಕಾಲೀನ ಭಾರತದಲ್ಲಿ ಹಿಂದೂಗಳ ಮೇಲೆ ನಡೆಯಿತೆಂದು ಹೇಳಲಾದ ದಬ್ಬಾಳಿಕೆಯ ಕಥನಕ್ಕೆ ಪೂರ್ಣವಾಗಿ ಹೊಂದಿಕೆಯಾಗುತ್ತದೆ. ಏಕೆಂದರೆ, ಅದು ವಸಾಹತುಶಾಹಿ ಕಾಲವನ್ನು ತಾಕುವುದಿಲ್ಲ ಅಥವಾ ವಸಾಹತುಶಾಹಿಯು ಹಿಂದೂ ಮತ್ತು ಮುಸ್ಲಿಮ್ ಇಬ್ಬರನ್ನೂ ಶೋಷಣೆಗೆ ಒಳಪಡಿಸಿದ ಬಗ್ಗೆ ಅದು ಬಾಯಿ ಬಿಡುವುದಿಲ್ಲ. ಆದರೆ, ವಸಾಹತುಶಾಹಿ ಶೋಷಣೆಯು ದೇಶದ ಹಿಂದಿನ ಎಲ್ಲಾ ಶೋಷಣೆಯ ಚಾರಿತ್ರಿಕ ಅನುಭವಗಳಿಗಿಂತ ಸಂಪೂರ್ಣ ಭಿನ್ನವಾಗಿತ್ತು, ಏಕೆಂದರೆ, ಇದು ಸಂಪತ್ತನ್ನು ಭಾರತದಿಂದ ಬರಿದು ಮಾಡಿತು ಮತ್ತು ಭಾರತದ ಕುಶಲಕರ್ಮಿಗಳ ಕೈಕಸುಬನ್ನು ನಾಶಪಡಿಸಿತು. ಇವೆರಡೂ ಒಟ್ಟಾಗಿ ಭಾರತದಲ್ಲಿ ಸಾಮೂಹಿಕ ಬಡತನವನ್ನು ಸೃಷ್ಟಿಸಿದವು.

ನವ-ಉದಾರವಾದವನ್ನು ಅನುಸರಿಸುವ ಕೆಲವು ದೇಶಗಳಲ್ಲಿ ಕಲಿಸುವ ವಿಷಯಗಳಿಗೆ ಅನುಗುಣವಾಗಿ ಭಾರತದಲ್ಲಿ ಬೋಧಿಸುವ ಪಠ್ಯಕ್ರಮವನ್ನು ಮತ್ತು ಕೋರ್ಸ್‌ಗಳ ಹುರುಳನ್ನು ಪರಿವರ್ತಿಸುವುದು, ಮತ್ತು ಅದರ ಜೊತೆಗೆ ಭಾರತಕ್ಕೆ ನಿರ್ದಿಷ್ಟವಾದ ಹಿಂದುತ್ವ ಸಿದ್ಧಾಂತದ ತುಸು ಬೆರಕೆಯೊಂದಿಗೆ ಅದನ್ನು ಭಾರತದಲ್ಲಿ ಅಳವಡಿಸಿಕೊಳ್ಳುವುದು, ಮೋದಿ ಸರ್ಕಾರದ ಕಾರ್ಯಸೂಚಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಇದು, ಶಿಕ್ಷಣ ಕ್ಷೇತ್ರದಲ್ಲಿ, ಪ್ರಸ್ತುತ ಭಾರತದ ರಾಜಕೀಯದಲ್ಲಿ ಪ್ರಾಬಲ್ಯ ಹೊಂದಿರುವ ಕಾರ್ಪೊರೇಟ್-ಹಿಂದುತ್ವ ಮೈತ್ರಿಕೂಟದ ಪ್ರತಿರೂಪವೇ. ಜಾಗತೀಕರಣಗೊಂಡ ಬಂಡವಾಳದೊಂದಿಗೆ ಸಂಯೋಜನೆಗೊಂಡ ಕಾರ್ಪೊರೇಟ್ ಘಟಕವು ವಸಾಹತುಶಾಹಿಯ ಬಗ್ಗೆ ಮತ್ತು ವಸಾಹತುಶಾಹಿ ಶೋಷಣೆಯ ಬಗ್ಗೆ ಎಲ್ಲಾ ಉಲ್ಲೇಖಗಳನ್ನು ಅಳಿಸಿಹಾಕುವ ಶಿಕ್ಷಣದ ಏಕರೂಪೀಕರಣದಿಂದ ಸಂತುಷ್ಟಗೊಳ್ಳುತ್ತದೆ ಮತ್ತು ಬಂಡವಾಳಶಾಹಿ ವ್ಯವಸ್ಥೆಯನ್ನು ಸ್ವಲ್ಪ ಹೆಚ್ಚು ಕಡಿಮೆ ಒಂದು ಸ್ವಾವಲಂಬಿ ವ್ಯವಸ್ಥೆಯಾಗಿ ನೋಡುತ್ತದೆ, ಇನ್ನು ಹಿಂದುತ್ವ ಘಟಕವು ಪ್ರಾಚೀನ ಭಾರತದ "ಶ್ರೇಷ್ಠತೆ"ಯ ಬಗ್ಗೆ ಕೊಡುವ ತುಣುಕು ಸಾಂತ್ವನದ ಮನ್ನಣೆಯೊಂದಿಗೆ ಸಂತುಷ್ಟಗೊಳ್ಳುತ್ತದೆ.

"ವಿಶ್ವ ದರ್ಜೆ"ಯ ಬೆನ್ನಟ್ಟಬೇಕಿಲ್ಲ

ಪಠ್ಯಕ್ರಮ ಮತ್ತು ಕೋರ್ಸ್‌ಗಳ ಏಕರೂಪೀಕರಣವು ಹೆಸರಾಂತ ವಿದೇಶಿ ವಿಶ್ವವಿದ್ಯಾಲಯಗಳು ತಮ್ಮ ಶಾಖೆಗಳನ್ನು ಭಾರತದಲ್ಲಿ ತೆರೆಯಲು ಪ್ರೇರೇಪಿಸುವ ಧಾವಂತದಲ್ಲಿಯೂ ಕಾಣಿಸುತ್ತದೆ. (ಮೋದಿ ಸರ್ಕಾರವೇ ಈ ಧಾವಂತದ ರೂವಾರಿ ಎನ್ನುವಂತಿಲ್ಲ. ಅದರ ಪೂರ್ವ-ತಯಾರಿಯನ್ನು ಯುಪಿಎ-2ರ ಅವಧಿಯಲ್ಲೇ ಮಾಡಲಾಗಿತ್ತು. ಕಾಂಗ್ರೆಸ್ ಮತ್ತು ಬಿಜೆಪಿ, ಈ ಎರಡೂ ಪಕ್ಷಗಳು ನವ-ಉದಾರವಾದಿ ನೀತಿಗಳನ್ನು ಅನುಸರಿಸುತ್ತವೆ ಎಂಬುದಕ್ಕೆ ಇದೊಂದು ನಿದರ್ಶನ). ಭಾರತದ ವಿಶ್ವವಿದ್ಯಾಲಯಗಳು "ವಿಶ್ವ-ದರ್ಜೆ"ಗೆ ಏರಲು ಪ್ರೇರೇಪಣೆಯಾಗುತ್ತದೆ ಎಂಬ ವಾದದ ಮೂಲಕ ಇದನ್ನು ಸಮರ್ಥಿಸಲಾಗುತ್ತಿದೆ. ಆದರೆ ಈ ವಾದವೂ ತಪ್ಪೇ. ಮೊದಲನೆಯದಾಗಿ, ಈ "ವಿಶ್ವ-ದರ್ಜೆಯ" ಪರಿಕಲ್ಪನೆಯನ್ನು ಒಪ್ಪಿಕೊಂಡು ಅದನ್ನು ಸಾಕಾರಗೊಳಿಸಲು ನಮ್ಮ ಪಠ್ಯಕ್ರಮ ಮತ್ತು ಕೋರ್ಸ್‌ಗಳನ್ನು ರೂಪಿಸಿಕೊಳ್ಳುವ ಕ್ರಮವು ಮುಂದುವರೆದ ಬಂಡವಾಳಶಾಹಿ (ಮೆಟ್ರೋಪಾಲಿಟನ್) ದೇಶಗಳ ವಿಶ್ವವಿದ್ಯಾಲಯಗಳ ಆಧಿಪತ್ಯವನ್ನು ಒಪ್ಪಿಕೊಂಡಂತಾಗುತ್ತದೆ. ಏಕೆಂದರೆ, "ವಿಶ್ವದರ್ಜೆ"ಯನ್ನು ನಿರ್ಧರಿಸುವ ಮಾನದಂಡಗಳನ್ನು ಈ ದೇಶಗಳೇ ರೂಪಿಸುತ್ತವೆ. ವಿಶ್ವ-ದರ್ಜೆಯ ಸ್ಥಾನಮಾನಗಳನ್ನು ಉಲ್ಲೇಖಿಸುವ ಮತ್ತು ಅದರ ಬಗ್ಗೆ ಟಿಪ್ಪಣಿ ಮಾಡುವ ಪತ್ರಿಕೆಗಳೂ ಸಹ ಅಲ್ಲಿಯವೇ. ಅವು ವಸಾಹತುಶಾಹಿ ಶೋಷಣೆಯ ಯಾವುದೇ ಉಲ್ಲೇಖಗಳನ್ನು ದೂರವಿಡುತ್ತವೆ. ಹಾಗಾಗಿ, ಅವರು ಹೊಲಿದ ಚಪ್ಪಲಿಯ ಅಳತೆಗೆ ನಮ್ಮ ಕಾಲನ್ನು ಹೊಂದಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ನಮ್ಮ ವಿಶ್ವವಿದ್ಯಾಲಯಗಳು "ವಿಶ್ವ-ದರ್ಜೆ"ಯ ಪಟ್ಟವನ್ನು ಬೆನ್ನಟ್ಟುವ ಬದಲು "ರಾಷ್ಟ್ರ ನಿರ್ಮಾಣ"ದ ಅಗತ್ಯಕ್ಕೆ ಅನುಗುಣವಾಗಿ ನಮ್ಮ ವಿದ್ಯಾರ್ಥಿಗಳನ್ನು ತರಬೇತುಗೊಳಿಸುವ ಉದ್ದೇಶವನ್ನು ಹೊಂದಿರಬೇಕು.


ಅನುಕರಣೆ ಮತ್ತು ಗುಣಮಟ್ಟ

ನಮ್ಮ ವಿಶ್ವವಿದ್ಯಾಲಯಗಳು "ವಿಶ್ವ-ದರ್ಜೆ"ಯ ಪಟ್ಟವನ್ನು ಬೆನ್ನಟ್ಟುವ ಅವಶ್ಯಕತೆ ಇಲ್ಲ ಎಂದಾಗ, ನಮ್ಮ ಉನ್ನತ ಕಲಿಕೆಯ ಬಹುತೇಕ ಸಂಸ್ಥೆಗಳ ಗುಣಮಟ್ಟವು ಕುಸಿದಿರುವುದರ ಬಗ್ಗೆ ಕಣ್ಣು ಮುಚ್ಚಿಕೊಳ್ಳಬೇಕು ಎಂದಲ್ಲ. ನಮ್ಮ ಶಿಕ್ಷಣ ಸಂಸ್ಥೆಗಳ ಗುಣಮಟ್ಟವನ್ನು ನಮ್ಮದೇ ಮಾನದಂಡಗಳ ಮೂಲಕ ಅಳೆಯಬೇಕು. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆಗಳು ಆಗಬೇಕು, ನಿಜ. ಆದರೆ, ಈ ಸುಧಾರಣೆಗಳು "ರಾಷ್ಟ್ರ ನಿರ್ಮಾಣ"ದ ಉದ್ದೇಶವನ್ನು ಈಡೇರಿಸಲು ಅನುವಾಗುವ ದಿಕ್ಕಿನಲ್ಲಿರಬೇಕು.

ಎರಡನೆಯದಾಗಿ, ಹೆಸರಾಂತ ಮೆಟ್ರೋಪಾಲಿಟನ್ ವಿಶ್ವವಿದ್ಯಾಲಯಗಳನ್ನು ಅನುಕರಿಸುವ ಕ್ರಮವು ಗುಣಮಟ್ಟವನ್ನು ಸಂಪಾದಿಸುವ ಮಾರ್ಗವೇ ಅಲ್ಲ. ಹಾರ್ವರ್ಡ್, ಆಕ್ಸ್‌ಫರ್ಡ್ ಮತ್ತು ಕೇಂಬ್ರಿಜ್ ಮುಂತಾದ ಹೆಸರಾಂತ ವಿಶ್ವವಿದ್ಯಾಲಯಗಳನ್ನು ಅನುಕರಿಸಿದಾಗ ನಮ್ಮ ಸಂಸ್ಥೆಗಳು ಶಾಶ್ವತವಾಗಿ ಸಾಧಾರಣ ಮಟ್ಟದಲ್ಲೇ-ಆರಕ್ಕೆ ಏರದ ಮೂರಕ್ಕೆ ಇಳಿಯದ ಮಟ್ಟದಲ್ಲೇ-ಉಳಿಯುತ್ತವೆ. ಅದೂ ಅಲ್ಲದೆ, ಈ ಪ್ರಕ್ರಿಯೆಯು ನಮ್ಮ ಇಡೀ ಶಿಕ್ಷಣ ವ್ಯವಸ್ಥೆಯನ್ನು ದುರವಸ್ಥೆಗೆ ತಳ್ಳುತ್ತದೆ. ಬೋಧಕ ವರ್ಗ ಮತ್ತು ಇತರ ಮೂಲಸೌಕರ್ಯಗಳನ್ನು ಹೊಂದಿಸಿಕೊಳ್ಳಲಾಗದ ಶಿಕ್ಷಣ ಸಂಸ್ಥೆಗಳು, ಸಾಮಾನ್ಯವಾಗಿ ಸಾರ್ವಜನಿಕ ಸಂಸ್ಥೆಗಳೇ ಆಗಿರುತ್ತವೆ. ಮೆಟ್ರೋಪಾಲಿಟನ್ ವಿಶ್ವವಿದ್ಯಾಲಯಗಳೇ ಒಂದು ಮಾದರಿ ಎನ್ನುವ ವಾತಾವರಣದಲ್ಲಿ, ಅನ್ನ-ಬಟ್ಟೆ ಸಂಪಾದಿಸುವ ಚಾಕರಿಯ ಶಿಕ್ಷಣವನ್ನು ಒದಗಿಸುವ

ಪುಟ 14 ನೋಡಿ

ಜಾಗತೀಕರಣಗೊಂಡ ಹಣಕಾಸು ಬಂಡವಾಳವು ತಾನು ದುಡಿಸಿಕೊಳ್ಳಬೇಕೆಂದಿರುವ ಸಿಬ್ಬಂದಿಯನ್ನು ತರಬೇತುಗೊಳಿಸುವ ಶಿಕ್ಷಣ ವ್ಯವಸ್ಥೆಯು ಪ್ರಪಂಚದಾದ್ಯಂತ ಏಕರೂಪದಲ್ಲಿರಬೇಕೆಂದು ಬಯಸುತ್ತದೆ. ಅದಕ್ಕಾಗಿ ತನ್ನನ್ನು ಬೆಂಬಲಿಸುವ ಒಂದು ಸಾಮಾಜಿಕ ನೆಲೆಯನ್ನು ರೂಪಿಸಿಕೊಳ್ಳುವ ಆಸಕ್ತಿ ಅದರದ್ದು. ಭಾರತದಂತಹ ದೇಶಗಳಲ್ಲಿ ಹಣಕಾಸು ಬಂಡವಾಳವು ಕಾಣಲು ಬಯಸುವುದು ಇದನ್ನೇ. ಮೋದಿ ಸರ್ಕಾರದ ಹೊಸ ಶಿಕ್ಷಣ ನೀತಿಯು ಮಾಡಲು ಪ್ರಯತ್ನಿಸುತ್ತಿರುವುದು ಕೂಡ ಇದನ್ನೇ.



ಹಣಕಾಸು ಬಂಡವಾಳದ ಅಗತ್ಯಗಳಿಗಾಗಿ ಹೊಸ ಶಿಕ್ಷಣ ನೀತಿ

ಪುಟ 13 ರಿಂದ

ಶಿಕ್ಷಣ–ಶಿಕ್ಷಣಸಂಸ್ಥೆಗಳು ಅದನ್ನೂ ಒದಗಿಸಲಾಗದ ಕೀಳರಿಮೆಯನ್ನು ಬೆಳೆಸಿಕೊಳ್ಳುತ್ತವೆ. ಮತ್ತೊಂದೆಡೆ, ಉತ್ತಮ ಬೋಧಕರನ್ನು ಸೆಳೆದುಕೊಳ್ಳುವ ಸಾಮರ್ಥ್ಯವುಳ್ಳ ಮತ್ತು ವಿದೇಶಿ ವಿಶ್ವವಿದ್ಯಾಲಯಗಳಿಗೆ ಸರಿಸಮನಾದ ಮೂಲಸೌಕರ್ಯಗಳನ್ನು ಒದಗಿಸಿಕೊಳ್ಳುವ ಸಾಮರ್ಥ್ಯವುಳ್ಳ ವಿದ್ಯಾ ಸಂಸ್ಥೆಗಳು, ವಿದೇಶಿ ವಿಶ್ವವಿದ್ಯಾಲಯಗಳಿಗೆ ತಮ್ಮ ಅತ್ಯುತ್ತಮ ಬೋಧಕರನ್ನು ಶಾಶ್ವತವಾಗಿ ಕಳೆದುಕೊಳ್ಳುತ್ತವೆ. ಕಾರಣ ಸರಳವಾಗಿದೆ. ಯೇಲ್ ಯೂನಿವರ್ಸಿಟಿಯನ್ನು ಅನುಕರಿಸುವ ಮೂರನೆಯ ಜಗತ್ತಿನ ಒಂದು ವಿದ್ಯಾ ಸಂಸ್ಥೆಯಲ್ಲಿ ಬೋಧಿಸುವ ಒಬ್ಬ ಬೋಧಕನು, ತನಗೆ ಯೇಲ್ ಯೂನಿವರ್ಸಿಟಿಯಲ್ಲೇ ಉದ್ಯೋಗ ದೊರೆತರೆ ಅಥವಾ ಆತನಿಗೆ ಯಾವುದೋ ಒಂದು ದೇಶದ ಯಾವುದೋ ಒಂದು ವಿಶ್ವವಿದ್ಯಾಲಯದ ಬೋಧಕ ವೃತ್ತಿಯು, ಯೇಲ್ ಯೂನಿವರ್ಸಿಟಿಯಲ್ಲಿ ಬೋಧಕ ಉದ್ಯೋಗವನ್ನು ಗಳಿಸುವ ಮೆಟ್ಟಿಲಾದರೆ, ಆ ಬೋಧಕನು ಮೂರನೆಯ ಜಗತ್ತಿನ ವಿದ್ಯಾ ಸಂಸ್ಥೆಯಲ್ಲಿ ಉಳಿಯುವುದಾದರೂ ಹೇಗೆ?

ಇದೆಲ್ಲವನ್ನೂ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಪಠ್ಯಕ್ರಮದ ಮತ್ತು ಕೋರ್ಸ್‌ಗಳ ಅರ್ಥದಲ್ಲಿ ಶಿಕ್ಷಣದ ಏಕರೂಪೀಕರಣವು ಅಗತ್ಯವಾಗಿ ವಿದ್ಯಾರ್ಥಿಗಳ ಸೇರ್ಪಡೆಯನ್ನು (ಮುಖ್ಯವಾಗಿ ಮಧ್ಯಮ ವರ್ಗದ ವಿದ್ಯಾರ್ಥಿಗಳು ಕೋರ್ಸ್‌ಗಳಿಗೆ ಸೇರುವುದನ್ನು) ಏಕರೂಪಗೊಳಿಸುತ್ತದೆ. ಅಂದರೆ, ಈ ಏಕರೂಪೀಕರಣವು, ಪ್ರಧಾನವಾಗಿ ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಒಂದೇ ರೀತಿಯ ಉದ್ಯೋಗದ ಪ್ರೇರಣೆಯನ್ನೂ ಒದಗಿಸುತ್ತದೆ. ಜನಸೇವೆ ಮಾಡುವ ಬಯಕೆ ಹೊಂದಿದ ಜನಸಾಮಾನ್ಯರ ಮಕ್ಕಳಿಗೆ ತರಬೇತಿ ನೀಡುತ್ತಿದ್ದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ದೇಶದ ಶಿಕ್ಷಣ ಸಂಸ್ಥೆಗಳು ಯಾವ ಮೆಟ್ರೋಪಾಲಿಟನ್ ವಿಶ್ವವಿದ್ಯಾಲಯಗಳನ್ನು ಅನುಕರಿಸಲು ಬಯಸುತ್ತವೆಯೋ ಅದೇ ಸ್ಥಳಗಳಿಗೆ ವಲಸೆ ಹೋಗುವ ಬಯಕೆಯ ತಾಣಗಳಾಗಿ ಬದಲಾಯಿಸಲಾಗುತ್ತದೆ.

ಭಾರತದಂತಹ ಮೂರನೇ ಜಗತ್ತಿನ ದೇಶಗಳು "ರಾಷ್ಟ್ರ ನಿರ್ಮಾಣ"ಕ್ಕಾಗಿ ಮಾತ್ರವಲ್ಲದೆ, ಒಂದು ಅರ್ಹ ಶೈಕ್ಷಣಿಕ ವಾತಾವರಣವನ್ನು ಸೃಷ್ಟಿಸುವ ಯೋಗ್ಯ ಶಿಕ್ಷಣ ಸಂಸ್ಥೆಗಳನ್ನು ಹೊಂದಬೇಕಾದರೆ, ಪಠ್ಯಕ್ರಮಗಳನ್ನು ಮತ್ತು ಉದ್ಯೋಗ–ಪ್ರೋತ್ಸಾಹಕಗಳನ್ನು ಮತ್ತು ವಿದೇಶಿ ವಿದ್ಯಾ ಸಂಸ್ಥೆಗಳ, ಅವು ಎಷ್ಟೇ ಖ್ಯಾತಿವೆತ್ತ ಸಂಸ್ಥೆಗಳಾಗಿದ್ದರೂ ಸಹ, ದೃಷ್ಟಿಕೋನವನ್ನು ಅನುಕರಿಸುವ ಒತ್ತಡವನ್ನು ತ್ಯಜಿಸಬೇಕು. ಶಿಕ್ಷಣವು, ಒಂದು ದೇಶದ ವಾಸ್ತವದಲ್ಲಿ ಬೇರೂರಬೇಕು, ಇಲ್ಲದಿದ್ದರೆ ಅದು ಎರಡನೇ ದರ್ಜೆಯ ದೇಶವಾಗುತ್ತದೆ.

ಉದಾಹರಣೆಗೆ, ಜಾತಿ ದಬ್ಬಾಳಿಕೆಯಂತಹ ಭಾರತೀಯ ಸಮಾಜಕ್ಕೆ ನಿರ್ದಿಷ್ಟವಾದಂತಹ ಸಮಸ್ಯೆಗಳು ಅಧ್ಯಯನದ ವಿಷಯಗಳಾಗದೆ ಉಳಿದು ಬಿಡುತ್ತವೆ. ಏಕೆಂದರೆ, ಜಾಗತೀಕರಣಗೊಂಡ ಬಂಡವಾಳಕ್ಕೆ, ಜಾತಿ ದಬ್ಬಾಳಿಕೆಯು ಒಂದು ವಿಷಯವೇ ಅಲ್ಲ, ಇನ್ನು ಹಿಂದುತ್ವ ಪಡೆಗೆ, ಜಾತಿ ದಬ್ಬಾಳಿಕೆಯು ಭಾರತದ ನಾಗರಿಕತೆಯ "ಶ್ರೇಷ್ಠತೆ"ಯನ್ನು ತಗ್ಗಿಸುವ ವಿಷಯವಾಗುವುದರಿಂದ ಅದನ್ನು ಗುಡಿಸಿ ಚಾಪೆಯ ಕೆಳಗೆ ತಳ್ಳುತ್ತದೆ. ಆದ್ದರಿಂದ ಇಡೀ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಜಾತಿಯನ್ನು ಭಾರತೀಯ ಸಮಾಜದ ಒಂದು ಅಸಹ್ಯಕರ ಲಕ್ಷಣವೆಂದಾಗಲೀ ಅಥವಾ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ, ನೇಮಕಾತಿ ಮತ್ತು ಬಡ್ತಿ ಪ್ರಕ್ರಿಯೆಗಳಲ್ಲಿ ಮೀಸಲಾತಿಯಂತಹ ಕ್ರಮಗಳ ಅಗತ್ಯವಿರುವ ಸಂಗತಿಯೆಂದಾಗಲೀ ಉಲ್ಲೇಖ ಮಾಡದೇ ಇರುವುದು ಆಕಸ್ಮಿಕವಲ್ಲ. ಈ ಮೌನವೂ ಸಹ ಏಕರೂಪೀಕರಣದ ಪರಿಣಾಮವೇ.

ಭೂಮಿಯ ಹಕ್ಕು ಪಡೆಯುವ 23 ಬುಡಕಟ್ಟು ಕುಟುಂಬಗಳ ದೀರ್ಘ ಹೋರಾಟಕ್ಕೆ ಗೆಲುವು





ತಮಿಳುನಾಡಿನ ಅಣಮಲೈ ಹುಲಿ ಸಂರಕ್ಷಣಾ (ಎಟಿಆರ್) ಪ್ರದೇಶದ ಕಲ್ಲರ್ ಎಂಬಲ್ಲಿನ ಕಡರ್ ಬುಡಕಟ್ಟಿನ 23 ಕುಟುಂಬಗಳು ಕೊನೆಗೂ ಅರಣ್ಯ ಹಕ್ಕುಗಳ ಕಾಯ್ದೆ, 2006ರ ಅಡಿಯಲ್ಲಿ ಜಮೀನು ಪಟ್ಟಾ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ,

ಆಗಸ್ಟ್ 20, 2019ರಲ್ಲಿ ಅತಿಕ್ರಮಣಕಾರರು ಎಂದು ಈ ಬುಡಕಟ್ಟಿನ ಸುಮಾರು 90 ಸದಸ್ಯರನ್ನು ಅವರ ಪಾರಂಪರಿಕ ವಾಸಸ್ಥಳಗಳಿಂದ ಎಬ್ಬಿಸಲಾಗಿತ್ತು. ಅವರು ನೆಲೆಸಿದ್ದ ಗುಡಿಸಲುಗಳು ಒಂದು ಭೂಕುಸಿತದಲ್ಲಿ ನೆಲಸಮಗೊಂಡವು. ಆಗ ಅವರು ಹತ್ತಿರದ ಒಂದು ಸ್ಥಳದಲ್ಲಿ ತಾತ್ಕಾಲಿಕ ಗುಡಾರಗಳನ್ನು ಹಾಕಿಕೊಂಡರು. ಆದರೆ ಅವರನ್ನು ಅಲ್ಲಿಂದ ಅರಣ್ಯ ಇಲಾಖೆಯವರು ಪೋಲೀಸ್ ಮತ್ತು ರೆವಿನ್ಯೂ ಇಲಾಖೆಯ ನೆರವಿನಿಂದ ಎಬ್ಬಿಸಿದರು. ಸುಮಾರು 23 ಕುಟುಂಬಗಳನ್ನು ತೈಮುಡಿ ಎಂಬಲ್ಲಿನ ಚಹಾ ಎಸ್ಟೇಟಿನ ಬಳಸದೆ ಬಿಟ್ಟಿದ್ದ ಕ್ವಾರ್ಟರ್‌ಗೆ ಸ್ಥಳಾಂತರಿಸಲಾಯಿತು. ಅಂದಿನಿಂದ ಅವರು ಅಲ್ಲೇ ನೆಲೆಸಿದ್ದರು.

ಒಕ್ಕಲೆಬ್ಬಿಸಿದ ನಂತರ ಈ ಆದಿವಾಸಿ ಸಮುದಾಯದವರು ಅರಣ್ಯ ಹಕ್ಕುಗಳ ಕಾಯ್ದೆಯ ಅಡಿಯಲ್ಲಿ ತೆಪ್ಪಕುಲಮೇಡು ಎಂಬಲ್ಲಿ ಪರ್ಯಾಯ ಜಮೀನಿನ ಪಟ್ಟಾ ಕೊಡಬೇಕು ಎಂದು ಕೇಳಿದರು. ಈ ಕುರಿತಂತೆ ಮಾರ್ಚ್ 2020ರಲ್ಲಿ ಅವರ ಗ್ರಾಮಸಭೆ ಒಂದು ನಿರ್ಣಯವನ್ನು ಪಾಸು ಮಾಡಿತು. ಆದರೆ ಈ ಸ್ಥಳ 'ಹುಲಿ ಪ್ರದೇಶ'ವಾದ್ದರಿಂದ ಪಟ್ಟಾ ಕೊಡಲಾಗುವುದಿಲ್ಲ ಎಂದು ಎಟಿಆರ್ ನ ಅಧಿಕಾರಿಗಳು ತಿಳಿಸಿದಾಗ ಪಟ್ಟಾ ಪಡೆಯಲು ಅಖಿಲ ಭಾರತ ಕಿಸಾನ್ ಸಭಾಕ್ಕೆ ಸಂಯೋಜಿತವಾದ ತಮಿಳುನಾಡು ಬುಡಕಟ್ಟು ಸಂಘ(ಟಿ.ಎನ್.ಟಿ.ಎ.) ಮತ್ತು ಏಕತಾ ಪರಿಷತ್ ನೇತೃತ್ವದಲ್ಲಿ ಹೋರಾಟ ಆರಂಭಿಸಿದರು. ಕೊನೆಗೂ ಈ ಹೋರಾಟಕ್ಕೆ ಯಶಸ್ಸು ದೊರೆತಿದೆ. ರಾಜ್ಯ ಸರಕಾರ ಮತ್ತು ಜಿಲ್ಲಾ ಆಡಳಿತ ಪಟ್ಟಾ ನೀಡಬೇಕೆಂಬ ಬೇಡಿಕೆಯನ್ನು ಒಪ್ಪಿಕೊಂಡಿದೆ.

ಎರಡು ವರ್ಷಗಳ ಹಿಂದೆ ಅತಿಕ್ರಮಣಕಾರರು ಎಂದೆನಿಸಿಕೊಂಡವರು ಈಗ ತಮ್ಮ ಹಕ್ಕಿನ ಜಾಗದಲ್ಲಿ ಬದುಕುವುದು ಸಾಧ್ಯವಾಗಿದೆ ಎಂದಿರುವ ಟಿ.ಎನ್.ಟಿ.ಎ. ಮುಖಂಡರು ತಮಿಳುನಾಡು ಸರಕಾರ ಅರಣ್ಯ ಹಕ್ಕುಗಳ ಕಾಯ್ದೆಯ ಪರಿಣಾಮಕಾರೀ ಅನುಷ್ಠಾನವನ್ನು ಖಾತ್ರಿಪಡಿಸಬೇಕು ಎಂದು ಹೇಳಿದ್ದಾರೆ.

23ನೇ ಉತ್ತರ ಪ್ರದೇಶ ಸಿಪಿಐ(ಎಂ) ರಾಜ್ಯ ಸಮ್ಮೇಳನ



ಸಿಪಿಐ(ಎಂ) ನ 23ನೇ ಉತ್ತರಪ್ರದೇಶ ರಾಜ್ಯ ಸಮ್ಮೇಳನ ಅಕ್ಟೋಬರ್ 2–4 ರವರೆಗೆ ಅಲಹಾಬಾದಿನಲ್ಲಿ ನಡೆಯಿತು. ಗಾಂಧಿ ಜಯಂತಿ ಸಂದರ್ಭದ ಒಂದು ವಿಚಾರ ಸಂಕಿರಣದೊಂದಿಗೆ ಸಮ್ಮೇಳನ ಆರಂಭವಾಯಿತು. ಪೊಲಿಟ್‌ಬ್ಯುರೊ ಸದಸ್ಯ ಪ್ರಕಾಶ ಕಾರಟ್ ಅದರಲ್ಲಿ ಭಾಗವಹಿಸುತ್ತ ಅವರ ಹತ್ಯೆಯ ಹಿಂದೆ ಸ್ವಾತಂತ್ರ್ಯಕ್ಕೆ ವಿರುದ್ಧವಾದ ಒಂದು ತತ್ವಸಿದ್ಧಾಂತವಿದೆ. ಈಗ ಅದೇ ಸಿದ್ಧಾಂತದ ಜನ ಅಧಿಕಾರ ನಡೆಸುತ್ತಿದ್ದಾರೆ ಎಂದರು.

ಇನ್ನೊಬ್ಬರು ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿ ಮತ್ತು ಕೇಂದ್ರ ಸಮಿತಿ ಸದಸ್ಯ ಜೆ.ಎಸ್. ಮಜುಂದಾರ್ ಕೂಡ ವಿಚಾರ ಸಂಕಿರಣವನ್ನು ಉದ್ದೇಶಿಸಿ ಮಾತಾಡಿದರು.

ಸಮ್ಮೇಳನದಲ್ಲಿ ರಾಜ್ಯ ಕಾರ್ಯದರ್ಶಿ ಹೀರಾಲಾಲ್ ಯಾದವ್ ಮಂಡಿಸಿದ ವರದಿಯ ಮೇಲೆ 55 ಪ್ರತಿನಿಧಿಗಳು ಮಾತಾಡಿದರು.

ಸಮ್ಮೇಳನ 35 ಸದಸ್ಯರಿರುವ ರಾಜ್ಯ ಸಮಿತಿಯನ್ನು ಆರಿಸಿತು. ಹೀರಾಲಾಲ್ ಯಾದವ್ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಇದೇ ವೇಳೆಯಲ್ಲಿ ಲಖಿಂಪುರ್ ಖೇರಿಯಲ್ಲಿನ ಘಟನೆ ನಡೆದಿದ್ದು, ಸಮ್ಮೇಳನದ ಅಂತ್ಯದಲ್ಲಿ ಒಂದು ಸಂತಾಪ ನಿರ್ಣಯವನ್ನು ಅಂಗೀಕರಿಸಲಾಯಿತು ಹಾಗೂ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ಸೀತಾರಾಂ ಯೆಚುರಿ, ಸುಭಾಷಿಣಿ ಅಲಿ ಮತ್ತು ಹೀರಾಲಾಲ್ ಯಾದವ್ ಇದರಲ್ಲಿ ಭಾಗವಹಿಸಿದರು.

16ನೇ ಹರ್ಯಾಣ ಸಿಪಿಐ(ಎಂ) ರಾಜ್ಯ ಸಮ್ಮೇಳನ

ಸಿಪಿಐ(ಎಂ) ನ 16ನೇ ಹರ್ಯಾಣ ರಾಜ್ಯ ಸಮ್ಮೇಳನ ಅಕ್ಟೋಬರ್ 2 ರಿಂದ 4 ರ ವರೆಗೆ ಹಿಸ್ಸಾರ್ ಜಿಲ್ಲೆಯ ಬರ್ವಾಲದಲ್ಲಿ ನಡೆಯಿತು. ಸಮ್ಮೇಳನದ ಬಹಿರಂಗ ಅಧಿವೇಶನ ಈ ಸ್ಥಳದಲ್ಲಿರುವ ಭಗತ್‌ಸಿಂಗ್, ರಾಜಗುರು ಮತ್ತು ಸುಖದೇವ್ ಅವರ ಪ್ರತಿಮೆಗಳಿಗೆ ಹಾರಾರ್ಪಣೆಯೊಂದಿಗೆ ಆರಂಭವಾಯಿತು.

ಭಾರತದ ಸ್ವಾತಂತ್ರ್ಯದ 75ನೇ ವರ್ಷಾಚರಣೆ ಮತ್ತು ಗಾಂಧಿ ಜಯಂತಿಯ ಸಂದರ್ಭದಲ್ಲಿ ಒಂದು 'ಸಂಕಲ್ಪ ಸಭೆ' ನಡೆಸಲಾಯಿತು. ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಈ ಸಮಾರಂಭದ ಪ್ರಧಾನ ಭಾಷಣ ಮಾಡಿದರು. ನಂತರ ಪ್ರತಿನಿಧಿ ಅಧಿವೇಶನವನ್ನು ಕೂಡ ಅವರು ಉದ್ಘಾಟಿಸಿದರು.



ಒಟ್ಟು 145 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಇವರಲ್ಲಿ 22 ಮಹಿಳೆಯರು ಮತ್ತು 35 ದಲಿತರು.

ಸಮ್ಮೇಳನ 30 ಸದಸ್ಯರಿರುವ ರಾಜ್ಯ ಸಮಿತಿಯನ್ನು ಆರಿಸಿತು. ಸುರೇಂದ್ರ ಸಿಂಗ್ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದರು, ಮತ್ತು 9 ಸದಸ್ಯರಿರುವ ರಾಜ್ಯಕಾರ್ಯದರ್ಶಿ ಮಂಡಳಿಯನ್ನು ಆರಿಸಲಾಯಿತು.

ಪೊಲಿಟ್ ಬ್ಯುರೊ ಸದಸ್ಯರಾದ ನೀಲೋತ್ಪಲ ಬಸು ಮತ್ತು ಕೇಂದ್ರ ಸಮಿತಿ ಸದಸ್ಯರಾದ ಕೆ. ಹೇಮಲತಾ ಸಮಾರೋಪ ಭಾಷಣ ಮಾಡಿದರು.

ಕ್ಯೂಬಾದಲ್ಲಿ ನವೆಂಬರ್ 15 ರಂದು ಪ್ರದರ್ಶನಗಳಿಗೆ ಯು.ಎಸ್ ಪಿತೂರಿ

ಸೆಪ್ಟೆಂಬರ್ 20–27ರ ನಡುವೆ ಕ್ಯೂಬಾದ ಸ್ಥಳೀಯ ಸರಕಾರದ ಕಚೇರಿಗಳಲ್ಲಿ ಹಲವು ಮನವಿಗಳು ಒಂದೇ ಸಮಯದಲ್ಲಿ ಬಂದವು. ಕ್ಯೂಬಾದ ಎಂಟು ಪ್ರದೇಶಗಳಲ್ಲಿನ ಎಲ್ಲ ಪ್ರಾಂತೀಯ ಮತ್ತು ನಗರಗಳ ಸರಕಾರಗಳ ಮುಖ್ಯ ಕಚೇರಿಗೆ ನವೆಂಬರ್ 15ರಂದು "ಶಾಂತಿಯುತ ಮೆರವಣಿಗೆ"ಗಳನ್ನು ನಡೆಸಲು ಈ ಮನವಿಗಳು ಅನುಮತಿ ಕೇಳಿದವು. ಈ ಮೆರವಣಿಗೆಗಳು ಇಡೀ ದೇಶದಲ್ಲಿ ಸಂಯೋಜಿತವಾಗಿದ್ದು, ಇದರ ಸಂಘಟಕರು ಯು.ಎಸ್ ಸರಕಾರದಿಂದ ಅನುದಾನ ಪಡೆಯುವ ಕ್ಯೂಬಾ ಸರಕಾರವನ್ನು ಮತ್ತು ರಾಜಕೀಯ ವ್ಯವಸ್ಥೆಯನ್ನು ಬುಡಮೇಲು ಮಾಡುವ ಸಂಘಟನೆಗಳ ಜತೆಗೆ ಸಂಬಂಧ ಹೊಂದಿರುವವರು ಎಂದು ಕ್ಯೂಬಾ ಸರಕಾರಕ್ಕೆ ತಿಳಿದು ಬಂತು.

ಈ 'ಶಾಂತಿಯುತ ಮೆರವಣಿಗೆ'ಗಳ ಕುರಿತು ಸಂಘಟಕರು ಅನುಮತಿಗೆ ಮೊದಲೇ ಘೋಷಣೆಗಳನ್ನು ಮಾಡಿದ್ದಾರೆ. ಕೂಡಲೇ ಯು.ಎಸ್ ಶಾಸಕರು, ಅಲ್ಲಿ ನೆಲೆ ಹೊಂದಿರುವ ರಾಜಕೀಯ ಕಾರ್ಯಕರ್ತರು ಮತ್ತು ಯು.ಎಸ್ ಮಾಧ್ಯಮಗಳ ವರದಿಗಾರರು/ಲೇಖಕರು ಇದರ ಕುರಿತು ಸಾರ್ವಜನಿಕ ಪ್ರಚಾರ ಆರಂಭಿಸಿದ್ದರು. ಇವರು ಸತತವಾಗಿ ಕ್ಯೂಬಾ ಸರಕಾರದ ವಿರುದ್ಧ ಬುಡಮೇಲು ಕೃತ್ಯ ಮಾಡುವ ವ್ಯಕ್ತಿಗಳು ಸಂಘಟನೆಗಳಿಗೆ ಬೆಂಬಲ ನೀಡುವವರು ಮತ್ತು ಕ್ಯೂಬಾದ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸಬೇಕೆಂದು ಸಾರ್ವಜನಿಕವಾಗಿ ಕರೆ ಕೊಡುವವರು. ಈ ಇಡೀ ಕಾರ್ಯಕ್ರಮಕ್ಕೆ ಹಣಕಾಸು, ಸಂಘಟನಾ ವ್ಯವಸ್ಥೆ, ಸಂಯೋಜನೆ, ನಿರ್ವಹಣೆ ಒದಗಿಸುವಲ್ಲಿ National Endowment for Democracy (NED) ಮತ್ತು US Agency for International Development (USAID) ಎಂಬ ಯು.ಎಸ್ ಸರಕಾರದ ಕುಖ್ಯಾತ ಸಂಸ್ಥೆಗಳ ಕೈವಾಡ ಕಂಡು ಬಂದಿದೆ. ಈ ಎರಡು ಸಂಸ್ಥೆಗಳು ಯು.ಎಸ್ ಕಾರ್ಪೊರೆಟುಗಳ ಹಿತಾಸಕ್ತಿಗೆ ಅನುವಾಗದ ಯಾವುದೇ ರಾಷ್ಟ್ರವಾದಿ, ಎಡಪಂಥೀಯ ಸರಕಾರಗಳ ವಿರುದ್ಧ, ಪ್ರಜಾಪ್ರಭುತ್ವ ಸ್ಥಾಪಿಸುವ ಹೆಸರಲ್ಲಿ ಬುಡಮೇಲು ಕೃತ್ಯಗಳನ್ನು ಪ್ರಚೋದಿಸುವುದರಲ್ಲಿ ವಿಶೇಷ ಪರಿಣಿತಿ ಪಡೆದ ಸಂಸ್ಥೆಗಳು ಎಂದು ಕ್ಯೂಬನ್ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸೈದ್ಧಾಂತಿಕ ವಿಭಾಗದ ಮುಖ್ಯಸ್ಥ ರೊಗೇಲಿಯೊ ಪೊಲಾಂಕೊ ಹೇಳಿದ್ದಾರೆ.

ಇವು ಕ್ಯೂಬಾದಲ್ಲೂ, ಪ್ರಮುಖವಾಗಿ ಇತರ ಲ್ಯಾಟಿನ್ ಅಮೆರಿಕದ ದೇಶಗಳಲ್ಲೂ ಇಂತಹ ಬುಡಮೇಲು ಕಾರ್ಯಾಚರಣೆಗಳನ್ನು ನಡೆಸಿರುವುದಕ್ಕೆ ಪುರಾವೆಗಳಿವೆ. ಇವು ನಿಕರಾಗುವ, ವೆನೆಜುವೇಲಾ, ಯುಗೊಸ್ಲಾವಿಯಗಳಲ್ಲಿ ಎನ್.ಜಿ.ಒ ಗಳ ಜಾಲಗಳನ್ನು ನಡೆಸಿ ಧನಸಹಾಯ ಮಾಡಿ ಸರಕಾರ–ವಿರೋಧಿ ಚಳುವಳಿಗಳನ್ನು ನಡೆಸಿವೆ. ಅವು ಕೆಲಸ ಮಾಡದಾಗ ಹಿಂಸಾಚಾರಗಳನ್ನು ಪ್ರಚೋದಿಸಿರುವ ಪುರಾವೆಗಳೂ ಇವೆ. ವೆನೆಜುವೇಲಾದಲ್ಲಿ ಇಂತಹ ಇತ್ತೀಚಿನ ಹಿಂಸಾಚಾರ ನಡೆಸಿದ ಕುರಿತು ಪುರಾವೆ ಸಹಿತ ವಿವರವಾದ ವರದಿಗಳು ಲಭ್ಯ ಇವೆ. ಇಡೀ ಕ್ಯೂಬಾ ಸೇರಿದಂತೆ ಲ್ಯಾಟಿನ್ ಅಮೆರಿಕದಲ್ಲಿ ಇಂತಹ ಬುಡಮೇಲು ಕೃತ್ಯಗಳನ್ನು ನಡೆಸಲು Center for Opening and Development of Latin America (CADAL) ಎಂಬ ಸಂಸ್ಥೆಯನ್ನು ಇವು ಬಳಸಿರುವ ಕುರಿತು ಪುರಾವೆಗಳು ದೊರಕಿವೆ. ನವೆಂಬರ್ 15 ಮೆರವಣಿಗೆಗಳ ಇಬ್ಬರು ಪ್ರಮುಖ ಸಂಘಟಕರು ಇತ್ತೀಚೆಗೆ ಅರ್ಜೆಂಟಿನಾದಲ್ಲಿ ಕ್ಯೂಬಾದಲ್ಲಿ "ಬದಲಾವಣೆ ಮತ್ತು ಕ್ಯೂಬಾದಲ್ಲಿ ಕ್ರಾಂತಿಕಾರಿ ಪಡೆಗಳ ಹೊಸ ಪಾತ್ರ"ದ ಕುರಿತು ವಿಶೇಷ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಇದರ ನಿರ್ದೇಶಕನೇ ನವಂಬರ್ 15 'ಮೆರವಣಿಗೆ'ಗಳ ಸಂಘಟಕರಲ್ಲಿ ಒಬ್ಬ. ಅಂಆಂಐ ಕ್ಯೂಬಾ ಬುಡಮೇಲು ಕೃತ್ಯಗಳಿಗೆ 67 ಲಕ್ಷ ಡಾಲರುಗಳ ಅನುದಾನ ಹೊಂದಿದೆ ಎಂದೂ ಪೊಲಾಂಕೊ ಹೇಳಿದ್ದಾರೆ.

ಇವಲ್ಲದೆ ನೇರವಾಗಿ ಯು.ಎಸ್ ಸರಕಾರ ಅನುದಾನ ಪಡೆಯುವ DNA, Cubanet ಪತ್ರಿಕೆಗಳು, Cuban Democratic Directorate, ಸತತ ಕ್ಯೂಬಾ–ವಿರೋಧಿ ಪ್ರಚಾರ ನಡೆಸುವ Radio and TV Mart ಗಳಿಗೆ ಬೆಂಬಲ ಕೊಡುವ Office of Broadcasting for Cuba ಗಳು ನವೆಂಬರ್ 15ರ ಕಾರ್ಯಾಚಾರಣೆಯಲ್ಲಿ ಪಾಲುಗೊಂಡಿವೆ. ಆದ್ದರಿಂದ ನವೆಂಬರ್ 15ರಂದು ಯೋಜಿಸಿರುವುದು ಬರಿಯ ದೇಶವ್ಯಾಪಿ "ಶಾಂತಿಯುತ ಮೆರವಣಿಗೆ"ಗಳಲ್ಲ. ಬದಲಾಗಿ ಸಾಫ್ಟ್ ಕ್ಷಿಪ್ರಕ್ರಾಂತಿ. ಇದು ಸಫಲವಾಗದಿದ್ದರೆ ಹಿಂಸಾಚಾರ, ಮಿಲಿಟರಿ ಮಧ್ಯಪ್ರವೇಶದ ಮೂಲಕ ಮಿಲಿಟರಿ ಕ್ಷಿಪ್ರಕ್ರಾಂತಿ ಯ ಸಾಧ್ಯತೆಗಳೂ ಇವೆ. ಇದರ ಸಂಘಟಕ ಕ್ಯೂಬನ್ ನಾಗರಿಕರಲ್ಲ. ಯು.ಎಸ್ ಸರಕಾರ. ಆದ್ದರಿಂದ ಕ್ಯೂಬನ್ ಸರಕಾರ ಈ "ಶಾಂತಿಯುತ ಮೆರವಣಿಗೆ"ಗಳನ್ನು ಸಂಘಟಿಸುವ ಮನವಿಗಳನ್ನು ಸಂವಿಧಾನದ 56, 45 ಮತ್ತು 4 de ಕಲಮುಗಳ ಪ್ರಕಾರ ತಿರಸ್ಕರಿಸಿದೆ ಎಂದು ಪೊಲಾಂಕೊ ಕ್ಯೂಬಾದ ವಿದ್ಯಾರ್ಥಿ ಮತ್ತು ಯುವಜನ ಸಂಘಟನೆಗಳ ಪ್ರತಿನಿಧಿಗಳನ್ನು ಉದ್ದೇಶಿಸಿ ಮಾತನಾಡುತ್ತಾ ಹೇಳಿದ್ದಾರೆ.

ಕ್ಯೂಬನ್ ಕಮ್ಯುನಿಸ್ಟ್ ಪಕ್ಷ ಈ ಕುರಿತು ವಿಶ್ವದಾದ್ಯಂತ ಇತರ ಸೋದರ ಪಕ್ಷಗಳಿಗೆ ಮಾಹಿತಿ ನೀಡಿದೆ. ಈ ನವೆಂಬರ್ 15ರಂದು ಯೋಜಿತ ಯು.ಎಸ್ ಸರಕಾರ ಪ್ರಾಯೋಜಿತ ಬುಡಮೇಲು ಕೃತ್ಯಗಳನ್ನು ಖಂಡಿಸಿ ಕ್ಯೂಬನ್ ಜನತೆ, ಕಮ್ಯುನಿಸ್ಟ್ ಪಕ್ಷ ಮತ್ತು ಸರಕಾರಗಳಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸಿ ಸಿಪಿಐ(ಎಂ) ಕೇಂದ್ರ ಸಮಿತಿ ಮತ್ತು ಜಗತ್ತಿನ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಅಂತರ್ರಾಷ್ಟ್ರೀಯ ಸೆಕ್ರೆಟಾರಿಯಟ್ ಹೇಳಿಕೆ ನೀಡಿವೆ.

ಹವಾಮಾನ ಬದಲಾವಣೆ: ಗ್ಲಾಸ್ಗೊ ಸಮ್ಮೇಳನ ಮತ್ತು ಭಾರತ..... ಪುಟ 6 ರಿಂದ

ಮಾಡಿ ಸಂಭ್ರಮಿಸುವ ಭಾರತೀಯ ಮಾಧ್ಯಮಗಳಂತೆ ಜಾಗತಿಕ ಮಾಧ್ಯಮಗಳು ಮಾಡಬಹುದು ಎಂಬ ನಿರೀಕ್ಷೆ ಹುಸಿಯಾಯಿತು. ಹೆಚ್ಚಿನವು ಅದನ್ನು ನಿರ್ಲಕ್ಷಿಸಿದರೆ, ಕೆಲವು 2050ರೊಳಗೆ ಒಟ್ಟು ಶೂನ್ಯ ಸೂಸುವಿಕೆ ಗುರಿಯ ಘೋಷಣೆಯನ್ನು ಮಾಡಿಲ್ಲ ಎಂದು ಟೀಕಿಸಿದವು. ಕೆಲವು ಮಾತ್ರ ಇವು ಭಾರೀ ಸೂಸುವಿಕೆ ಕಡಿತದ ಕ್ರಮಗಳು ಎಂದು ಮೆಚ್ಚಿದವು.

ಈ ಘೋಷಣೆ ಸಮ್ಮೇಳನದಲ್ಲಿ ಹೆಚ್ಚಿನ ಪರಿಣಾಮ ಬೀರಲಿಲ್ಲ. ಇದಕ್ಕೆ ಕಾರಣ ಅಂತರ್ರಾಷ್ಟ್ರೀಯ ನೀತಿಗಳ ಮೇಲೆ ಪರಿಣಾಮಕಾರಿ ಪ್ರಭಾವ 'ಗ್ರಾಂಡ್ ಸ್ಟೈಲ್' ಘೋಷಣೆಗಳಿಂದ ಸಾಧ್ಯವಿಲ್ಲ. ಗುರಿಗಳ ನೀತಿಗಳ ಸ್ಪಷ್ಟತೆ, ಸದ್ದಿಲ್ಲದರಾಯಭಾರದ ಮೂಲಕ ಸಂಬಂಧಿಸಿದ ಎಲ್ಲರಿಗೂ ಅದರ ಪರಿಣಾಮಕಾರಿಯಾದಸಂವಹನ ಇತ್ಯಾದಿಗಳ ಮೇಲೆ ಅದು ಅವಲಂಬಿಸಿರುತ್ತದೆ. ದೇಶೀಯ ಜನಮರುಳು ರಾಜಕಾರಣದ ತಂತ್ರಗಳು ಅಲ್ಲಿ ಕೆಲಸ ಮಾಡುವುದಿಲ್ಲ. ಈ ಭಾರೀ ಕಡಿತಗಳನ್ನು ಇಟ್ಟುಕೊಂಡು, ಭಾರತ ಮೂರನೆಯ ಜಗತ್ತಿನ ದೇಶಗಳ ಒಟ್ಟಾರೆ ಹಿತಾಸಕ್ತಿಗಳ ಹಕ್ಕೊತ್ತಾಯಗಳ ವಕ್ತಾರನಾಗಬೇಕಿತ್ತು. ಅಭಿವೃದ್ಧ ದೇಶಗಳ ಮೇಲೆ ಅವು ಓಆಅಗಳಲ್ಲಿ ಕೊಟ್ಟ ಕಡಿತಗಳನ್ನು ಇನ್ನಷ್ಟು ಹೆಚ್ಚಿಸಬೇಕು, ಮೂರನೆಯ ಜಗತ್ತಿನ ದೇಶಗಳಿಗೆ ಸೂಸುವಿಕೆ ಕಡಿತಕ್ಕೆ ತಂತ್ರಜ್ಞಾನ ಮತ್ತು ಹಣಕಾಸು ನೆರವನ್ನು ಕೊಡಬೇಕು ಎಂಬ ಷರತ್ತನ್ನು ಹಾಕಿದ್ದರೆ ಸಮ್ಮೇಳನದಲ್ಲಿ ಈ ಕುರಿತು ಚರ್ಚೆ ಎಬ್ಬಿಸುವ ಮೂಲಕ ನಿಜವಾದ 'ವಿಶ್ವಗುರು' ಪಾತ್ರ ವಹಿಸಬಹುದಿತ್ತು. ಇವ್ಯಾವುವನ್ನೂ ಮಾಡದೆ, ಆ ಮೇಲೆ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿ ಘೋಷಿತ ಗುರಿಗಳು ಭಾರತ ಸೇರಿದಂತೆ ಕೆಲವು ದೇಶಗಳ (ಅವು ಯಾವುವು ಎಂದು ಸ್ಪಷ್ಟ ಪಡಿಸದೆ) ಕೂಟ ಅಭಿವೃದ್ಧ ದೇಶಗಳಿಂದ 1 ಟ್ರಿಲಿಯನ್ (ಲಕ್ಷ ಕೋಟಿ) ಡಾಲರ್ ಧನಸಹಾಯದ ಮೇಲೆ ಷರತ್ತುಬದ್ಧವಾಗಿವೆ ಎಂದು ಪತ್ರಿಕಾಗೋಷ್ಠಿಗಳಲ್ಲಿ ಹೇಳಿದ್ದು ಅದರ ಪರಿಣಾಮಕಾರಿತನವನ್ನು ಇನ್ನಷ್ಟು ಕಡಿಮೆ ಮಾಡಿದವು.

ಮೋದಿ ಐದು ಗುರಿಗಳ ಕಾರ್ಯಸಾಧ್ಯತೆ

ಪ್ರಧಾನಿ ಅವರು ತಮ್ಮ ಭಾಷಣದಲ್ಲಿ ಘೋಷಣೆ ಮಾಡಿದ ಹವಾಮಾನ ಬದಲಾವಣೆ ತಡೆಯುವ ಭಾರತ ಕೈಗೊಳ್ಳಲಿರುವ ಸೂಸುವಿಕೆ ಕಡಿತದ ಐದು ಗುರಿಗಳು ಹೀಗಿವೆ (ಇವುಗಳಲ್ಲಿ ಅಂತಿಮವಾಗಿ NDCಯಲ್ಲಿ ಅಧಿಕೃತ ಬದ್ಧತೆಯಾಗಿ ಕೊಡುವಾಗ ಮತ್ತು ಕೆಲವು ವಿವರಗಳನ್ನು ಸ್ಪಷ್ಟಪಡಿಸಿದಾಗ ಕೆಲವು ಬದಲಾವಣೆಗಳಾಗಬಹುದು, ಆದರೆ ಭಾರೀ ವ್ಯತ್ಯಾಸಗಳ ಸಂಭವ ಕಡಿಮೆ):

1. ಸೂಸುವಿಕೆಯ ತೀವ್ರತೆ (ಜಿಡಿಪಿಯ ಘಟಕಕ್ಕೆ ತಲಾ ಸೂಸುವಿಕೆಯ ಪ್ರಮಾಣ) 2005ಕ್ಕೆ ಹೋಲಿಸಿದರೆ 2030ರ ಹೊತ್ತಿಗೆ 45% ರಷ್ಟು ಕಡಿತ (ಪ್ಯಾರೀಸ್ ಒಪ್ಪಂದದಲ್ಲಿ ಇದು 35% ಇತ್ತು)
2. (2030ರ ಹೊತ್ತಿಗೆ ಮಾಮೂಲಿ ಆರ್ಥಿಕ ಚಟುವಟಿಕೆಗಳಫಲವಾಗಿ ಬರಬಹುದಾದ)ಒಟ್ಟು ವಾರ್ಷಿಕ ಸೂಸುವಿಕೆಯಲ್ಲಿ 100 ಕೋಟಿ ಟನ್ ಕಡಿತ
3. ಇಂಧನ–ರಹಿತ ಮೂಲಗಳಿಂದ ಶಕ್ತಿ ಉತ್ಪಾಧನೆಯ ಸಾಮರ್ಥ್ಯವನ್ನು 2030ರ ಹೊತ್ತಿಗೆ 500 ಗಿಗಾ ವಾಟ್ ಗೆ ಏರಿಸುವುದು
4. ನವೀಕರಿಸಬಹುದಾದ ಮೂಲಗಳಿಂದ2030ರ ಹೊತ್ತಿಗೆ 50% ಶಕ್ತಿ ಉತ್ಪಾದನೆ
5. 2070ರ ಹೊತ್ತಿಗೆ ಶೂನ್ಯ ಸೂಸುವಿಕೆಯ ಸಾಧನೆ

ಈ ಗುರಿಗಳ ಕಾರ್ಯಸಾಧ್ಯತೆ ಬಗ್ಗೆ ಹೀಗೆ ಹೇಳಬಹುದು:


ಗುರಿ 1 ರ ಸಾಧನೆ ಅಷ್ಟೇನೂ ಕಷ್ಟ ಸಾಧ್ಯವಲ್ಲ. ಗುರಿ 2ರ ಬಗ್ಗೆ ಹಲವು ಸ್ಪಷ್ಟನೆಗಳು ಬೇಕಾಗಿವೆ. ಈಗ ವಾರ್ಷಿಕ ಸೂಸುವಿಕೆ 280 ಕೋಟಿ ಟನ್ ಇದ್ದು, ಈಗಿನ ಅಂದಾಜು ಪ್ರಕಾರ 2030ರ ಹೊತ್ತಿಗೆ ಮಾಮೂಲಿಯಾಗಿ 450 ಕೋಟಿ ಟನ್ ಸೂಸುವಿಕೆಯಾಗುತ್ತದೆ. ನೂರು ಟನ್ (ಅಂದರೆ ಸುಮಾರು ಶೇ.20) ಕಡಿತದ ಪರಿಣಾಮವಾಗಿ ಯಾವ ಆರ್ಥಿಕ ಚಟುವಟಿಕೆ ಕಡಿತವಾಗಬಹುದು, ಯಾವ ರೀತಿಯಲ್ಲಿ ಈ ಕಡಿತ ಅಭಿವೃದ್ಧಿ ಮೇಲೆ ಪರಿಣಾಮ ಬೀರಬಹುದು ಎಂಬುದರ ಕುರಿತು ಚಿಂತನೆ ನಡೆದಂತಿಲ್ಲ. ಗುರಿ 3 ಮತ್ತು 4 ರ ಕಾರ್ಯಸಾಧ್ಯತೆ ಮತ್ತು ಪರಿಣಾಮಗಳ ಕುರಿತು ಸಹ ತೀವ್ರ ಸಂದೇಹಗಳಿವೆ. ಗುರಿ 4ರಲ್ಲಿ ಹೇಳಿರುವುದು ಶಕ್ತಿ ಉತ್ಪಾಧನೆಯ ಸಾಮರ್ಥ್ಯ ಅಥವಾ ಶಕ್ತಿ ಉತ್ಪಾದನೆಯ ಪ್ರಮಾಣದ ಕುರಿತಾ ಎಂಬುದು ಸ್ಪಷ್ಟವಿಲ್ಲ. ಎರಡೂ ಸಂದರ್ಭದಲ್ಲಿ ಇನ್ನು ಮುಂದೆ ಯಾವುದೇ ಕಲ್ಲಿದ್ದಲು ಆಧಾರಿತ ಶಕ್ತಿ ಉತ್ಪಾದನೆ ಸ್ಥಾವರ ಸ್ಥಾಪಿಸುವುದಿಲ್ಲವೆಂದು ಅಂದುಕೊಂಡಂತಿದೆ. ಇದು ಕಾರ್ಯಸಾಧ್ಯವ್ವ, ಇದರ ಪರಿಣಾಮಗಳೇನು ಎಂಬುದು ಸ್ಪಷ್ಟವಿದ್ದಂತಿಲ್ಲ. ಇಂಧನ ಮೂಲಗಳಿಂದ ಸೂಸುವಿಕೆ ವಿದ್ಯುತ್ ಉತ್ಪಾದನೆಯಲ್ಲಿ ಮಾತ್ರ ಆಗುವುದಿಲ್ಲ. ವಾಹನಗಳಿಂದ ಸೂಸುವಿಕೆ ಕಡಿತ ಮಾಡಲು ಸಾರ್ವಜನಿಕ ಸಾರಿಗೆಯ ಯೋಜನೆಗಳನ್ನು ಹಾಕಲಾಗಿವೆಯೆ ಎಂಬುದು ಸ್ಪಷ್ಟವಿಲ್ಲ.

ಅರಣ್ಯನಾಶ, ಮೀಥೇನ್ ಶಪಥ: ಆತಂಕಕಾರಿ ಮೌನ

ಹವಾಮಾನ ಬದಲಾವಣೆಗೆ ಸಂಬಂಧಿಸಿದ ಎರಡು ವಿಷಯಗಳ ಕುರಿತು ಭಾರತದ ಮೌನ ಮಾತ್ರ ಭಾರೀ ಆತಂಕಕಾರಿಯಾಗಿದೆ. ಗ್ಲಾಸ್ಗೊದಲ್ಲಿ 110 ದೇಶಗಳು ಅರಣ್ಯನಾಶವನ್ನು 2030ರ ಹೊತ್ತಿಗೆ ನಿಲ್ಲಿಸುವ ಘೋಷಣೆಯಿಂದ ದೂರ ಉಳಿಯಿತು. ಪ್ರಧಾನಿ ಘೋಷಣೆ ಮತ್ತು ಭಾರತದ NDC ಎರಡೂ ಈ ಕುರಿತು ಮೌನವಾಗಿದೆ. ಇತ್ತೀಚಿನ ಅರಣ್ಯನಾಶದ ವಿರುದ್ಧ ಮತ್ತು ಪರಿಸರ ರಕ್ಷಣೆಯ ಕಾನೂನುಬದ್ಧ ನಿರ್ಬಂಧಗಳನ್ನು ಕಾರ್ಪೊರೆಟ್ ಹಿತಾಸಕ್ತಿಗಳ ಒತ್ತಡದಿಂದ ಕಿತ್ತು ಹಾಕಿರುವ ಜೊತೆ ನೋಡಿದರೆ, ಗ್ಲಾಸ್ಗೊದಲ್ಲೂ ಇದೇ ಶಕ್ತಿಗಳ ಪ್ರಭಾವವಿರುವುದನ್ನು ಕಾಣಬಹುದು. ಗ್ಲಾಸ್ಗೊದಲ್ಲಿ ನೂರಕ್ಕೂ ಹೆಚ್ಚು ದೇಶಗಳು ಸಹಿ ಹಾಕಿದ "ಜಾಗತಿಕ ಮೀಥೇನ್ ಶಪಥ"ಕ್ಕೂ ಭಾರತ ಸಹಿ ಹಾಕದಿರುವುದು ಸಹ ಆತಂಕಕಾರಿ. ಈ ಶಪಥದ ಪ್ರಕಾರ 2030ರ ಹೊತ್ತಿಗೆ ಹಸಿರುಮನೆ ಅನಿಲಗಳ ಸೂಸುವಿಕೆಯನ್ನು 2020ರ ಮಟ್ಟದಿಂದ 2030ರ ಹೊತ್ತಿಗೆ ಶೇ. 30 ರಷ್ಟು ಕಡಿತ ಮಾಡಬೇಕು. ಭಾರತದ ಹಸಿರುಮನೆ ಅನಿಲಗಳ ಸೂಸುವಿಕೆ ಹೆಚ್ಚುತ್ತಿದ್ದು ಈ ಮೌನ ಬಹಳ ಕರ್ಕಶವೆಂದೇ ಹೇಳಬೇಕು.

ಸೂಸುವಿಕೆ ಕಡಿತದ ಅಂತರ್ರಾಷ್ಟ್ರೀಯ ಬದ್ಧತೆಗಳು ಒಂದು ಕಡೆ, ಇನ್ನೊಂಧು ಕಡೆ ಆ ಕಡಿತಗಳನ್ನು ನಮ್ಮ ಅಗಾಧ ಅಸಮಾನತೆಗಳಿರುವ ಸಮಾಜ ವ್ಯವಸ್ಥೆಯಲ್ಲಿ ಪ್ರದೇಶವಾರು, ಕ್ಷೇತ್ರವಾರು, ಜನವಿಭಾಗವಾರು ಹೇಗೆ ಹಂಚಲಾಗುತ್ತದೆ ಎಂಬುದು ಮುಖ್ಯವಾಗುತ್ತದೆ. ಗ್ಲಾಸ್ಗೊದಲ್ಲಿ Infrastructure for Resilient Island States (IRIS) ಎಂಬ ಸಣ್ಣ ದ್ವೀಪರಾಷ್ಟ್ರಗಳಿಗೆ ಹವಾಮಾನ ಬದಲಾವಣೆ ಪರಿಹಾರಕ್ಕೆ ತಾಂತ್ರಿಕ, ಧನಸಹಾಯವನ್ನು ಅಭಿವೃದ್ಧ ದೇಶಗಳ ನೆರವಿನೊಂದಿಗೆ ಒದಗಿಸುವ ಯೋಜನೆಯನ್ನು ಭಾರತ ಘೋಷಿಸಿತು. ಇದು ಸ್ವಾಗತಾರ್ಹ. ಆದರೆ ಇಂತಹ ಕ್ರಮಗಳನ್ನು ಹವಾಮಾನ ಬದಲಾವಣೆಯಿಂದ ತೀವ್ರ ಪರಿಣಾಮಗಳಿಗೆ ಒಳಗಾಗಲಿರುವ ಸಾಗರ ತೀರದ ಪ್ರದೇಶಗಳು, ಸಣ್ಣ ದ್ವೀಪಗಳು, ನೆರೆ ಪೀಡಿತ ಪ್ರದೇಶಗಳಲ್ಲಿ ಸಹ ಇಂತಹ ಯೋಜನೆ ಅಗತ್ಯ ನಮ್ಮ ದೇಶದೊಳಗೆ ಇದೆ ಎಂಬುದೂ ಈವರೆಗೆ ಸರಕಾರದ ಗಮನಕ್ಕೆ ಬಂದಿಲ್ಲ.

ಕೊನೆಯದಾಗಿ ಪ್ರಧಾನಿಯವರ ಘೋಷಣೆಗಳಾಗಲಿ ಅಥವಾ "ರಾಷ್ಟ್ರೀಯವಾಗಿ ನಿರ್ಧಾರಿತ ಕೊಡುಗೆ"(NDC)ಗಳಾಗಲಿ ಪರಿಣತರ ತಂಡಗಳು, ಇದರ ಪರಿಣಾಮ ಅನುಭವಿಸಲಿರುವ ಜನವಿಭಾಗಗಳ ಸಂಘಟನೆಗಳು ಅಥವಾ ಪ್ರತಿನಿಧಿಗಳು, ರಾಜಕೀಯ ಪಕ್ಷಗಳು? ಇವರೆಲ್ಲರ ಜತೆ ಚರ್ಚೆಯ ನಂತರ ರೂಪಿಸಿದವುಗಳಲ್ಲ. ಇವು ಮುಂದೆಯಾದರೂ ನಿಜವಾಗಿಯೂ "ರಾಷ್ಟ್ರೀಯವಾಗಿ ನಿರ್ಧಾರಿತ" ವಾಗುವುದು ಎಂದು ಆಶಿಸಬಹುದಷ್ಟೆ.



JANASHAKTHI KANNADA VARA PATRIKE NOVEMBER 15-21, 2021 Price: Rs. 10/- Date of Publication: 12 NOVEMBER 2021 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21

ಬೆಲೆ ಏರಿಕೆಯ ವಿರುದ್ಧ, ಸರಕಾರಿ ಮೆಡಿಕಲ್ ಕಾಲೇಜಿಗಾಗಿ, ರೈತರ ಬೆಳೆಗೆ ಕನಿಷ್ಟ ಬೆಂಬಲ ಬೆಲೆ ನೀಡಲು ಒತ್ತಾಯ

23ನೇ ತಾಲೂಕು ಸಮ್ಮೇಳನ

ಇಂದು ಉಡುಪಿಯ ಸಾಯಿ ರೆಸಿಡೆನ್ಸಿ ಸಭಾಂಗಣದಲ್ಲಿ ಸೇರಿದ ಸಿ.ಪಿ.ಐ(ಎಂ) ಉಡುಪಿ ತಾಲುಕು 23ನೇ ಸಮ್ಮೇಳನವು ಏಳು ನಿರ್ಣಯಗಳನ್ನು ಸರ್ವಾನುಮತಿಯಿಂದ ಅಂಗೀಕರಿಸಿದ್ದು, ಅವುಗಳ ಈಡೇರಿಕೆಗಾಗಿ ಸ್ವತಂತ್ರವಾಗಿ ಮತ್ತು ಸಮಾನಮನಸ್ಕರೊಂದಿಗೆ ಸೇರಿ ಹೋರಾಟ ನಡೆಸಲು ನಿರ್ಧರಿಸಿದೆ. ಸಮೇಳನವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಬಾಲಕೃಷ್ಣ ಶೆಟ್ಟಿ ಉದ್ಘಾಟಿಸಿದ್ದು ರಾಜ್ಯ ಮುಖಂಡರಾದ ಶ್ರೀ ಕೆ. ಶಂಕರ್ ಮಾರ್ಗದರ್ಶನ ಮಾಡಿದರು. ಸಭೆಯ ಅಧ್ಯಕ್ಷತೆಯನ್ನು ಹಿರಿಯ ಮುಖಂಡರಾದ ಶ್ರೀ ಪಿ. ವಿಶ್ವನಾಥ ರೈ ವಹಿಸಿದ್ದರು. ಪ್ರಾರಂಭದಲ್ಲಿ ಸಿ.ಪಿ.ಐ(ಎಂ) ನ ಧ್ವಜವನ್ನು ಹಿರಿಯರಾದ ಶ್ರೀ ವಾದಿರಾಜ ಬುದ್ಯ ಇವರು ಅನಾವರಣಗೊಳಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು.

ಕಾರ್ಯದರ್ಶಿ ಮಂಡಿಸಿದ ವರದಿಯ ಮೇಲೆ ಏಳು ಮಂದಿ ಚರ್ಚೆಯಲ್ಲಿ ಭಾಗವಹಿಸಿದ್ದು ನಂತರ 9 ಸದಸ್ಯರ ತಾಲೂಕು ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು.

ಕಾರ್ಯದರ್ಶಿಯಾಗಿ ಶಶಿಧರ ಗೊಲ್ಲ ರನ್ನು ಆಯ್ಕೆ ಮಾಡಲಾಯಿತು. ಪಿ. ವಿಶ್ವನಾಥ ರೈ, ಉಮೇಶ್ ಕುಂದರ್, ಕೆ. ವಿಶ್ವನಾಥ, ಕವಿರಾಜ್ ಎಸ್, ನಳಿನಿ ಎಸ್., ಸರೋಜಾ, ಗಾಡ್ವಿನ್ ಫೆರ್ನಾಂಡಿಸ್, ರಾಮ ಕಾರ್ಕಡ.





ಉಡುಪಿಯಲ್ಲಿ ಸರಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಒತ್ತಾಯ

ಖಾಸಗಿ ವೈದ್ಯಕೀಯ ಸೇವೆಯು ಇಂದು ಉದ್ದಿಮೆಯಾಗಿದ್ದು ಬಡವರ ಕೈಗೆಟುಕದಂತ ಪರಿಸ್ಥಿತಿಯಿದೆ. ಕೊರೊನಾ ಸಂಕಷ್ಟ ಕಾಲದಲ್ಲಿ ಖಾಸಗಿ ಆಸ್ಪತ್ರೆಗಳು ಜನರಿಗೆ ಸೇವೆ ನೀಡುವ ಬದಲು ಜನರನ್ನು ದರೋಡೆ ಮಾಡಿರುವುದನ್ನು ನಾವು ಕಂಡಿದ್ದೇವೆ. ಜನ ತಮ್ಮವರನ್ನು ಕಳೆದುಕೊಂಡಿರುವುದು ಮಾತ್ರವಲ್ಲ ತಮ್ಮ ಜೀವಮಾನದ ಉಳಿತಾಯವನ್ನು ಕಳೆದುಕೊಂಡಿದ್ದಾರೆ ಮತ್ತು ತೀರಿಸಲಾರದಷ್ಟು ಸಾಲಗಾರರಾಗಿದ್ದಾರೆ.

ಉಡುಪಿಯು ಶೈಕ್ಷಣಿಕವಾಗಿ ಮುಂದುವರಿದಿದೆ. ಇಲ್ಲಿಯ ವಿದ್ಯಾರ್ಥಿಗಳು ಸಿ.ಇ.ಟಿ ಅಥವಾ ನೀಟ್ ಪರೀಕ್ಷೆಗಳನ್ನು ಬರೆದು ಪಾಸಾದರೂ ಉನ್ನತ ವ್ಯಾಸಂಗವಾದ ವೈದ್ಯಕೀಯ ಕ್ಷೇತ್ರ ಹತ್ತಿರ ಸುಳಿಯದಂತಹ ಪರಿಸ್ಥಿತಿಯಿದೆ. ಇಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳು ಸರಕಾರವನ್ನು ತನ್ನ ಹಿಡಿತದಲ್ಲಿರಿಸಿಕೊಂಡಿದೆ ಮತ್ತು ವಿಪರೀತ ಶುಲ್ಕ ವಿಧಿಸಲಾಗುತ್ತಿದೆ. ಇದರಿಂದಾಗಿ ಬಡ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಿದರೂ ಮೆಡಿಕಲ್ ಕಾಲೇಜುಗಳಿಗೆ ಸೇರುವುದು ಕಷ್ಟವಾಗುತ್ತಿದೆ.

ಅನೇಕ ಜಿಲ್ಲೆಗಳಲ್ಲಿ ಸರಕಾರಿ ಮೆಡಿಕಲ್ ಕಾಲೇಜು ಆರಂಭವಾಗಿದ್ದರೂ, ಉಡುಪಿ ಜಿಲ್ಲೆಗೆ ಆ ಭಾಗ್ಯ ಇನ್ನೂ ಒದಗಿಲ್ಲ. ಖಾಸಗಿ ಆಸ್ಪತ್ರೆ ಮತ್ತು ವಿದ್ಯಾ ಸಂಸ್ಥೆಗಳ ಒತ್ತಡಕ್ಕೆ ಮಣಿದು ಖಾಸಗಿ ಸಹಭಾಗಿತ್ವದಲ್ಲಿ(PPP) ಕಾಲೇಜು ಸ್ಥಾಪಿಸಲಾಗುವುದು ಎಂದು ಮಾನ್ಯ ಮುಖ್ಯ ಮಂತ್ರಿಗಳು ಸೇರಿದಂತೆ ಬಿ.ಜೆ.ಪಿ ಮುಖಂಡರು ಹೇಳುತ್ತಿದ್ದಾರೆ. ಪಿ.ಪಿ.ಪಿ. ಮಾದರಿಯು ಜನರ ಮತ್ತು ಸರಕಾರದ ನೆಲ, ಜಲವನ್ನು ಉಚಿತ ಅಥವಾ ಕಡಿಮೆ ಬೆಲೆಯಲ್ಲಿ ಪಡೆದು ಇಲ್ಲಿನ ಬಡ ವಿಭಾಗಕ್ಕೆ ಸೇರಿದ ಪ್ರತಿಭಾವಂತರು ಡಾಕ್ಟರುಗಳಾಗದಂತೆ ತಡೆಯುತ್ತದೆ. ಇಲ್ಲಿಯ ಜನರಿಗೆ ಉಚಿತ ವೈದ್ಯಕೀಯ ಸವಲತ್ತು ಒದಗಿಸಲು ಮತ್ತು ಇಲ್ಲಿಯ ವಿದ್ಯಾರ್ಥಿಗಳ ವೈದ್ಯಕೀಯ ವ್ಯಾಸಂಗಕ್ಕಾಗಿ ಉಡುಪಿ ಜಿಲ್ಲೆಯಲ್ಲಿ ಸರಕಾರಿ ವೈದ್ಯಕೀಯ ಕಾಲೇಜು ತೆರೆಯಬೇಕೆಂದು ಹಾಗೂ ಪಿ.ಪಿ.ಪಿ. ಮಾದರಿ ಬೇಡವೆಂದು ದಿನಾಂಕ 7 ನವೆಂಬರ್ 2021 ರಂದು ಉಡುಪಿಯಲ್ಲಿ ಸೇರಿದ ಸಿ.ಪಿ.ಐ(ಎಂ) ಉಡುಪಿ ತಾಲುಕು 23ನೇ ಸಮ್ಮೇಳನವು ಸರಕಾರವನ್ನು ಒತ್ತಾಯಿಸಿದೆ.

ಉಡುಪಿ ತಾಲೂಕಿಗೆ ವರಾಹಿ ನದಿಯ ನೀರನ್ನು ತರುವ ಕಾಮಗಾರಿಯನ್ನು
ತ್ವರಿತ ಗತಿಯಲ್ಲಿ ನಡೆಸಲು ಒತ್ತಾಯ

ಉಡುಪಿ ನಗರಕ್ಕೆ ಕುಡಿಯುವ ನೀರನ್ನು ಸರಬರಾಜು ಮಾಡಲು ವರಾಹಿ ನದಿಯಿಂದ ಪೈಪ್ ಲೈನ್ ಮುಖಾಂತರ ನೀರು ತರುವ ರೂಪಾಯಿ 300 ಕೋಟಿ ಯೋಜನೆಯ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಬೇಕೆಂದು ಸಿ.ಪಿ.ಐ.(ಎಂ) ಉಡುಪಿ ತಾಲುಕು ಸಮ್ಮೇಳನವು ಜಿಲ್ಲಾಡಳಿತ ಮತ್ತು ಉಡುಪಿ ನಗರ ಆಡಳಿತವನ್ನು ಒತ್ತಾಯಿಸುತ್ತದೆ. ಈ ಯೋಜನೆಯು 2022 ರ ಒಳಗೆ ಪೂರ್ಣಗೊಳಿಸಬೇಕೆಂದು ತಿಳಿಸಲಾಗಿತ್ತು. ಆದರೆ ಈಗ ನಡೆಯುತ್ತಿರುವ ಕಾಮಗಾರಿಯನ್ನು ಗಮನಿಸಿದರೆ ನಿಗದಿತ ಕಾಲದಲ್ಲಿ ಪೂರ್ಣಗೊಳ್ಳುವ ಸಂಭವ ಕಡಿಮೆ ಇದೆ. ಕಾಮಗಾರಿ ವಿಳಂಭವಾದಲ್ಲಿ ವೆಚ್ಚ ಹೆಚ್ಚುವುದು ಮಾತ್ರವಲ್ಲದೆ ನಗರದ ಜನತೆ ಕುಡಿಯುವ ನೀರಿಗಾಗಿ ಬಳಲುವಂತಾಗುತ್ತದೆ.

ಈ ಯೋಜನೆಯ ಪ್ರಕಾರ ದಾರಿಯಲ್ಲಿ ಹಾಲಾಡಿ ಶುದ್ದೀಕರಣ ಕೇಂದ್ರದಿಂದ ಉಡುಪಿಯ ವರೆಗೆ 13 ಗ್ರಾಮ ಪಂಚಾಯತುಗಳ ವ್ಯಾಪ್ತಿ ಪ್ರದೇಶಗಳಿಗೂ ಕುಡಿಯುವ ನೀರನ್ನು ಒದಗಿಸಲಾಗುತ್ತದೆ. ಇದಕ್ಕೆ ಜಿಲ್ಲಾಡಳಿತ ತೀವ್ರ ಗಮನ ನೀಡದಿದ್ದಲ್ಲಿ ಇದು ಕೂಡಾ ವರಾಹಿ ಯೋಜನೆಯಂತೆ ಇನ್ನೊಂದು ಬಿಳಿಯಾನೆಯಾಗುವ ಸಂಭವವಿದೆ ಹಾಗೂ ಸರಕಾರೀ ಹಣದ ದುರುಪಯೋಗವಾಗುತ್ತದೆ.

ದಿನಾಂಕ 7 ನವೆಂಬರ್ 2021 ರಂದು ಉಡುಪಿಯಲ್ಲಿ ಸೇರಿದ ಸಿ.ಪಿ.ಐ(ಎಂ) ಉಡುಪಿ ತಾಲುಕು 23ನೇ ಸಮ್ಮೇಳನವು ವರಾಹಿ ನದಿಯ ನೀರನ್ನು ಉಡುಪಿ ತಾಲೂಕಿಗೆ ಕುಡಿಯುವ ನೀರಿಗಾಗಿ ತರುವ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಪೂರ್ಣಗೊಳಿಸಬೇಕೆಂದು ಜಿಲ್ಲಾಡಳಿತ, ಜನಪ್ರತಿನಿಧಿಗಳು ಮತ್ತು ಉಡುಪಿ ನಗರ ಸಭೆಯ ಆಡಳಿತವನ್ನು ಒತ್ತಾಯಿಸಿದೆ.

ನಿರ್ಣಯಗಳು

1. ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ.
2. ಕಾರ್ಪೋರೇಟ್ ಕಂಪೆನಿಗಳ ಪರವಾದ ಕಾಯಿದೆಗಳನ್ನು ವಾಪಸ್ಸು ಪಡೆಯಲು ಒತ್ತಾಯ.
3. ಉಡುಪಿಯಲ್ಲಿ ಸರಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಒತ್ತಾಯ.
4. ವಸತಿರಹಿತರಿಗೆ ನಿವೇಶನ ನೀಡಲು ಒತ್ತಾಯಿಸಿ.
5. ಉಡುಪಿಯಲ್ಲಿ ಸರಕಾರಿ ಬಸ್‌ಗಳನ್ನು ಹೆಚ್ಚಿಸಲು ಒತ್ತಾಯ.
6. ಉಡುಪಿ ತಾಲೂಕಿಗೆ ವರಾಹಿ ನದಿಯ ನೀರನ್ನು ತರುವ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ನಡೆಸಲು ಒತ್ತಾಯ.
7. ರೈತರ ಹೋರಾಟವನ್ನು ಬೆಂಬಲಿಸಿ ಹಾಗೂ ಕಾರ್ಮಿಕ ಕಾಯ್ದೆಗಳನ್ನು ಮಾಲಿಕರ ಪರ ಬದಲಾವಣೆ ಮಾಡಿರುವುದನ್ನು ವಿರೋಧಿಸಿ.

ಸಿಪಿಐ(ಎಂ)ನ ಕೆ.ಜಿ.ಎಫ್. ತಾಲ್ಲೂಕು 23ನೇ ಸಮ್ಮೇಳನ

ಸಿಪಿಐ(ಎಂ)ನ ಕೆ.ಜಿ.ಎಫ್. ತಾಲ್ಲೂಕು 23ನೇ ಸಮ್ಮೇಳನವು 7 ನವೆಂಬರ್ 2021 ರಂದು ಕೆ.ಜಿ.ಎಫ್ ನಲ್ಲಿ ಯಶಸ್ವಿಯಾಗಿ ನಡೆದಿದೆ. ಪಕ್ಷದ ರಾಜ್ಯ ಕೇಂದ್ರದ ಸದಸ್ಯರಾದ ಕಾಂ. ಮೀನಾಕ್ಷಿ ಸುಂದರಂ ಬಹಿರಂಗ ಅಧಿವೇಶನವನ್ನು ಉದ್ಘಾಟಿಸಿದರು. ಜಿಲ್ಲಾ ಕಾರ್ಯದರ್ಶಿ ಕಾಂ. ಪಿ. ಶ್ರೀನಿವಾಸ್, ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಗಾಂಧಿನಗರ್ ನಾರಾಯಣ ಸ್ವಾಮಿ, ಎ.ಆರ್. ಬಾಬು, ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಜಿ. ಅರ್ಜುನನ್ ಉಪಸ್ಥಿತರಿದ್ದರು.

ಕಾಂ. ಪಿ. ತಂಗರಾಜ್ ತಾಲ್ಲೂಕು ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಪುನರಾಯ್ಕೆಯಾದರು.





JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and
Printed at : Kriya Prakashana, No. 12, 18th Cross, Sampangirama Nagar, Bangalore 560027
Editor : **NITYANANDASWAMI**